Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 | ಸಂಚಿಕೆ–48 | ನವೆಂಬರ್ 27–ಡಿಸೆಂಬರ್ 3, 2023 | ಪುಟ 16 | ರೂ. 10/–
Volume-17 | Issue-48 | November 27-December 3, 2023 | Pages:16 | Price: 10/-



ಕಾರ್ಪೋರೇಟ್-ಹಿಂದುತ್ವ ಕೂಟದ ದುರಾಡಳಿತಕ್ಕೆ

ಜನ ಚಳುವಳಿಗಳ ಐತಿಹಾಸಿಕ ಪ್ರತಿರೋಧ

ರಾಜಧಾನಿಯಲ್ಲಿ ನೆರೆದಿದೆ ಜನರ ನೋವುಗಳ ಜ್ವಾಲೆ

ಮಹಾಧರಣಿ: ವಿಶೇಷ ಲೇಖನಗಳು

ಪ್ಯಾಲೆಸ್ತೇನಿಯರಿಗೆ ವ್ಯಕ್ತವಾಗಲಿ ಭಾರತದ ಜನತೆಯ ಬೆಂಬಲ

ಬಿಜೆಪಿ: ಬಣಗಳ ಬೆಂಕಿಯ ನಡುವೆ ಭವಿಷ್ಯದ ಹುಡುಕಾಟ!



ಚಳುವಳಿಗಳಿಗೆ ಹೊಸ ಸ್ಫೂರ್ತಿ ನೀಡಿದ ದೆಹಲಿ ಗಡಿಗಳ ಐತಿಹಾಸಿಕ ರೈತ ಹೋರಾಟದ ನೆನಪು

ಎಚ್.ಆರ್. ನವೀನ್ ಕುಮಾರ್,
ಹಾಸನ, (ಲೇಖಕರು ದೆಹಲಿ ರೈತ ಚಳುವಳಿಯ ಅನುಭವ ಕುರಿತಾದ "ಕದನ ಕಣ" ದೆಹಲಿ ಗಡಿಗಳಲ್ಲಿ ರೈತರಿಂದಿಗೆ ಎಂಬ ಕೃತಿಯನ್ನು ರಚಿಸಿದ್ದಾರೆ.)

ನಾವು ಎತ್ತುತ್ತಿರುವ ಪ್ರಶ್ನೆಗಳ ಕುರಿತು ಸರಿಯಾದ ತಿಳುವಳಿಕೆ ಮತ್ತು ಅದನ್ನು ಸಾಧಿಸಿಕೊಳ್ಳುವ ಬದ್ಧತೆ, ಎದುರಾಳಿ ಪ್ರಭಲವಾಗಿರುವಾಗ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಎಲ್ಲ ಮಿತ್ರರನ್ನೂ ಒಳಗೊಳ್ಳುವ, ಆ ಮೂಲಕ "ಒಗ್ಗಟ್ಟಿನಲ್ಲಿ ಬಲವಿದೆ" ಎಂಬುದನ್ನು ತೋರಿಸುವುದು, ಬೇಡಿಕೆ ಈಡೇರಿಸಿಕೊಳ್ಳಲು ಎಂತಹ ತ್ಯಾಗಕ್ಕಾದರೂ ಸಿದ್ದ, ಅದರಿಂದ ದೇಶ, ಕೃಷಿ ಮತ್ತು ರೈತ ಸಂಕುಲ ಉಳಿಯುತ್ತದೆ ಎಂಬ ದೃಢ ವಿಶ್ವಾಸ ದೆಹಲಿ ರೈತ ಚಳುವಳಿಯ ಮೂಲಕ ಜಗತ್ತಿಗೆ ತುಂಬ ಸ್ಪಷ್ಟವಾಗಿ ಅರ್ಥವಾಗಿದೆ. ಈ ಅನುಭವಗಳಿಂದ ಇಡೀ ಜಗತ್ತಿನ ಚಳುವಳಿಗಳು ಪಾಠ ಕಲಿಯಬೇಕಿದೆ. ಆ ಮೂಲಕ ಜನ ವಿರೋಧಿ ಆಳುವ ವರ್ಗದ ನೀತಿಗಳ ವಿರುದ್ಧ ಜನ ಚಳುವಳಿಯನ್ನು ಬಲಪಡಿಸಬೇಕಾದ ತುರ್ತು ಅಗತ್ಯವಿದೆ.

ಜಗತ್ತಿನ ಗಮನ ಸೆಳೆದು, ನಿರಂತರವಾಗಿ ಹದಿಮೂರು ತಿಂಗಳುಗಳ ಕಾಲ ಮುನ್ನಡೆದು ಯಶಸ್ವಿಯಾದ ದೆಹಲಿಯ ಗಡಿಭಾಗಗಳಲ್ಲಿ ನಡೆದ ದೇಶದ ರೈತ ಚಳುವಳಿ ಈಗ ಮೂರು ವರ್ಷಗಳ ನೆನಪು. ಇತಿಹಾಸದಲ್ಲಿ ಅಚ್ಚಳಿಯದ ಛಾಪನ್ನು ಮೂಡಿಸಿದ ಈ ಹೋರಾಟ 2020 ನವೆಂಬರ್ 26 ರಂದು ದೆಹಲಿಗೆ ಪ್ರವೇಶ ಪಡೆಯುವ ರಾಷ್ಟ್ರೀಯ ಹೆದ್ದಾರಿಗಳ ಗಡಿಗಳಲ್ಲಿ ಪ್ರಾರಂಭವಾಯಿತು. ಈ ರೈತ ಚಳುವಳಿ 2021 ಡಿಸೆಂಬರ್ 11 ರಂದು ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ಮಾಡುವ ಮೂಲಕ ಜಯವನ್ನು ಗಳಿಸಿದೆ.

ಜೂನ್ 2020 ರಲ್ಲಿ ಸುಗ್ರೀವಾಜ್ಞೆಯ ಮೂಲಕ ತಂದ, ನಂತರ ಸೆಪ್ಟಂಬರ್ 2020 ರಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಣಕಿಸುವ ರೀತಿಯಲ್ಲಿ ಸಂಸತ್ತಿನಲ್ಲಿ ಚರ್ಚಿಸದೇ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು. ಸತತ 13 ತಿಂಗಳ ಧೀರೋದ್ದಾತ ಹೋರಾಟಕ್ಕೆ ಮಣಿದ ಒಕ್ಕೂಟ ಸರ್ಕಾರ "ಈ ಕಾಯ್ದೆಯನ್ನು ರೈತರಿಗೆ ಅರ್ಥ ಮಾಡಿಸುವಲ್ಲಿ ನಾವು ಸೋತಿದ್ದೇವೆ" ಎಂದು ಹೇಳುವ ಮೂಲಕ ಮತ್ತೆ ಯಾವುದೇ ರೀತಿಯ ಚರ್ಚೆಗೂ ಅವಕಾಶವನ್ನು ಕಲ್ಪಿಸದೆ, ಸಂಸತ್ತಿನಲ್ಲಿ ಮೂರೂ ಕೃಷಿ ಕಾಯ್ದೆಗಳನ್ನು ಕೆಲವೇ ನಿಮಿಷಗಳಲ್ಲಿ ವಾಪಸ್ ಪಡೆಯಿತು. ಇಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶವೇನೆಂದರೆ, ಈ ಚಳುವಳಿ ಪ್ರಾರಂಭವಾದಾಗ ಇದೇ ಸರ್ಕಾರದ ಪ್ರತಿನಿಧಿಗಳು 'ಚಳುವಳಿ ನಡೆಸುತ್ತಿರುವವರು ರೈತರೇ ಅಲ್ಲಾ' ಎಂದಿದ್ದರು. ಈಗ 'ಕಾಯ್ದೆಗಳ ಕುರಿತು ರೈತರಿಗೆ ಅರ್ಥಮಾಡಿಸುವಲ್ಲಿ ನಾವು ಸೋತಿದ್ದೇವೆ' ಎನ್ನುವ ಮೂಲಕ ಚಳುವಳಿ ನಡೆಸಿದವರು "ರೈತರು" ಎಂಬುದನ್ನು ಆಳುವ ಸರ್ಕಾರ ಒಪ್ಪಿಕೊಂಡಿತು. ಇದು ಈ ಚಳುವಳಿಯ ಸಾಧನೆಗಳಲ್ಲಿ ಒಂದಾದರೆ, ಸಂಸದರ ಬಲದಿಂದ ಸಂಸತ್ತಿನಲ್ಲಿ ಸೋಲಿಸಲಾಗದ, ನ್ಯಾಯಾಲಯಗಳ ಮೂಲಕ ಸೋಲಿಸಲಾಗದ, ಬೇರಾವ ದಾರಿಗಳ ಮೂಲಕವೂ ಸೋಲಿಸಲಾಗದ ಮೂರು ಕೃಷಿ ಕಾನೂನುಗಳನ್ನು ಒಂದು ಪ್ರಭಲ ಕೇಂದ್ರ ಸರ್ಕಾರವನ್ನು ಎದುರಾಕಿಕೊಂಡು 'ಬೀದಿ ಚಳುವಳಿ' ಮೂಲಕ ಮಣಿಸಲು ಸಾಧ್ಯವಾಯಿತು. ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಮಾಡಲು ಸಾಧ್ಯ ಎಂದು ಜಗತ್ತಿಗೆ ತೋರಿಸಿಕೊಟ್ಟದ್ದು ಈ ರೈತ ಚಳುವಳಿಯ ದೊಡ್ಡ ಸಾಧನೆ.

ಈ ರೈತ ಚಳುವಳಿ ಹಲವು ರೀತಿಯ ಸಾಧನೆಗಳನ್ನು ಮಾಡುವ ಮೂಲಕ ಚಳುವಳಿಯ ಇತಿಹಾಸದಲ್ಲೇ ಹೊಸ ರೀತಿಯ ಮಾದರಿಗಳನ್ನು ಹುಟ್ಟು ಹಾಕಿದೆ. ಕೆಲವು ಚಿಂತಕರು ವಿಶ್ಲೇಷಿಸುವ ರೀತಿಯಲ್ಲಿ ಇದು ಜಗತ್ತಿಗೆ ಶಾಂತಿ, ತಾಳ್ಮೆ ಮತ್ತು ಒಗ್ಗಟ್ಟಿನ ಗೆಲುವಿನ ಪಾಠವನ್ನು ಕಲಿಸಿದೆ. ಮಾತ್ರವಲ್ಲ, ನಾಡಿನ ಚಿಂತಕರಾದ ಮತ್ತು ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿದ್ದ ಪ್ರೊ. ಪುರುಷೋತ್ತಮ ಬಿಳಿಮಲೆಯವರು ಹೇಳಿರುವಂತೆ "ಈ ಚಳುವಳಿಯು ಅತ್ಯಂತ ದೊಡ್ಡ ಬಯಲು ವಿಶ್ವವಿದ್ಯಾಲಯವಾಗಿದ್ದು, ಇಲ್ಲಿ ಪ್ರತಿ ದಿನ ಕಲಿಯಲು ವಿದ್ಯಾರ್ಥಿಗಳಾಗಿ ಸಾವಿರಾರು ಜನ ಬರುತ್ತಿದ್ದಾರೆ". ಮಳೆ ನಿಂತರೂ ಮರದ ಹನಿ ನಿಲ್ಲುವುದಿಲ್ಲ ಎಂಬ ಮಾತಿನಂತೆ ದೆಹಲಿಯ ಗಡಿಭಾಗಗಳಲ್ಲಿ ಚಳುವಳಿ ನಿಂತಿದ್ದರೂ ಅದರ ಪ್ರಭಾವ, ಅದು ಹುಟ್ಟುಹಾಕಿದ ಮಾದರಿಗಳ ಕುರಿತು ದೇಶ ಮತ್ತು ಜಗತ್ತಿನಾದ್ಯಂತ ಚಳುವಳಿಗಳನ್ನು ಬೆಂಬಲಿಸುವವರು ಮತ್ತು ವಿರೋಧಿಗಳು ಇಬ್ಬರೂ ಈಗಲೂ ನಿರಂತರ ಚರ್ಚೆ ಮತ್ತು ಅಧ್ಯಯನದಲ್ಲಿ ತೊಡಗಿದ್ದಾರೆ.



ದೆಹಲಿ ಗಡಿಗಳಲ್ಲಿ ಐತಿಹಾಸಿಕ ರೈತ ಚಳುವಳಿ ತಾತ್ಕಾಲಿಕ ಬೇಡಿಕೆಗಳ ಈಡೇರಿಕೆಗಾಗಿ ನಡೆದ ಹೋರಾಟವಲ್ಲ (ಕಾರ್ಖಾನೆಗಳಲ್ಲಿ ಕಾರ್ಮಿಕರು ಸಂಬಳ, ಸೌಲಭ್ಯಗಳಿಗಾಗಿಯೋ ಅಥವಾ ರೈತರು ತಾವು ಬೆಳೆದ ಬೆಳೆಗೆ ಸ್ವಲ್ಪ ಹೆಚ್ಚಿನ ಬೆಲೆ ಕೊಡಿ ಎನ್ನುವ ರೀತಿಯ ಹೋರಾಟವಲ್ಲ) ಅದು ಈ ದೇಶದ ಕೃಷಿ ಕ್ಷೇತ್ರವನ್ನ ಮತ್ತು ದೊಡ್ಡ ಸಂಖ್ಯೆಯ ರೈತಾಪಿ ವರ್ಗವನ್ನ ಆ ಮೂಲಕ ಇಡೀ ದೇಶವನ್ನೇ ಉಳಿಸುವ ಹೋರಾಟವಾಗಿತ್ತು. ಇದು ನಿಜವಾದ ಅರ್ಥದಲ್ಲಿ "ಸಾಮ್ರಾಜ್ಯಶಾಹಿಯ ಮೇಲೆ ರೈತರ ವಿಜಯ" ಎಂದು ದೇಶದ ಪ್ರಸಿದ್ಧ ರಾಜಕೀಯ ಅರ್ಥಶಾಸ್ತ್ರಜ್ಞರಾದ ಪ್ರೊ. ಪ್ರಭಾತ್ ಪಟ್ನಾಯಕ್ ರವರು ವಿಶ್ಲೇಶಿಸಿದ್ದಾರೆ.

ಈ ಚಳುವಳಿ ಕೇವಲ ಒಂದು ವರ್ಷದ ಹಿಂದೆ ಪ್ರಾರಂಭವಾದದ್ದಲ್ಲ, ಇದಕ್ಕೆ ತನ್ನದೇ ಆದ ಇತಿಹಾಸವಿದೆ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ 2014 ರಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಾಗ ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆಗಳಿಗಾಗಿ ರೈತರ ಸಾವಿರಾರು ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದ "ಭೂಸ್ವಾಧೀನ ಕಾಯ್ದೆ ತಿದ್ದುಪಡಿ" ಕಾನೂನನ್ನು ವಿರೋಧಿಸಿ "ಭೂಮಿ ಅಧಿಕಾರ್ ಆಂದೋಲನ್" ಎಂಬ ಹೆಸರಿನಲ್ಲಿ, ದೇಶಾದ್ಯಂತ ರೈತರ ಭೂಮಿ ಉಳಿಸಲು 300 ಕ್ಕೂ ಹೆಚ್ಚು ರೈತ ಸಂಘಟನೆಗಳ ಜಂಟಿ ಚಳುವಳಿ ಆರಂಭವಾಗಿತ್ತು. ಈ ಚಳುವಳಿಯ ಮುಂದುವರೆದ ಭಾಗವಾಗಿ ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟ ಕೃಷಿ ಕಾಯ್ದೆಗಳ ಮುನ್ಸೂಚನೆ ಮತ್ತು ಈ ಪ್ರದೇಶದ ಗೋಧಿಯನ್ನು ಖರೀದಿಸಿ, ಅದನ್ನು ಶೇಖರಿಸಿಡಲು ಅಧಾನಿ ಕಂಪನಿ ನಿರ್ಮಿಸುತ್ತಿದ್ದ ಬೃಹದಾಕಾರದ ಗೋದಾಮುಗಳನ್ನು ನೋಡಿ ದಿಗ್ಭ್ರಾಂತರಾದ ರೈತ ಸಮುದಾಯ, ದೆಹಲಿ ಚಳುವಳಿ ಪ್ರಾರಂಭವಾಗುವ ಒಂದು ವರ್ಷ ಮೊದಲೇ ಪಂಜಾಬ್ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆಗಳನ್ನು ನಡೆಸಿತ್ತು.

ಮಹಾನ್ ತತ್ವಶಾಸ್ತ್ರಜ್ಞ ಕಾರ್ಲ್ ಮಾರ್ಕ್ಸ್ ಒಂದು ಕಡೆ ಹೀಗೆ ಹೇಳುತ್ತಾರೆ. "ತತ್ವವು ಜನಮನವನ್ನು ಆವರಿಸಿಕೊಂಡಾಗ, ಅದೊಂದು ಭೌತಿಕ ಶಕ್ತಿಯಾಗಿ ಮಾರ್ಪಾಡಾಗುತ್ತದೆ". ಈ ರೈತ ಚಳುವಳಿಯಲ್ಲಿ ಆದದ್ದೂ ಅದೇ.


ನಂತರ ಕೇಂದ್ರ ಸರ್ಕಾರ ಜೂನ್ 2020 ರಲ್ಲಿ ಈ ಕಾಯ್ದೆಗಳ ಕುರಿತು ಸುಗ್ರೀವಾಜ್ಞೆ ಹೊರಡಿಸಿದ ಮೇಲೆ ರೈತರು ತಮ್ಮ ಅಹವಾಲುಗಳನ್ನು ಕೇಂದ್ರ ಸರ್ಕಾರಕ್ಕೆ ತಲುಪಿಸಲು ದೆಹಲಿ ಕಡೆಗೆ ತಮ್ಮ ಹೆಜ್ಜೆಗಳನ್ನಾಕಿದರು. ಅದೇ ಸಂದರ್ಭದಲ್ಲಿ ಇಡೀ ಎಐಕೆಸಿಸಿ (ಆಲ್ ಇಂಡಿಯಾ ಕಿಸಾನ್ ಕೋರ್ಡಿನೇಷನ್ ಕಮಿಟಿ) ದೇಶಾದ್ಯಂತ ವಿವಿಧ ಭಾಗಗಳಿಂದ ಕೇಂದ್ರದ ಈ ನೀತಿಗಳನ್ನು ವಿರೋಧಿಸಿ ಜಾಥಾಗಳನ್ನು ಸಂಘಟಿಸಿತ್ತು. ಆ ಜಾಥಾಗಳು 2020 ನವೆಂಬರ್ 26 ರಂದು ದೆಹಲಿಗೆ ತಲುಪುವಂತೆ ಯೋಜನೆ ರೂಪಿಸಲಾಗಿತ್ತು. ದೆಹಲಿಯ ಗಡಿಗಳಿಗೆ ರೈತರು ತಲುಪುತ್ತಿದ್ದಂತೆ ಅವರನ್ನು 5 ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪೊಲೀಸ್ ಮತ್ತು ಪ್ಯಾರಾ ಮಿಲಿಟರಿ ಪಡೆಗಳನ್ನು ಬಳಸಿ ರೈತರ ಮೇಲೆ ದೌರ್ಜನ್ಯ ನಡೆಸಿ, ಲಾಠಿ ಚಾರ್ಜ ಮಾಡಿ, ಜಲಫಿರಂಗಿ, ಅಶ್ರುವಾಯುಗಳನ್ನು ಸಿಡಿಸಿ ರೈತರನ್ನು ಓಡಿಸಲು ಆಳುವ ಸರ್ಕಾರ ಸತತ ಪ್ರಯತ್ನ ಪಟ್ಟಿತು. ಆದರೆ ರೈತರು ಬೇಡಿಕೆ ಈಡೇರಿಸಿಕೊಂಡೇ ಜೀವಂತವಾಗಿ ವಾಪಸ್ ಹೋಗುತ್ತೇವೆ, ಇಲ್ಲದಿದ್ದರೆ 'ಕದನ ಕಣ'ದಲ್ಲೇ ಪ್ರಾಣ ಅರ್ಪಿಸುತ್ತೇವೆ ಎಂಬ ದೃಢ ನಿರ್ಧಾರದೊಂದಿಗೆ ರೈತರು ಚಳುವಳಿಗೆ ದುಮುಕಿದ್ದರು. ಅವರ ಈ ವಿಶ್ವಾಸ ಮತ್ತು ಚಳುವಳಿ ಎಂದರೆ ಕೇವಲ ಅದು ಸಾಂಕೇತಿಕವಾಗಿರದೆ, ಅಂದುಕೊಂಡದ್ದನ್ನು ಎಂತಹದ್ದೇ ಬೆಲೆ ತೆತ್ತಾದರೂ, ತ್ಯಾಗ ಮಾಡಿಯಾದರೂ ಪಡೆದುಕೊಳ್ಳುತ್ತೇವೆಂಬ ಅವರ ಕಿಚ್ಚು ಮತ್ತು ಒಗ್ಗಟ್ಟು ಜಗತ್ತಿನಾದ್ಯಂತ ಆಳುವ ಪ್ರಭುತ್ವದ ವಿರುದ್ಧ ಚಳುವಳಿಗೆ ದುಮುಕಿರುವ ಪ್ರತಿಯೊಬ್ಬರೂ ಕಡ್ಡಾಯವಾಗಿ ಕಲಿಯಬೇಕಾದ ಪಾಠ. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ಪ್ರಾಣಗಳನ್ನೇ ಅರ್ಪಿಸಿದ ಕ್ರಾಂತಿಕಾರಿಗಳ ತ್ಯಾಗ ಮತ್ತು ಬದ್ದತೆ ನೆನಪಾಗುತ್ತದೆ. ಇಂತಹ ಚಳುವಳಿ ಯಶಸ್ವಿಯಾಗಲು 750 ಮಂದಿ ರೈತ ಹೋರಾಟಗಾರರು ತಮ್ಮ ಪ್ರಾಣಗಳನ್ನು ತ್ಯಾಗಮಾಡಿದ್ದಾರೆ. ಈ ಚಳುವಳಿಯಲ್ಲಿ ಭಾಗವಹಿಸಿದವರು "ಮಾಡು ಇಲ್ಲವೇ ಮಡಿ" ಎಂಬಂತೆ ಚಳುವಳಿಯನ್ನು ಸ್ವೀಕರಿಸಿದ್ದರು.

ತಮ್ಮ ಪ್ರಾಣ ಹೋದರೂ ಪರವಾಗಿಲ್ಲ, ಈ ಕೃಷಿ ಕಾಯ್ದೆಗಳು ವಾಪಸ್ ಮಾಡಿಯೇ ನಾವು ತೆರಳುತ್ತೇವೆ ಎನ್ನುವಷ್ಟು ಈ ಕಾಯ್ದೆಗಳ ಬಗ್ಗೆ ಪಂಜಾಬ್, ಹರಿಯಾಣ, ಮತ್ತು ಉತ್ತರ ಪ್ರದೇಶ ರಾಜ್ಯದ ರೈತರಿಗೆ ಬಲವಾಗಿ ಅನಿಸಲು ಕೆಲವು ಕಾರಣಗಳಿವೆ. ಮೊದಲನೆಯದಾಗಿ, ಈ ಭಾಗದ ಬಹುತೇಕ ರೈತರು ಬೆಳೆಯುವುದು ಗೋಧಿ ಮತ್ತು ಭತ್ತವನ್ನ, ಈ ಗೋಧಿ, ಭತ್ತವನ್ನ ಸರ್ಕಾರಿ ಎಪಿಎಂಸಿಗಳ ಮೂಲಕವೇ ಬೆಂಬಲ ಬೆಲೆಯಲ್ಲಿ ಎಲ್ಲವನ್ನೂ ಮಾರಾಟ ಮಾಡಲಾಗುತ್ತದೆ. ಒಮ್ಮೆ ಈ ಕೃಷಿ ಕಾಯ್ದೆಗಳ ಮೂಲಕ ಸರ್ಕಾರಿ ಎಪಿಎಂಸಿಗಳು ದುರ್ಬಲವಾಗಿ ಖಾಸಗೀ ಮಾರುಕಟ್ಟೆ ಪ್ರಾಭಲ್ಯವನ್ನು ಮೆರೆದರೆ ತಮ್ಮ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಸಿಗುವುದಿಲ್ಲ ಎಂಬುದು ರೈತರಿಗೆ ಖಾತ್ರಿಯಾಗಿತ್ತು. ಅದೇ ರೀತಿಯಲ್ಲಿ ರೈತ ಸಂಘಟನೆಗಳು ತಮ್ಮ ಸಂಘಟನಾ ಜಾಲವನ್ನು ಬಳಸಿ ಹಳ್ಳಿ ಹಳ್ಳಿಗಳಲ್ಲಿ ಈ ಕಾಯ್ದೆಗಳ ಕರಾಳತೆಯನ್ನು ರೈತ ಸಮುದಾಯಕ್ಕೆ ಅರ್ಥ ಮಾಡಿಸುವ ಕೆಲಸವನ್ನು ಮಾಡಿದ್ದವು.

ಈ ಕಾಯ್ದೆಗಳು ಜಾರಿಯಾದರೆ ನಾವುಗಳು ನೆಮ್ಮದಿಯಿಂದ ಕೃಷಿ ಮಾಡಿ ಬದುಕಲು ಸಾಧ್ಯವಿಲ್ಲ ಎನ್ನುವುದು ತಿಳುವಳಿಕೆಯ ಮೂಲಕ ಗೊತ್ತಾದಮೇಲೆ ಅದನ್ನು ಬದಲಾಯಿಸಲು ಅವರು ದೃಢ ಸಂಕಲ್ಪ ತೊಟ್ಟರು. ಮಾತ್ರವಲ್ಲ ತಮ್ಮ ಕಾರ್ಯ ಕ್ಷೇತ್ರವನ್ನು ದೆಹಲಿಯ ಗಡಿಗಳಿಗೆ ವರ್ಗಾಯಿಸಿದರು. ಮಹಾನ್ ತತ್ವಶಾಸ್ತ್ರಜ್ಞ ಕಾರ್ಲ್ ಮಾರ್ಕ್ಸ್ ಒಂದು ಕಡೆ ಹೀಗೆ ಹೇಳುತ್ತಾರೆ. "ತತ್ವವು ಜನಮನವನ್ನು ಆವರಿಸಿಕೊಂಡಾಗ, ಅದೊಂದು ಭೌತಿಕ ಶಕ್ತಿಯಾಗಿ ಮಾರ್ಪಾಡಾಗುತ್ತದೆ". ಈ ರೈತ ಚಳುವಳಿಯಲ್ಲಿ ಆದದ್ದೂ ಅದೇ.

ಇಡೀ ದೆಹಲಿ ಗಡಿಗಳಲ್ಲಿನ ಚಳುವಳಿಯನ್ನು ಸಂಯುಕ್ತ ಕಿಸಾನ್ ಮೋರ್ಚ

ಪುಟ 04 ಕ್ಕೆ



ಹೋರಾಟದ ಕಣದಲ್ಲಿನ ಪ್ರತ್ಯಕ್ಷ ಅನುಭವಗಳ ಕಥಾ ಗುಚ್ಛ ಮೂರನೇ ಆವೃತ್ತಿಯಲ್ಲಿ

ಸಂಪಾದಕೀಯ

ನೈಜ ಪರ್ಯಾಯ ರೂಪಿಸುವಲ್ಲಿ ಜನ ಚಳುವಳಿಗಳ ಮಹತ್ವದ ಪಾತ್ರ

ಕಳೆದ ಸುಮಾರು ಎರಡು ದಶಕಗಳ ರಾಷ್ಟ್ರ ರಾಜಕಾರಣದ ಕುರಿತು ಈಗ ಒಮ್ಮೆ ಪಕ್ಷಿನೋಟ ಬೀರಿದರೆ ಒಂದು ಅಂಶ ಸ್ಪಷ್ಟವಾಗಿ ಕಾಣುತ್ತದೆ. ತಮ್ಮ ಬದುಕಿನ ಸಂಕಟಗಳು, ಅದನ್ನು ಹೆಚ್ಚಿಸುವ ಆಳುವ ಸರಕಾರಗಳ ಜನದ್ರೋಹಿ ನೀತಿಗಳ ವಿರುದ್ಧ ತೀವ್ರವಾಗಿ ಬೇಸತ್ತ ಜನತೆ ಒಂದು ನೈಜ ಪರ್ಯಾಯಕ್ಕಾಗಿ ನಿರಂತರ ಹುಡುಕಾಟ ನಡೆಸುತ್ತಿದ್ದಾರೆ.

ವಾಜಪೇಯಿಯವರ ನೇತೃತ್ವದ ಎನ್.ಡಿ.ಎ. ಸರಕಾರದ ದುರಾಡಳಿತದಿಂದ ಬೇಸತ್ತ ಜನತೆ 2004 ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಬಲವನ್ನು ನೀಡಿದರು. ಎಡಪಕ್ಷಗಳಿಗೂ ಅಭೂತಪೂರ್ವವಾಗಿ ಬೆಂಬಲಿಸಿ ಸ್ಥಾನಗಳನ್ನು ಗಣನೀಯ ಹೆಚ್ಚಿಸಿದರು. ಸಮನ್ವಯ ಸಮಿತಿಯಲ್ಲಿನ ಎಡಪಕ್ಷಗಳ ಒತ್ತಡ ಹಾಗೂ ಬಾಹ್ಯ ಮತ್ತು ಆಂತರಿಕ ಹೋರಾಟದಿಂದಾಗಿ ಯುಪಿಎ ಸರಕಾರದ ಮೊದಲ ವರ್ಷಗಳಲ್ಲಿ ಹಲವಾರು ಜನಪರ ನೀತಿಗಳು ಜಾರಿಗೆ ಬಂದವು. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಅರಣ್ಯ ಹಕ್ಕು ಕಾಯ್ದೆ, ಆಹಾರ ಭದ್ರತೆ, ದೇಶದ ಕೃಷಿಗೆ ಹೆಚ್ಚಿನ ಬಜೆಟ್ ಬೆಂಬಲ ಮುಂತಾದ ವಿಷಯಗಳಲ್ಲಿ ನೊಂದ ಜನತೆಗೆ ಕೊಂಚವಾದರೂ ಪರಿಹಾರ ನೀಡುವ ಕ್ರಮಗಳು ಜಾರಿಗೆ ಬಂದವು. ಸಾರ್ವಜನಿಕ ಸಂಸ್ಥೆಗಳ ಖಾಸಗೀಕರಣ ಮತ್ತು ಉದಾರೀಕರಣದ ನೀತಿಗಳಿಗೆ ಪೂರ್ಣವಾಗಿ ಅಲ್ಲವಾದರೂ ಒಂದು ಹಂತದವರೆಗೆ ತಡೆ ಹಾಕುವುದು ಎಡಚಳುವಳಿಗೆ ಸಾಧ್ಯವಾಯಿತು. ಎಡಪಕ್ಷಗಳ ತೀವ್ರ ಮಧ್ಯಪ್ರವೇಶದಿಂದಾಗಿಯೇ ಜಾಗತಿಕ ಆರ್ಥಿಕ ಕುಸಿತದ ತೀವ್ರ ಪರಿಣಾಮ ದೇಶದ ಮೇಲೆ ಆಗದಂತೆ, ಭಾರತ ದಿವಾಳಿಯಾಗದಂತೆ ತಡೆಯಿತು. ಈ ಎಲ್ಲವುಗಳ ಸಕಾರಾತ್ಮಕ ಪರಿಣಾಮಗಳನ್ನು, ಈ ನೀತಿಗಳಿಗಿರುವ ಜನ ಬೆಂಬಲವನ್ನು ಕಂಡ ಕಾಂಗ್ರೆಸ್ ತನ್ನ ವರ್ಗ ನೀತಿಗಳಿಗೆ ಅಂಟಿಕೊಂಡು ಎಡಪಕ್ಷಗಳಿಂದಲೇ ದೂರವಾಗಿ, ಸಾಮ್ರಾಜ್ಯಶಾಹಿ ಅಮೆರಿಕದ ಅಣತಿಯಂತೆ ಕುಣಿಯಬೇಕಾದ ಅಪಾಯಕಾರಿ ಅಣು ಒಪ್ಪಂದಕ್ಕೆ ಸಹಿ ಹಾಕಿದ್ದು, ಎಡಪಕ್ಷಗಳು ಯುಪಿಎ ಸರಕಾರಕ್ಕೆ ಬೆಂಬಲ ವಾಪಸ್ ಪಡೆದದ್ದು ಈಗಾಗಲೇ ಹಳೆಯ ಇತಿಹಾಸ.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಎಡ ಪಕ್ಷಗಳು ಆಳುವ ವರ್ಗಗಳ ಬಹುಮುಖಿ ಸಂಘಟಿತ ದಾಳಿಯನ್ನು ಎದುರಿಸಬೇಕಾಗಿ ಬಂದಿತು. ಈ ಹಣ ಹಣೆಯಲ್ಲಿ ಮೊದಲಿದ್ದ ಸ್ಥಾನ ಬಲವನ್ನು ಒಂದಿಷ್ಟು ಕಳೆದುಕೊಳ್ಳಬೇಕಾಯಿತು ಎಂಬುದು ನಿಜ. ಆದರೆ ಎಡಪಕ್ಷಗಳು ಯುಪಿಎ ಸರಕಾರದಲ್ಲಿ ಜನ ಚಳುವಳಿಯ ಆಶಯ ಮತ್ತು ಅದರ ಹಿತಾಸಕ್ತಿಗಳನ್ನೇ ಕೇಂದ್ರವಾಗಿರಿಸಿ ಮಹತ್ವದ ಪಾತ್ರವನ್ನು ವಹಿಸಿದ್ದವು ರಾಜಕೀಯ ಅಧಿಕಾರ ಮತ್ತು ಅದರ ಶಕ್ತಿ ವೃದ್ಧಿಯು ಕೂಡ ಜನತೆಯ ಮಹಾನ್ ಹೋರಾಟಗಳ ಮುಂದುವರಿದ ರಾಜಕೀಯ ಅಭಿವ್ಯಕ್ತಿಯಾಗಿತ್ತು. ಎಡಪಕ್ಷಗಳು ಅಧಿಕಾರಕ್ಕೆ ಬಂದ ಪಶ್ಚಿಮ ಬಂಗಾಳ, ತ್ರಿಪುರಾ, ಕೇರಳ ರಾಜ್ಯಗಳಲ್ಲಿಯೂ ಜನತೆಯ ಆಂದೋಲನಗಳೇ ರಾಜಕೀಯ ಬಲಾಬಲಗಳ ಸಮೀಕರಣವನ್ನು ಬದಲಾಯಿಸುತ್ತಲೇ ಬಂದಿವೆ ಮತ್ತು ಎಡ ಶಕ್ತಿಗಳ ಮುನ್ನಡೆಗೆ ಇಂಭಾಗಿ ನಿಂತಿವೆ. ಇತ್ತೀಚಿನ ದಿನಗಳಲ್ಲಿಯೂ ಭ್ರಷ್ಟಾಚಾರ ವಿರೋಧಿ, ನಾಗರಿಕ ಹಕ್ಕುಗಳಿಗಾಗಿ, ದುರಾಡಳಿತ ಮತ್ತು ಜನ ವಿರೋಧಿ ನೀತಿಗಳ ವಿರುದ್ಧ ನಡೆದ ಹಲವು ವಿಭಿನ್ನ ಸ್ವರೂಪಗಳ ಹೋರಾಟಗಳು ಹಲವಾರು ರಾಜ್ಯಗಳಲ್ಲಿ ರಾಜಕೀಯ ಬದಲಾವಣೆಗಳನ್ನು ತಂದಿವೆ. ಯುಪಿಎ ಒಂದರ ಅವಧಿಯಲ್ಲಿ ಭಾರತದ ಜನತೆ ಕೋಮುವಾದಿ ಶಕ್ತಿಗಳಿಗೆ ಎದುರಾಗಿ ಜಾತ್ಯತೀತ ಶಕ್ತಿಗಳ ಪರವಾಗಿ ಕೊಟ್ಟ ಜನ ದೇಶಕ್ಕೆ ಅನುಗುಣವಾಗಿ ಎಡಪಕ್ಷಗಳು ಜನ ಚಳುವಳಿಯ ನೆಲೆಯಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿದವು ಆ ಮೂಲಕ ಪರ್ಯಾಯ ರಾಜಕಾರಣವನ್ನು ರೂಢಿಸಲು ಪ್ರಯತ್ನಿಸಿದವು. ನಂತರ ಎಡಪಕ್ಷಗಳ ಬೆಂಬಲವಿಲ್ಲದ ಯುಪಿಎ ಸರಕಾರ ಜಾರಿಗೊಳಿಸಿದ ಉದಾರೀಕರಣ ನೀತಿಗಳು ತೀವ್ರ ಭಷ್ಟಾಚಾರಕ್ಕೆ ಮತ್ತು ಜನರಲ್ಲಿ ಅತೃಪ್ತಿಗೆ ಕಾರಣವಾದವು, ಅದು ಅತ್ಯಂತ ಬಲಪ್ರತಿಗಾಮಿ ಯಾದ ಬಿಜೆಪಿ ಅಂತಃ ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳ ಬೆಳವಣಿಗೆಗೆ ಅವಕಾಶವನ್ನ ಒದಗಿಸಿ ಕೊಟ್ಟಿತು ಎಂಬುದಕ್ಕೆ ದೇಶವೇ ಸಾಕ್ಷಿಯಾಯಿತು.

ಈ ಹಂತದಲ್ಲಿ ಭ್ರಷ್ಟಾಚಾರದ ವಿಷಯದಲ್ಲಿ ಮತ್ತು ಉದಾರೀಕರಣ ಮತ್ತಿತರ ನೀತಿಗಳ ವಿರುದ್ಧ ಉಂಟಾದ ಜನರ ತೀವ್ರ ಅತೃಪ್ತಿಯನ್ನು ದುರ್ಬಳಕೆ ಮಾಡಿಕೊಂಡದ್ದು ಬಿಜೆಪಿ ನೇತೃತ್ವದ ಎನ್.ಡಿ.ಎ. ಕೂಟ. ಹಣಬಲ, ಕಾರ್ಪೊರೇಟ್ ಮಾಧ್ಯಮಗಳ ಬೆಂಬಲದಿಂದ ಎನ್.ಡಿ.ಎ. ಕೂಟವು ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮವಹಿಸುವುದಾಗಿ, ರೈತರ ಆದಾಯವನ್ನು ದ್ವಿಗುಣ ಮಾಡುವುದಾಗಿ, ವಿದೇಶದಿಂದ ಅಪಾರ ಪ್ರಮಾಣದ ಕಪ್ಪು ಹಣವನ್ನು ದೇಶಕ್ಕೆ ತರುವುದಾಗಿ, ವರ್ಷಕ್ಕೆ ಎರಡು ಕೋಟಿ ಉದ್ಯೋಗವನ್ನು ಸೃಷ್ಟಿಸುವುದು ಮುಂತಾಗಿ ಹಲವಾರು ಭರವಸೆಗಳನ್ನು ನೀಡಿ ಜನರನ್ನು ವ್ಯಾಪಕವಾಗಿ ಮರುಳು ಮಾಡುವಲ್ಲಿ ಯಶಸ್ವಿಯಾಗಿ 2014 ರಲ್ಲಿ ಅಧಿಕಾರಕ್ಕೆ ಬಂದಿತು. ನರೇಂದ್ರ ಮೋದಿ ನೇತೃತ್ವದ ಸರಕಾರವು ಕೊಟ್ಟ ಭರವಸೆಗಳಲ್ಲಿ ಯಾವ ಜನಪರ ಭರವಸೆಗಳನ್ನು ಈಡೇರಿಸದಿದ್ದರೂ, ಜನತೆಯ ಸಂಕಟಗಳಿಗೆ ಯಾವ ಪರಿಹಾರವನ್ನು ಒದಗಿಸದಿದ್ದರೂ, ನೋಟು ರದ್ದತಿಯಂತಹ ಸಂಕಟಗಳನ್ನು ದೇಶದ ಮೇಲೆ ಹೇರಿ, ದುಡಿಯುವ ಜನರ ಬದುಕಿಗೆ ಅಪಾರ ಹಾನಿ ಮಾಡಿದರೂ, ಬಹುತೇಕ, ಪುಲ್ವಮಾ ಭಯೋತ್ಪಾದಕ ದಾಳಿಯಂತಹ ದುರಂತದ ಕುರಿತ ದೇಶದ ಜನರ ಭಾವನೆಗಳನ್ನೇ ಬಂಡವಾಳ ಮಾಡಿಕೊಂಡಿತು. ಹಿಂದುತ್ವದ ಪ್ರತಿಗಾಮಿ ರಾಜಕಾರಣವನ್ನು ವ್ಯಾಪಕವಾಗಿ ಹರಿಯ ಬಿಟ್ಟಿತು. ಮತ್ತೇ 2019 ರಲ್ಲಿ ಅಧಿಕಾರಕ್ಕೆ ಬರುವಲ್ಲಿ ಎನ್.ಡಿ.ಎ. ಯಶಸ್ವಿಯಾಯಿತು. ಈಗ ಮತ್ತೊಮ್ಮೆ ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿರುವಂತೆ ಆಳುವ ಜನರಿಂದ ರಾಮಮಂದಿರ ಮುಂತಾದ ಭಾವನಾತ್ಮಕ ಪ್ರಶ್ನೆಗಳನ್ನು ಮುಂದೆ ತರುವ ಪ್ರಯತ್ನ ನಡೆದಿದೆ ಹೊರತು ಜನರ ಬದುಕಿನ ಸಂಕಟಗಳನ್ನು ನಿವಾರಿಸುವ ಪ್ರಯತ್ನಗಳು ಕಾಣುವುದಿಲ್ಲ. ಕೊರೊನ ಸೋಂಕಿನ ಸಂದರ್ಭದಲ್ಲಿ ತೀರಾ ಅವೈಜ್ಞಾನಿಕವಾದ ಮತ್ತು ಅದಕ್ಷತೆಯಿಂದ ಕೂಡಿದ ಅಮಾನವೀಯ ಲಾಕ್ ಡೌನ್‌ಗಳನ್ನು ದೇಶದ ಮೇಲೆ ಹೇರಿದ್ದರಿಂದ ಉಂಟಾದ ಬಿಕ್ಕಟ್ಟಿನಿಂದ ಇಂದಿಗೂ ದೇಶ ಪೂರ್ಣ ಚೇತರಿಸಿಕೊಂಡಿಲ್ಲ.

ಇಂತಹ ಸನ್ನಿವೇಶದಲ್ಲಿ ದೇಶದ ದುಡಿಯುವ ಜನತೆಯ ಬದುಕಿಗೆ ಬೆಳಕು ತರಬಹುದಾದ ಕೆಲವಾದರೂ ಆಶಾಕಿರಣಗಳು ಜನಾಂದೋಲನಗಳ ಮೂಲಕ ಕಾಣುತ್ತಿರುವುದು ನಿಜಕ್ಕೂ ಒಂದು ಒಳ್ಳೆಯ ಬೆಳವಣಿಗೆ. ರೈತರನ್ನು ಜನರನ್ನು ಯಾವ ರೀತಿಯಲ್ಲಿಯೂ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಕೊರೊನ ಬಿಕ್ಕಟ್ಟಿನ ತೀವ್ರ ಸಂಕಟದ ಕಾಲದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಜಾರಿಗೆ ತಂದ

ಪುಟ 10 ಕ್ಕೆ

ಬಿಜೆಪಿ: ಬಣಗಳ ಬೆಂಕಿಯ ನಡುವೆ ಭವಿಷ್ಯದ ಹುಡುಕಾಟ

ಈ ವಾರ

ಎಸ್.ವೈ.ಗುರುಶಾಂತ್

ನಾವಿಕನಿಲ್ಲದ ನೌಕೆಯಾಗಿದ್ದ ಬಿಜೆಪಿ ಪಕ್ಷ ಕೊನೆಗೂ ನಿಂತ ಹುದುಲು ನೆಲದಿಂದ ಒಂದು ಹೆಜ್ಜೆ ಮುಂದೆ ಇರಿಸಿದೆ. ಹೆಜ್ಜೆಯೇನೋ ಇರಿಸಿದೆ. ಆದರೆ ಕ್ರಮಿಸಬೇಕೆನ್ನುವ ಅದರ ಹಾದಿಯಲ್ಲಿ ಇದು ದಾಪುಗಾಲು ಏನಲ್ಲ. ಹೆಜ್ಜೆ ನೆಲವೂರುವಾಗಲೇ ಅದರ ಕಾಲಿಗೆ ಭಿನ್ನಮತದ ಮುಳ್ಳುಗಳೂ ಚುಚ್ಚಿವೆ, ಅಸಹನೆಯ ಕೊರಕಲು ಕಲ್ಲು ಒತ್ತಿವೆ. ಹೋಗಲಿ, ಸ್ವಲ್ಪ ದೂರ ಕ್ರಮಿಸಿದರೆ ಸುಗಮ ಹಾದಿ ಸಿಕ್ಕಿ ಬಿಟ್ಟಿತು ಎನ್ನುವ ಭರವಸೆಗಳು ಅಷ್ಟಾಗಿ ಇಲ್ಲ.

ಬಿಜೆಪಿ ಅದೆಷ್ಟೇ ತಾನು ಸೈದ್ಧಾಂತಿಕವಾಗಿ ಮತ್ತು ಸಂಘಟನಾತ್ಮಕವಾಗಿ ಅತಿ ಶಿಸ್ತಿನ ಪಕ್ಷವೆಂದು ಹೇಳಿಕೊಂಡರೂ ವಾಸ್ತವದಲ್ಲಿ ಹಲವು ಬಣಗಳ ಬಡಿದಾಟಗಳಲ್ಲಿಯೇ ಏಗಿ ಸಾಗಿ ಬಂದಿರುವುದು ಗೊತ್ತಿರುವ ಸಂಗತಿ. ಇಂತಹ ಬಣಗಳಿಗೆ ಒಂದು ಜಾತಿ ಸ್ವರೂಪವೂ, ಇಲ್ಲವೇ ಪ್ರಾದೇಶಿಕ ಲೇಪನವು ಅಥವಾ ಮುಖ್ಯವಾಗಿ ಭೂ ದಂಧೆಯ ರಿಯಲ್ ಎಸ್ಟೇಟ್, ಗಣಿಗಾರಿಕೆ ಮಾಫಿಯಾಗಳ, ಅಡ್ಡ ಹಾದಿ ಅಕ್ರಮ ಉದ್ಯಮಿ ಹಿತಾಸಕ್ತಿಗಳು ಹೀಗೆ ಒಂದಿಲ್ಲ ಒಂದು ಬಗೆಯಲ್ಲಿ ಗುಂಪುಗಳು ಸೃಷ್ಟಿಯಾಗುವುದ, ಒಡೆಯುವುದು ಪುನಃ ಸೃಷ್ಟಿಯಾಗುವುದು ಇದ್ದೇ ಇದೆ. ಬೇರೆ ಪಕ್ಷಗಳಿಗಿಂತ ತಾನು 'ಬಿನ್ನತೆಯುಳ್ಳ ಪಕ್ಷ' ಎನ್ನುವ ಅದರ ಮಾತುಗಳು ಅಧಿಕಾರದ ಶಕ್ತಿ ಕೇಂದ್ರದ ಸಹವಾಸಕ್ಕೆ ಬಂದೆಳಿಸಿದಂತೆ, ಅಧಿಕಾರ ಪೂರ್ಣ ಪ್ರಮಾಣದಲ್ಲಿ ಸಿಕ್ಕಾಗ ಅದು ಬೇರೆ ಯಾವುದೇ ಬಲಪಂಥೀಯ ಪಕ್ಷಗಳಿಗಿಂತ ಭಿನ್ನವಲ್ಲ ಎನ್ನುವುದು ಮತ್ತು ಅತ್ಯಂತ ದಿವಾಳಿ ಹಾಗೂ ಅನೈತಿಕ ಮತ್ತು ಅಕ್ರಮಗಳ ಮೂಲಕವೇ ಅದು ನಡೆವ ಹಾದಿ ಎನ್ನುವುದು ಬಟ್ಟ ಬಯಲಾಗಿರುವುದು ಕೂಡ ಅಷ್ಟೇ ನಿಜ. ಎಲ್ಲಾ ದೀರ್ಘಾವಧಿಯಲ್ಲಿ ಅಂತರ್ಗತವಾದ ಅದರ ವೈರುಧ್ಯಗಳು, ವ್ಯಕ್ತಿಗತ ಸ್ವಾರ್ಥ ಹಿತಾಸಕ್ತಿಗಳು ಬೇರೆ ಬೇರೆ ಸ್ವರೂಪಗಳಲ್ಲಿ ಘರ್ಷಣೆಗೆ ಈಡಾಗುವುದು ಸಹಜ, ನಿರೀಕ್ಷಿತ.

ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿದ್ದ ನಳೀನ್ ಕುಮಾರ ಕಟೀಲ್ ಅವರ ಅವಧಿ 2022ರ ಆಗಸ್ಟ್ ತಿಂಗಳಲ್ಲೇ ಮುಗಿದಿತ್ತು. ಮುಂದಿನ ಮೇ ತಿಂಗಳಲ್ಲಿಯೇ ವಿಧಾನಸಭಾ ಚುನಾವಣೆಗಳನ್ನು ಎದುರಿಸಬೇಕಾಗಿ ಇದ್ದುದರಿಂದ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳದೇ ಅವರ ಅವಧಿಯನ್ನು ವಿಸ್ತರಿಸಲಾಗಿತ್ತು. ಚುನಾವಣೆಯ ಫಲಿತಾಂಶದ ನಂತರವೂ ಪಕ್ಷಕ್ಕೆ ನೂತನ ಅಧ್ಯಕ್ಷರ ಆಯ್ಕೆ ಮತ್ತು ವಿರೋಧ ಪಕ್ಷದ ನಾಯಕರ ಆಯ್ಕೆಯನ್ನು ಮಾಡಲಾಗದ ಒಂದು ಅಸಹಾಯಕ ಸ್ಥಿತಿಯಲ್ಲಿ ಬಿಜೆಪಿ ನಾಯಕತ್ವ ಇತ್ತು. ಆರ್.ಎಸ್.ಎಸ್. ಕರ್ನಾಟಕ ರಾಜ್ಯದಲ್ಲಿ ಮಾಡಲು ಹೊರಟಿದ್ದ ಹೊಸ ರಾಜಕೀಯ ಪ್ರಯೋಗದ ವೈಫಲ್ಯದ ಹೊಣೆಗಾರಿಕೆಯನ್ನು ಬಹಿರಂಗವಾಗಿ ಒಪ್ಪಿಕೊಳ್ಳಲಾಗದ ಮುಖೇಡಿತನವೂ ಇತ್ತು. ಸೋಲಿನ ಹೊಸ ಸನ್ನಿವೇಶವನ್ನು ಎದುರಿಸಿ ಮುಂದೆ ಹೇಗೆ ಸಾಗಬೇಕು ಎನ್ನುವಲ್ಲಿ ಬಿಜೆಪಿ ಮುಖ್ಯವಾಗಿ ಸಂಘ ಪರಿವಾರ ವಿಳಂಬವನ್ನೇ ಅನುಸರಿಸಿತು. ಮುಂಬರುವ ಲೋಕಸಭಾ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲಾದರೂ ಬಿಜೆಪಿ ಘಟಕಕ್ಕೆ ಅಧ್ಯಕ್ಷರನ್ನು ಆಯ್ಕೆ ಮಾಡಿ ಕೊಳ್ಳುವ ಮತ್ತು ಆರು ತಿಂಗಳ ನಂತರ ವಿರೋಧ ಪಕ್ಷದ ನಾಯಕನನ್ನು ಆರಿಸಿಕೊಳ್ಳುವ ಒಂದು ಅನಿವಾರ್ಯ ಸ್ಥಿತಿಯಲ್ಲಿ ಇದೀಗ ಒಬ್ಬರ ನಂತರ ಮತ್ತೊಬ್ಬರನ್ನು ಹೈಕಮಾಂಡ್ ನೇಮಿಸಿದೆ.

ಇತ್ತೀಚಿನ ಆಶ್ಚರ್ಯಕರ ಬೆಳವಣಿಗೆಗಳಲ್ಲಿ ಬಿ.ಎಸ್.ಯಡಿಯೂರಪ್ಪನವರ ಬಣ ದಿಂದ ಅಧ್ಯಕ್ಷರನ್ನು ನೇಮಕ ಮಾಡಿಕೊಳ್ಳುವ ಸುದ್ದಿ ರಾಜಕೀಯ ವಲಯದಲ್ಲಿ ಓಡಾಡತೊಡಗಿದ್ದು ವಿಶೇಷವಾಗಿತ್ತು. ಬಿಜೆಪಿಯಲ್ಲಿದ್ದ ಹಳೆಯ ತಲೆಮಾರಿನ ಬಹುತೇಕ ನಾಯಕರನ್ನು ನಿವಾರಿಸಿಕೊಂಡು ತಮ್ಮ ಮಾತುಗಳನ್ನು ಕೇಳುವ ಸೂತ್ರದ ಗೊಂಬೆಗಳನ್ನು ಸ್ಥಾಪಿಸುವ ಉದ್ದೇಶ ಇತ್ತು. ಅದರಲ್ಲಿ ಬಹಳಷ್ಟು ಲಿಂಗಾಯತ ನಾಯಕರುಗಳನ್ನು ಮೂಲೆಗುಂಪು ಮಾಡುವುದು ಮುಖ್ಯ ಯೋಜನೆ ಬಂಡಾಯ ಎದುರಿಸಬೇಕಾಯ್ತು. ಇದರ ಪರಿಣಾಮವನ್ನು ಪರೋಕ್ಷವಾಗಿಯಾದರೂ ಒಪ್ಪಿಕೊಂಡ ಬಿಜೆಪಿ ಆರ್.ಎಸ್.ಎಸ್. ನ ನಾಯಕತ್ವ ಮತ್ತೆ ಲಿಂಗಾಯತರನ್ನು ಓಲೈಸುವ ಕ್ರಮಕ್ಕೆ ಮುಂದಾಗಿದೆ. ಆ ಕಾರಣದಿಂದ ಯಡಿಯೂರಪ್ಪನವರ ಆಪ್ತರಾಗಿರುವ ಶೋಭಾ ಕರಂದ್ಲಾಜೆ ಯವರನ್ನು ಮೊದಲು, ನಂತರ ಚೌಕಾಶಿಯಲ್ಲಿ ಬಿ.ಎಸ್. ಯಡಿಯೂರಪ್ಪನವರ ಮಗ ಬಿ.ವೈ. ವಿಜಯೇಂದ್ರರವರನ್ನೇ ಅಧ್ಯಕ್ಷರನ್ನಾಗಿಸಬಹುದು ಎನ್ನುವ ವದಂತಿಗಳು ಹರಿಸಲಾಗಿತ್ತು. ಅಂತಿಮವಾಗಿ ನವೆಂಬರ್ 10, 2023 ರಂದು ಸಂಜೆ ವಿಜಯೇಂದ್ರ ಅವರ ಹೆಸರು ರಾಜ್ಯ ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ದೃಢೀಕರಣಗೊಂಡಿತು. ಇದಾದ ಒಂದು ವಾರದ ಬಳಿಕ 17 ರಂದು ವಿರೋಧ ಪಕ್ಷದ ನಾಯಕನಾಗಿ ಮಾಜಿ ಉಪಮುಖ್ಯಮಂತ್ರಿಯಾಗಿದ್ದ ಆರ್. ಅಶೋಕ ರವರನ್ನು ನೇಮಕ ಮಾಡಲಾಯಿತು. ಈ ಇಬ್ಬರ ನೇಮಕದಲ್ಲಿ ಹಲವು ರಾಜಕೀಯ ಅಂಕಗಳ ಗಳಿಕೆಗಳನ್ನು ಸಾಧಿಸಬಹುದು ಎನ್ನುವ ಲೆಕ್ಕಾಚಾರ ಬಿಜೆಪಿಯ ಹೈಕಮಾಂಡ್ ಗೆ ಇದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಧೃಡ ಬೆಂಬಲಿಗರು ಎಂದು ಹೇಳಲಾಗುತ್ತಿದ್ದ ಲಿಂಗಾಯತರು ಸ್ವಲ್ಪಮಟ್ಟಿಗೆ ಹಿಂದೆ ಸರಿದಿರುವುದು ತನ್ನ ಸೋಲಿಗೆ ಒಂದು ಕಾರಣ ಎಂದು ಬಿಜೆಪಿ ಭಾವಿಸಿತ್ತು. ತನ್ನ ಭ್ರಷ್ಟ, ದುರಾಡಳಿತ, ದಬ್ಬಾಳಿಕೆ, ದ್ವೇಷ ದೌರ್ಜನ್ಯಗಳ ಹಾಗೂ ಜನ ದ್ರೋಹಿ ನೀತಿಗಳನ್ನು ಅನುಸರಿಸಿದ್ದರಿಂದ ಸೋಲಾಯಿತು ಎನ್ನುವ ಅಂಶವನ್ನು ಅದು ಎಂದೂ ಸಾರ್ವಜನಿಕವಾಗಿ ಒಪ್ಪಿಕೊಂಡೇ ಇಲ್ಲ!

ಬಿಜೆಪಿ ಸೋಲಿಗೆ ಬಿ.ಎಲ್. ಸಂತೋಷ್ ಅವರ ನೇತೃತ್ವದ ಸಂಘದ ಬಣ ಯಡಿಯೂರಪ್ಪನವರನ್ನು ಮೂಲೆಗುಂಪಾಗಿಸಲು ಸರ್ವ ರೀತಿಯ ಪ್ರಯತ್ನಗಳನ್ನ ನಡೆಸಿದ್ದು ಒಂದು ಕಾರಣ ಎಂದು ಹೇಳಲಾಗಿತ್ತು. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಲಿಂಗಾಯತ ಜಾತಿ ಮತ್ತೆ ಕಾಂಗ್ರೆಸ್ಸಿನ ಜೊತೆಯಲ್ಲಿ ಗಟ್ಟಿಯಾಗಿ ಉಳಿಯದೇ ಹೋದರೆ ಈಗಿರುವ 26 ಸಂಸತ್ ಕ್ಷೇತ್ರಗಳಲ್ಲಿ ಹಲವಾರು ಕ್ಷೇತ್ರಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎನ್ನುವ ಆತಂಕ ಬಿಜೆಪಿಯನ್ನು ಕಾಡಿದೆ. ಬಿ.ಎಸ್. ಯಡಿಯೂರಪ್ಪನವರ ಬಳಕೆಗೆ ಅಧ್ಯಕ್ಷತೆಯ ಸ್ಥಾನವನ್ನು ಕೊಟ್ಟುಬಿಟ್ಟರೆ ಯಡಿಯೂರಪ್ಪನವರ ಬಣ ಬೆಸೆದುಕೊಳ್ಳುವುದಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಲಿಂಗಾಯತರ ಮತಗಳನ್ನು ಕ್ರೋಢೀಕರಿಸಿಕೊಳ್ಳಬಹುದು ಎನ್ನುವ ಲೆಕ್ಕಾಚಾರದ ಜೊತೆಗೆ ಇದ್ದು ಇಲ್ಲದಂತೆ ಕಾಣಿಸಿಕೊಳ್ಳುತ್ತಿದ್ದ ಯಡಿಯೂರಪ್ಪನವರು ಸಕ್ರಿಯವಾಗಿ ಪಕ್ಷದ ಸಂಘಟನೆಯಲ್ಲಿ

ಪುಟ 10 ಕ್ಕೆ

ಮಹಾಧರಣಿ: ಜನತೆಯ ಸಮಗ್ರ ಪ್ರಶ್ನೆಗಳಿಗಾಗಿ ಐಕ್ಯ ಹೋರಾಟ

ಈ ಮಹಾಧರಣಿ ಸ್ವಂತ ಆರ್ಥಿಕ ಪ್ರಶ್ನೆಗಳಾಗಾಗಿಯೇ ಅಲ್ಲ. ದೇಶದ ಜನತೆಯ ಸಮಗ್ರ ಪ್ರಶ್ನೆಗಳಿಗಾಗಿ ಎಲ್ಲರೂ ಒಂದುಗೂಡಿರುವುದು ಐತಿಹಾಸಿಕವಾಗಿದೆ. ಈ ಇಡೀ ಪ್ರಕ್ರಿಯೆಯ ಬಗ್ಗೆ ವಿವರಿಸಿದ್ದಾರೆ ಇಲ್ಲಿ.

ಎಸ್. ವರಲಕ್ಷ್ಮಿ,
ಸಿಐಟಿಯು ರಾಜ್ಯ ಅಧ್ಯಕ್ಷರು

"ಜನತೆಯನ್ನು ರಕ್ಷಿಸಿ, ದೇಶವನ್ನು ಉಳಿಸಿ" ಎಂಬ ಘೋಷಣೆಯೊಂದಿಗೆ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟೀ ವೇದಿಕೆ 2023 ನವೆಂಬರ್ 26–28 ದೇಶದ ಎಲ್ಲ ರಾಜ್ಯಗಳ ರಾಜಭವನದ ಮುಂದೆ ನಡೆಯುತ್ತದೆ. ನವೆಂಬರ್ 26 ನಮ್ಮ ಭಾರತದ ಚರಿತ್ರೆಯಲ್ಲಿ ಬಹಳ ಮಹತ್ತದ ದಿನ.

ಮೊದಲನೇ ಕಾರಣ: ಭಾರತದ ಜನತೆ ಅನುಭವಿಸುತ್ತಿದ್ದ ಅಸಮಾನತೆ, ತಾರತಮ್ಯ ಮಾತ್ರವಲ್ಲದೇ ಮನುಷ್ಯನೇ ಮನುಷ್ಯನನ್ನು ಗುಲಾಮನನ್ನಾಗಿಸುವ ವ್ಯವಸ್ಥೆಯನ್ನು ಬದಲಾಯಿಸಿ "ಈ ಮಣ್ಣಿನಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಮಾನರು" ಎಂಬ ತಳಹದಿಯಲ್ಲಿ "ಸಂವಿಧಾನವನ್ನು" ರೂಪಿಸಲು 1949 ರಲ್ಲಿ ಸಮಿತಿಯನ್ನು ರಚಿಸಲಾದ ದಿನ. ಈ ದಿನದ ಮಹತ್ವವನ್ನು ನೆನಪಿಸುವುದೇ ನವೆಂಬರ್ 26.

ಎರಡನೇ ಕಾರಣ: ಭಾರತ ದೇಶದ ವೈವಿಧ್ಯಮಯ ಮನೋಭಾವಕ್ಕೆ ಕೊಳ್ಳಿ ಇಡುವ ಪರಿಕಲ್ಪನೆಯ ಸಿದ್ಧಾಂತವನ್ನು ಪ್ರತಿಪಾದಿಸುವ, ಸರ್ವಾಧಿಕಾರದ ಮನೋಭಾವದ ಪ್ರಭುತ್ವವನ್ನು ಮಣಿಸಿ ರೈತರ ಕಾಯ್ದೆಗಳಿಗೆ ತಂದಂತಹ ತಿದ್ದುಪಡಿಯನ್ನು ವಾಪಸ್ಸು ತೆಗೆಸಿದ ರೈತರ ಹೋರಾಟ ಪ್ರಾರಂಭವಾದಂತಹ ದಿನ.

ಮೂರನೇ ಕಾರಣ: ಕರೋನಾ ಲಾಕ್‌ಡೌನ್ ಸಂದರ್ಭದಲ್ಲಿ ಜನ ಇರುವೆಗಳಂತೆ ಬಲಿಯಾಗುತ್ತಿದ್ದರು. ದೇಶದ ಕೋಟಿಗಟ್ಟಲೆ ಜನರಿಗೆ ಕೂಲಿ ಮತ್ತು ಅನ್ನವಿಲ್ಲದ ಸಂದರ್ಭದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು "ಜನರಿಗೆ ನಗದು ರೂಪದಲ್ಲಿ ಹಣ" ಸಹಾಯ ಮಾಡಬೇಕೆಂದೂ ಒತ್ತಾಯಿಸಿ ಸಾರ್ವತ್ರಿಕ ಮುಷ್ಕರ ಮಾಡಿದ ದಿನ.

4–ಆಗಸ್ಟ್–2023 ರಂದು ನವದೆಹಲಿಯಲ್ಲಿ 545 ರೈತ ಸಂಘಗಳು ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಸಮಾವೇಶದಲ್ಲಿ ಚರ್ಚಿಸಿದಂತೆ,

ಭಾರತ ಎಂದರೆ ಕೇವಲ ಮಣ್ಣಲ್ಲ ಮನುಷ್ಯರು. ಈ ಮನುಷ್ಯರು ಮತ್ತೊಮ್ಮೆ ಭೌತಿಕವಾಗಿ ಮತ್ತು ದೈಹಿಕ ಗುಲಾಮರಾಗುವುದನ್ನು ತಪ್ಪಿಸಲು, ಭಾರತದ ಮುನ್ನಡೆಗೆ ಮತ್ತು ಇರುವಿಕೆಗೆ ಕಾರಣವಾಗಿರುವ ರೈತ–ಕಾರ್ಮಿಕ ಇಂದು ಸಂಪೂರ್ಣವಾಗಿ ಪರಾವಲಂಬಿಗಳಾಗುವುದನ್ನು ತಪ್ಪಿಸಲು.

ಜನ ಸಾಮಾನ್ಯರಿಗಾಗಿ ನಿರ್ಮಾಣವಾಗಿರುವ ಸಂಸತ್ತು, ಪ್ರಭುತ್ವಗಳು ಶೋಷಕರಿಗಾಗಿಯೇ ಇರುವಂತೆ ವರ್ತಿಸುತ್ತಿವೆ. ಮಾತ್ರವಲ್ಲದೆ ಭಾರತದ ಆರ್ಥಿಕ ಸಾರ್ವಭೌಮತೆಯ ಪ್ರತೀಕವಾಗಿರುವ ಭೂಮಿಯೊಳಗೆ ಸಿಗುವ ತೈಲ, ಗ್ಯಾಸ್‌ನ ಉತ್ಪಾದನಾ ಘಟಕಗಳು, ಉತ್ಪಾದನೆ, ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಾರ್ವಜನಿಕ ಕೈಗಾರಿಕೆಗಳು ಹಣಕಾಸಿನ ವಲಯಗಳನ್ನು ಅತ್ಯಂತ ಸುಲಭವಾಗಿ ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಲಾಗುತ್ತಿದೆ, ಸಂವಿಧಾನದ ಆಶಯದಂತೆ ಕಲ್ಯಾಣ ರಾಜ್ಯದ ಪರಿಕಲ್ಪನೆಯಲ್ಲಿ ಸಮಾಜವಾದದ ಆಶಯದಂತೆ ಆಹಾರ, ಆರೋಗ್ಯ ಮತ್ತು ಶಿಕ್ಷಣವನ್ನು ಉಚಿತವಾಗಿ ಕೊಡುವುದರ ಬದಲಿಗೆ ಇಂದು ದುಬಾರಿಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ರೈತ–ಕಾರ್ಮಿಕ–ಜನಸಾಮಾನ್ಯರ ಬದುಕಿನ ಹಕ್ಕಿಗಾಗಿ, ದೇಶದ ಉಳಿವಿಗಾಗಿ ಇಂದು ಭಾರತದ ಎಲ್ಲ ದೇಶ ಪ್ರೇಮಿ ಸಂಘಟನೆಗಳು ಒಂದಾಗಿ "ಪ್ರಭುತ್ವದ ನೀತಿಗಳನ್ನು ಪ್ರಶ್ನಿಸಲು" 21 ಬೇಡಿಕೆಗಳ ಆಧಾರದಲ್ಲಿ ಒಂದು ವೇದಿಕೆಗೆ ಬಂದಿವೆ.

ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಮಾಡಲು "ಸಂಯುಕ್ತ ಹೋರಾಟ ಕರ್ನಾಟಕ" ವನ್ನು ಕ್ರಿಯಾಶೀಲಗೊಳಿಸಿ ದಲಿತ, ಮಹಿಳಾ, ವಿದ್ಯಾರ್ಥಿ, ಯುವಜನ ಸಂಘಟನೆಗಳನ್ನೊಳಗೊಂಡು ಮತ್ತಷ್ಟು ವಿಸ್ತರಿಸಿಕೊಳ್ಳಲು ಸಾಧ್ಯವಾಗಿದೆ.

ರಾಜ್ಯದ ಎಲ್ಲಾ ಕಡೆಗಳಲ್ಲಿ ಸಂಘಟನೆಗಳ ಕಾರ್ಯಕರ್ತರು ಜಿಲ್ಲೆಗಳಲ್ಲಿ ಜಂಟೀ ಸಭೆಗಳನ್ನು ನಡೆಸಲಾಗುತ್ತಿದೆ. ಕನಿಷ್ಠ ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯ್ತಿ/ವಾರ್ಡ್/ ಹಂತದ ಸಮಿತಿಗಳನ್ನು ರಚಿಸಿ ಅಲ್ಲಿಯ ರೈತ, ಕೂಲಿಕಾರರು ಮತ್ತು ಕಾರ್ಮಿಕರು ಸೇರಿ ಮನೆ ಮನೆಗಳಿಗೆ ಕರಪತ್ರಗಳನ್ನು ಹಂಚುವ ತಯಾರಿಯ ಭಾಗವಾಗಿ ಲಕ್ಷಗಟ್ಟಲೆ ಕರಪತ್ರಗಳನ್ನು ಮುದ್ರಿಸಲಾಗಿತ್ತು. ಐಕ್ಯ ವೇದಿಕೆಯ ಸಂದೇಶವನ್ನು ಸಾರುವ ಪೋಸ್ಟರ್‌ಗಳು, ಕಿರು ಟಿಪ್ಪಣಿಗಳನ್ನು ಹೊರತರಲಾಗಿದೆ. ಗುಲ್ಬರ್ಗಾ, ಯಾದಗಿರಿ, ಬೆಂಗಳೂರು ದಕ್ಷಿಣ, ಉತ್ತರ ಜಿಲ್ಲೆಗಳಲ್ಲಿ ಜೀಪ್ ಜಾಥಾಗಳು ನಡೆದವು. ಮೈಸೂರು ಒಳಗೊಂಡು ಕೈಗಾರಿಕಾ ಪ್ರದೇಶಗಳಲ್ಲಿ ಸ್ಕೂಟರ್ ಜಾಥಾಗಳು ನಡೆದವು. ಸಿಐಟಿಯು ಸಂಘಟನೆಯ ಸಾವಿರಾರು ಕಾರ್ಯಕರ್ತರು ಪ್ರತಿದಿನ ಈ ಪ್ರಚಾರದಲ್ಲಿ ತಮ್ಮನ್ನು ತಾವು ಅರ್ಪಿಸಿಕೊಂಡು ಮನೆ ಮನೆಯನ್ನು ತಲುಪಲು ಪ್ರಯತ್ನಿಸಿದರು.

ಹಾಗೆಯೇ ಕಾರ್ಖಾನೆಯ ಗೇಟ್‌ಗಳಲ್ಲಿ, ಅಂಗನವಾಡಿ ಸರ್ಕಲ್ ಮತ್ತು ಪಂಚಾಯ್ತಿವಾರು ಹಂತದ ಸಭೆಗಳು, ಬಿಸಿಯೂಟ ನೌಕರರ ಕ್ಲಸ್ಟರ್ ಹಂತದ ಸಭೆಗಳು, ಗ್ರಾಮಪಂಚಾಯ್ತಿ ನೌಕರರು ಪಂಚಾಯ್ತಿ/ತಾಲ್ಲೂಕು ಹಂತದ ಸಭೆಗಳು, ಕಟ್ಟಡ ಕಾರ್ಮಿಕರು ಘಟಕ ಹಂತದ ಸಭೆಗಳು, ಪ್ಲಾಂಟೇಶನ್ ಕಾರ್ಮಿಕರು ತೋಟವಾರು ಸಭೆಗಳು, ಬೀಡಿ ಕಾರ್ಮಿಕರು ಗಡಂಗ್ ಹಂತದ ಸಭೆಗಳನ್ನು ನಡೆಸಿದರು. ಮನೆಗೆಲಸಗಾರರು, ಪೌರ ಕಾರ್ಮಿಕರು, ಆಶಾ ನೌಕರರು, ಆಟೋ ಚಾಲಕರು, ಸಾರಿಗೆ ನೌಕರರು ಮುಂತಾದವರು ತಮ್ಮ ತಮ್ಮ ಹಂತದ ಸಭೆಗಳನ್ನು ನಡೆಸಿದರು.

ಉದ್ಯೋಗ ಖಾತ್ರಿಯಲ್ಲಿ ದುಡಿಯುವ ಸ್ಥಳಗಳಲ್ಲಿ ಕೂಲಿಕಾರರು ಸಭೆಗಳನ್ನು ನಡೆಸಿದರು. ಈ ಹೋರಾಟದ ಬೇಡಿಕೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಮಾಡಲು ಯುವಕರ ವಿಶೇಷ ತಂಡ ದುಡಿಯಿತು. ಮಾತ್ರವಲ್ಲದೆ ಹಲವು ಬಣ್ಣಗಳಿಂದ ಕೂಡಿದ ಪೋಸ್ಟರ್‌ಗಳನ್ನು ಹೊರತರಲಾಗಿತ್ತು. ಎಲ್ಲ ವಿಭಾಗಗಳ ನಾಯಕರು/ ಕಾರ್ಯಕರ್ತರ ವಿಡಿಯೋಗಳು ಬರುತ್ತಿವೆ.

ಇನ್ನು 26–28 ರ ತನಕ ನಡೆವ ಹೋರಾಟದಲ್ಲಿ ಪಾಲ್ಗೊಳ್ಳುವವರಿಗೆ 'ಅನ್ನ ದಾಸೋಹ' ನೀಡಲು ಒಂದು ತಂಡ ವಿಶೇಷವಾಗಿ ಕೆಲಸ ಮಾಡುತ್ತಿದೆ.

ಈ ಹೋರಾಟದಲ್ಲಿ ಪಾಲ್ಗೊಳ್ಳಲು ಕಾರ್ಖಾನೆಗಳ ಕಾರ್ಮಿಕರು ಸಾವಿರಾರು ರೂಪಾಯಿಗಳ ಒಂದು ದಿನದ ಸಂಬಳವನ್ನು ಕೊಡುಗೆಯಾಗಿ ನೀಡಲು ನಿರ್ಧರಿಸಿದ್ದಾರೆ. ಹಾಗೆಯೇ ಮುಷ್ಕರ ಮಾಡಿ ಅಂಗನವಾಡಿ ನೌಕರರು/ಗ್ರಾಮಪಂಚಾಯ್ತಿ ನೌಕರರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ದೂರದ ಬೀದರ್, ಗುಲ್ಬರ್ಗಾ, ಬಿಜಾಪುರ, ಯಾದಗಿರಿ ಜಿಲ್ಲೆಗಳಿಂದ 16 ರಿಂದ 20 ಗಂಟೆಗಳ ಪ್ರಯಾಣ ಮಾಡಿ ಸಾವಿರಾರು ರೈತರು, ವಿವಿಧ ವಿಭಾಗಗಳ ಕಾರ್ಮಿಕರು ಮತ್ತು ಕೃಷಿಕೂಲಿಕಾರರು, ನರೇಗಾದಲ್ಲಿ ದುಡಿಯುವ ಜನರು ಬರುತ್ತಿದ್ದಾರೆ. ಗಡಿ ಭಾಗಗಳಾದ ಚಾಮರಾಜನಗರ, ಕೆಜಿಎಫ್, ಆಳಂದ, ಪಾವಗಡ, ಮಂಗಳೂರು, ಕೊಡಗು, ಕಾರವಾರ ಮುಂತಾದ ಪ್ರದೇಶಗಳಿಂದ ಮತ್ತು ಅತ್ಯಂತ ಹಿಂದುಳಿದಿರುವ ಪ್ರದೇಶಗಳಿಂದಲೇ ಸಾವಿರಾರು ಜನರು ಕೇಂದ್ರ ಸರ್ಕಾರವನ್ನು ಪ್ರಶ್ನೆ ಮಾಡಲು ಬರುತ್ತಿದ್ದಾರೆ.

ಆದರೆ ರಾಜಭವನದ ಮುಂದೆ ಪ್ರತಿಭಟನೆ ಮಾಡಲು ಅವಕಾಶವಿಲ್ಲದಿರುವುದರಿಂದ ಬೆಂಗಳೂರಿನ "ಫ್ರೀಡಮ್ ಪಾರ್ಕನಲ್ಲಿಯೇ ಫ್ರೀಡಮ್ ಕೇಳಲು ಬರುತ್ತಿದ್ದಾರೆ" ಈ ಶ್ರಮ ಜೀವಿಗಳು. ಈ ಶ್ರಮಜೀವಿಗಳ ಒಗ್ಗಟ್ಟು ಅವರ ಸ್ವಂತ ಆರ್ಥಿಕ ಅಥವಾ ಇನ್ನಿತರ ಬೇಡಿಕೆಗಳಿಗಾಗಿ ಅಲ್ಲ. ಯಾವುದೇ ಒಂದು ಜನವಿಭಾಗ ಆ ವಿಭಾಗದ ಪ್ರಶ್ನೆಗಳ ಸಂಘಟನೆಯಾಗುವುದು ಹೋರಾಟ ಮಾಡುವುದು ಸಾಮಾನ್ಯ. ಆದರೆ ಈ ಪ್ರಚಾರ ಮತ್ತು ಹೋರಾಟ ದೇಶದ ಒಟ್ಟು ಜನತೆಯ ಸಮಗ್ರ ಪ್ರಶ್ನೆಗಳು ಮಾತ್ರವಲ್ಲ ವಿವಿಧ ಅಭಿಪ್ರಾಯಗಳು, ಉದ್ದೇಶಗಳು, ಗುರಿಗಳು, ವಿವಿಧ ಬಣ್ಣಗಳು ಮತ್ತು ವಿವಿಧ ಚಿಹ್ನೆಗಳು ಒಂದಾಗುವುದು, ಒಂದು ವೇದಿಕೆಗೆ ಬರುವುದು ಸುಲಭವೇ?

ಆದರೆ ಇಂದು ಸಾಧ್ಯವಾಗಿದೆ. "ಕಾರ್ಮಿಕರು ವರ್ಗದ ತಕ್ಷಣದ ಹಿತಗಳಿಗಾಗಿ ಅಷ್ಟೇ ಅಲ್ಲ ವರ್ತಮಾನದ ಪ್ರಶ್ನೆಗಳಿಗಾಗಿ" ನಿಲ್ಲುತ್ತಾರೆ. ಎಂಬುದನ್ನು ಈ ಜಂಟೀ ಹೋರಾಟ ಸಾಬೀತು ಪಡಿಸುವಾಗಲೇ ಕೆಂಪು, ಬಿಳಿ ಮತ್ತು ಹಸಿರು ಬಣ್ಣಗಳ ಕಲರವ ರಾಜ್ಯದಲ್ಲಿ ಮತ್ತು ದೇಶದಲ್ಲಿ ಬದಲಾವಣೆಯ ಸಂಕೇತ ಎಂದು ಭಾವಿಸೋಣ. ●



ದೆಹಲಿ ಗಡಿಗಳ ಐತಿಹಾಸಿಕ ರೈತ ಹೋರಾಟದ ನೆನಪು....

ಪುಟ 2 ರಿಂದ

(ಎಸ್‌ಕೆಎಂ) ಎಂಬ ವೇದಿಕೆಯ ಮೂಲಕ 547 ಕ್ಕೂ ಹೆಚ್ಚು ಸಂಘಟನೆಗಳು ಸೇರಿ ನಿರ್ವಹಿಸಿದವು. ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ ರೈತ ಸಂಘಟನೆಗಳು ಆರಂಭಿಸಿದ ಈ ಹೋರಾಟವನ್ನು ದೇಶಾದ್ಯಂತ ವಿಸ್ತರಿಸಲು ಮತ್ತು ಅದಕ್ಕೊಂದು ವ್ಯಾಪಕತೆಯನ್ನು ತಂದುಕೊಟ್ಟು ಸರ್ಕಾರದ ಮೇಲೆ ಒತ್ತಡವನ್ನು ನಿರ್ಮಾಣ ಮಾಡುವ ಸಲುವಾಗಿ ಕಾರ್ಮಿಕರು, ಕೃಷಿ ಕೂಲಿಕಾರರು, ಮಹಿಳೆಯರು, ದಲಿತರು, ವಿದ್ಯಾರ್ಥಿ, ಯುವಜನ ಸಂಘಟನೆಗಳನ್ನು ಇದರಲ್ಲಿ ಒಳಗೊಳಿಸಲಾಯಿತು. ಇವರೆಲ್ಲರ ಸಹಕಾರದೊಂದಿಗೆ ಒಂದು ವರ್ಷದ ಅವಧಿಯಲ್ಲಿ 3 ಭಾರತ್ ಬಂದ್ ಮತ್ತು ಹಲವು ರಾಷ್ಟ್ರಮಟ್ಟದ ಹೋರಾಟಗಳನ್ನು ಯಶಸ್ವಿಗೊಳಿಸಲಾಯಿತು.

'ಅನ್ನದ ಋಣದಲ್ಲಿರುವರೆಲ್ಲಾ, ಅನ್ನದ ಋಣ ತೀರಿಸಲು ಈ ಹೋರಾಟದಲ್ಲಿ ಕೈಜೋಡಿಸಿ' ಎಂದು ಕರೆ ಕೊಡಲಾಯಿತು. ಪಂಜಾಬ್, ಹರಿಯಾಣ ರಾಜ್ಯಗಳಲ್ಲಂತೂ ಈ ಹೋರಾಟ ಕೇವಲ ರೈತರ ಹೋರಾಟವಾಗಿ ಉಳಿಯಲಿಲ್ಲ. ಇದು ಇಡೀ ಪಂಜಾಬ್ ಜನತೆಯ, ಸಿಖ್ಖರ ಮತ್ತು ಜಾಟರ ಹೋರಾಟವಾಗಿ ಪರಿಣಮಿಸಿತು, ಅಲ್ಲಿ ರೈತರ ಪರ ಇರುವವರು, ಇಲ್ಲವೇ ರೈತರ ವಿರುದ್ಧ ಇರುವವರು ಎಂದು ಇಡೀ ಜನ ಸಮುದಾಯವೇ ವಿಭಾಗವಾಯಿತು. ರೈತರ ಪರ ಇರುವ ರಾಜಕಾರಣಿಗಳು, ಸಾಹಿತಿಗಳು, ಕಲಾವಿದರು, ಸಿನಿಮಾ ನಟ ನಟಿಯರು, ಕ್ರೀಡಾಪಟುಗಳು, ಸಂಗೀತಗಾರರು ಎಲ್ಲರೂ ಈ ಚಳುವಳಿಯ ಜೊತೆ ಗುರುತಿಸಿಕೊಂಡು ತಂತಮ್ಮ ಕ್ಷೇತ್ರಗಳ ಮೂಲಕವೇ ಚಳುವಳಿಯನ್ನು ಬಲಪಡಿಸಲು ಮತ್ತು ಮುಂದುವರೆಸಲು ಕಾಣಿಕೆಗಳನ್ನು ನೀಡಿದರು.

ಈ ಚಳುವಳಿಗಳಲ್ಲಿ ಭಾಗವಹಿಸಿದ್ದವರಿಗೆ ಜಾತಿ ಪ್ರಜ್ಞೆಯನ್ನು ಮೀರಿದ "ನಾವೆಲ್ಲಾ ರೈತರು" ಎನ್ನುವ ವರ್ಗ ಪ್ರಜ್ಞೆ ಜಾಗೃತಗೊಂಡಿತ್ತು, ಸಿಖ್ಖ್ ಮತ್ತು ಜಾಟರಲ್ಲಿ ಹಲವು ಪಂಗಡಗಳಿದ್ದರೂ ಅವರೆಲ್ಲ ಈ ಚಳುವಳಿಯಲ್ಲಿ ಕೇವಲ ರೈತರಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ನಾವು ಎತ್ತುತ್ತಿರುವ ಪ್ರಶ್ನೆಗಳ ಕುರಿತು ಸರಿಯಾದ ತಿಳುವಳಿಕೆ ಮತ್ತು ಅದನ್ನು ಸಾಧಿಸಿಕೊಳ್ಳುವ ಬದ್ಧತೆ, ಎದುರಾಳಿ ಪ್ರಭಲವಾಗಿರುವಾಗ ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಎಲ್ಲ ಮಿತ್ರರನ್ನೂ ಒಳಗೊಳ್ಳುವ, ಆ ಮೂಲಕ "ಒಗ್ಗಟ್ಟಿನಲ್ಲಿ ಬಲವಿದೆ" ಎಂಬುದನ್ನು ತೋರಿಸುವುದು, ಬೇಡಿಕೆ ಈಡೇರಿಸಿಕೊಳ್ಳಲು ಎಂತಹ ತ್ಯಾಗಕ್ಕಾದರೂ ಸಿದ್ಧ, ಅದರಿಂದ ದೇಶ, ಕೃಷಿ ಮತ್ತು ರೈತ ಸಂಕುಲ ಉಳಿಯುತ್ತದೆ ಎಂಬ ದೃಢ ವಿಶ್ವಾಸ ದೆಹಲಿ ರೈತ ಚಳುವಳಿಯ ಮೂಲಕ ಜಗತ್ತಿಗೆ ತುಂಬ ಸ್ಪಷ್ಟವಾಗಿ ಅರ್ಥವಾಗಿದೆ. ಈ ಅನುಭವಗಳಿಂದ ಇಡೀ ಜಗತ್ತಿನ ಚಳುವಳಿಗಳು ಪಾಠ ಕಲಿಯಬೇಕಿದೆ. ಆ ಮೂಲಕ ಜನ ವಿರೋಧಿ ಆಳುವ ವರ್ಗದ ನೀತಿಗಳ ವಿರುದ್ಧ ಜನ ಚಳುವಳಿಯನ್ನು ಬಲಪಡಿಸಬೇಕಾದ ತುರ್ತು ಅಗತ್ಯವಿದೆ. ●

ನವೆಂಬರ್ 26-28, 2023-ರಾಷ್ಟ್ರವ್ಯಾಪಿ ರಾಜಭವನದ ಮುಂದೆ 72 ಗಂಟೆಗಳ ಮಹಾಧರಣಿ

ಐಕ್ಯ ಚಳುವಳಿಯ ಐತಿಹಾಸಿಕ ಮಹತ್ವ

ರೈತರನ್ನು, ದೇಶದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯವಾಗಿ ಜಾರಿಗೆ ತರಲಾಗಿದ್ದ ಕಾರ್ಪೋರೇಟ್ ಶಕ್ತಿಗಳ ಪರವಾದ ಮೂರು ಕೃಷಿ ಕಾಯ್ದೆಗಳನ್ನು ಚಳುವಳಿಯ ಒತ್ತಡದಿಂದ ವಾಪಸ್ ಪಡೆದಿದ್ದರೂ ಸಹ ರಾಜ್ಯ ಸರಕಾರಗಳ ಮೇಲೆ ಒತ್ತಡ ಹಾಕಿ ಅಂತದ್ದೇ ಕಾಯ್ದೆಗಳನ್ನು ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಭೂಮಿ, ಕೃಷಿ ಉತ್ಪಾದನೆ, ಕೃಷಿ ಉತ್ಪನ್ನ ಮಾರುಕಟ್ಟೆ ವಿಷಯಗಳಲ್ಲಿ ಅದೇ ಕಾರ್ಪೋರೇಟ್ ಪರ ನೀತಿಗಳನ್ನು, ಕಾಯ್ದೆಗಳನ್ನು ಜಾರಿ ಮಾಡಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಪ್ರಯತ್ನ ನಡೆಸುತ್ತಿದೆ. ಭೂ ಸುಧಾರಣಾ ಕಾಯ್ದೆ, ಎ.ಪಿ.ಎಂ.ಸಿ. ಕಾಯ್ದೆ, ಕಾಂಟ್ರಾಕ್ಟ್ ಕೃಷಿ ಕಾಯ್ದೆ, ಅವಶ್ಯಕ ವಸ್ತುಗಳ ಕಾಯ್ದೆ ಈ ವಿಷಯಗಳಲ್ಲಿ ಕೇಂದ್ರ ಸರಕಾರವು ಹಣಕಾಸು ಬಂಡವಾಳದ ಪರವಾಗಿ ಕೆಲಸ ಮಾಡುತ್ತಿರುವಾಗ ಮತ್ತೊಂದು ಮಹಾ ಹೋರಾಟವನ್ನು ದೇಶದ ದುಡಿಯುವ ಜನ ನಡೆಸುತ್ತಿದ್ದಾರೆ. ರೈತ-ಕಾರ್ಮಿಕರ ಸಖ್ಯತೆಯ ಹೊಸ ಮಜಲನ್ನು ಕಾಣುತ್ತಿರುವ ಈ ಮಹಾ ಹೋರಾಟ ಮಹತ್ವದ ಕುರಿತು ಒಂದು ಲೇಖನ.

ಜಿ.ಸಿ. ಬಯ್ಯಾರೆಡ್ಡಿ
ಅಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ

ನವೆಂಬರ್ 26 ಸಂವಿಧಾನ ದಿನ, ದೆಹಲಿಯ ಐತಿಹಾಸಿಕ ರೈತ ಚಳುವಳಿ ಆರಂಭವಾದ ದಿನ. ಮತ್ತು ರೈತರ-ಕಾರ್ಮಿಕರ ಐಕ್ಯ ಚಳುವಳಿ ಒಂದು ಹಂತದ ತಾರ್ಕಿಕ ಅಂತ್ಯವನ್ನು ಕಂಡು ಮುಕ್ತಾಯಗೊಂಡ ದಿನ. ಇಂತಹ ಐತಿಹಾಸಿಕ ಮಹತ್ವದ ದಿನ ಭಾನುವಾರವಾದರೂ ನವೆಂಬರ್ 26, 2023 ರಿಂದ ನವೆಂಬರ್ 28 ರ ವರೆಗೆ ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ರಾಜಭವನದ ಮುಂದೆ 72 ಗಂಟೆಗಳ ಸಾಮೂಹಿಕ ಮಹಾ ಧರಣವನ್ನು ಸಂಘಟಿಸಲಾಗುತ್ತಿದೆ.

2020 ರಲ್ಲಿ ದೆಹಲಿಯ ರೈತ ಚಳುವಳಿ ಆರಂಭವಾದಾಗ ಕಾಲ ಕ್ರಮೇಣ ಕಾರ್ಮಿಕ ಸಂಘಟನೆಗಳ ಬೆಂಬಲ ದೊರೆಯಿತು. ರೈತ-ಕಾರ್ಮಿಕರ ಈ ಐಕ್ಯ ಚಳುವಳಿಯು ಬರಿ ದೇಶಕ್ಕೆ ಅಲ್ಲ ಇಡಿ ಜಗತ್ತಿಗೆ ಮಾದರಿಯಾದ ಒಂದು ಹೋರಾಟ ಎಂಬ ಖ್ಯಾತಿಯನ್ನು ಗಳಿಸಿದೆ ಮತ್ತು ಅಷ್ಟೆ ಮಹತ್ವವನ್ನು ಪಡೆದಿದೆ.

ರೈತರು ಎಂದಾಗ ಅವರಲ್ಲಿ ದೊಡ್ಡ ರೈತರು, ಮಧ್ಯಮ ರೈತರು, ಸಣ್ಣ ರೈತರು ಅಥವಾ ಬಡ ರೈತರು ಇರುತ್ತಾರೆ, ಅವರನ್ನೆಲ್ಲಾ ಒಂದುಗೂಡಿಸಿ ಹೋರಾಟದ ಒಂದು ವೇದಿಕೆಗೆ ತರುವುದು ಕಷ್ಟ ಎಂಬ ಭಾವನೆ ಮೊದಲಿಗೆ ಇತ್ತು. ಆದರೆ ಸಮಸ್ಯೆಗಳನ್ನು ಸರಿಯಾಗಿ ಅಭ್ಯಾಸ ಮಾಡಿ, ಸರಿಯಾದ ರೀತಿಯಲ್ಲಿ ಬೇಡಿಕೆಗಳನ್ನು ಮಂಡಿಸಿದರೆ ಈ ನಾನಾ ರೈತ ವಿಭಾಗಗಳನ್ನು ಒಂದುಗೂಡಿಸಿ ಪರಿಣಾಮಕಾರಿ ಚಳುವಳಿ ನಡೆಸುವುದು ಅಸಾಧ್ಯವಲ್ಲ ಎಂಬುದನ್ನು ಈ ಚಳುವಳಿ ತೋರಿಸಿಕೊಟ್ಟಿತು. ಈ ಅಪೂರ್ವ ಚಳುವಳಿಯಲ್ಲಿ ಸುಮಾರು 540 ರೈತ ಸಂಘಟನೆಗಳು ಒಳಗೊಂಡು ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ರೂಪುಗೊಂಡಿತು. ಅಖಿಲ ಭಾರತ ಮಟ್ಟದ ಕಾರ್ಮಿಕರ ಚಳುವಳಿಯ ಜಂಟಿ ವೇದಿಕೆಯಾದ 'ಜೆಸಿಟಿಯು' ಸಹ ಈ ಹೋರಾಟದಲ್ಲಿ ಸಕ್ರಿಯವಾಗಿ ಬೆಂಬಲಿಸಿ ಚಳುವಳಿಯಲ್ಲಿ ಭಾಗಿಯಾಯಿತು.

ಜಗತ್ತಿನ ಗಮನ ಸೆಳೆದ ಚಳುವಳಿ

ಇಡೀ ಜಗತ್ತಿನ ಗಮನ ಸೆಳೆದ ಈ ಚಳುವಳಿಯು ದಿಡೀರನೆ ರೂಪಗೊಂಡದ್ದಲ್ಲ. ಮೊದಲಿಗೆ ಮಧ್ಯಪ್ರದೇಶದಲ್ಲಿ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗಾಗಿ ಚಳುವಳಿ ನಡೆದಾಗ ರೈತರ ಮೇಲೆ ಗೋಲಿಬಾರ್ ನಡೆದು 5 ಜನ ರೈತರು ಪ್ರಾಣ ಕಳೆದುಕೊಂಡರು. ಈ ಚಳುವಳಿಯಲ್ಲಿ ಅಖಿಲ ಭಾರತ ಕಿಸಾನ್ ಸಮನ್ವಯ ಸಮಿತಿ(ಎ.ಐ.ಕೆ.ಸಿ.ಸಿ.) ಹುಟ್ಟಿತು. ಮೇದಾ ಪಾಟ್ಕರ್, ಯೋಗೇಂದ್ರ ಯಾದವ್ ಸೇರಿದಂತೆ ಸಮಾಜವಾದಿಗಳು ಈ ಚಳುವಳಿಯಲ್ಲಿ ಜೊತೆಯಾದರು. ಸುಮಾರು 200 ಸಂಘಟನೆಗಳು ಸೇರಿದ ಆಲ್ ಇಂಡಿಯಾ ಕಿಸಾನ್ ಕೋ-ಆರ್ಡಿನೇಷನ್ ಕಮಿಟಿ(ಎ.ಐ.ಕೆ.ಸಿ.ಸಿ.) ರಚನೆಯಾಯಿತು. ಹೋರಾಟ ಮುಂದುವರೆಯಿತು. ಈ ಹೋರಾಟಕ್ಕೆ ಸ್ಫೂರ್ತಿಯಾಗಿ, ರಾಜಾಸ್ಥಾನದಲ್ಲಿ ನಡೆದ ರೈತ ಪ್ರಭಾವಶಾಲಿ ಚಳುವಳಿ, ಮಹಾರಾಷ್ಟ್ರದಲ್ಲಿ ನಾಸಿಕ್‌ನಿಂದ ಮುಂಬೈವರೆಗೆ ನಡೆದ ರೈತರ ಅಭೂತಪೂರ್ವ ಪಾದಯಾತ್ರೆಯ ಹೋರಾಟಗಳಿದ್ದವು. ಈ ಹೋರಾಟಗಳ ಮುಂದುವರಿಕೆಯಾಗಿ ಕರಾಳ ಕೃಷಿ ಕಾಯ್ದೆಗಳ ವಿರುದ್ಧ, ದೆಹಲಿಯಲ್ಲಿ ಐತಿಹಾಸಿಕ ಹೋರಾಟ ನಡೆಯಿತು ಎನ್ನುವುದು ಗಮನಾರ್ಹ.

ಈ ಚಳುವಳಿಯ ಮೂಲಕ ನಮಗೆ ವಿದೇಶಿ ಕಾರ್ಪೋರೇಟ್ ಪರ ಮತ್ತು ವಿರೋಧ ಎಂಬ ಗೆರೆ ಎಳೆಯುವುದು ಸಾಧ್ಯವಾಗಬೇಕು. ಇದು ಶೋಷಿತ ಜನರ ಸಂಘಟನೆಗಳಿಂದ, ಸಾಮೂಹಿಕ ಚಳುವಳಿಗಳಿಂದ ಮಾತ್ರ ಸಾಧ್ಯವಾಗುವಂತದ್ದು.

ಕೃಷಿ ಸಾಲ ಮನ್ನಾ, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಈ ಎರಡೂ ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಎ.ಐ.ಕೆ.ಸಿ.ಸಿ. ಅಖಿಲ ಭಾರತ ಜಾತಾವನ್ನು ಸಂಘಟಿಸಿತು. ಈ ಸಂಬಂಧ ಪಾರ್ಲಿಮೆಂಟಿನಲ್ಲಿ ಖಾಸಗಿ ಮಸೂದೆಗಳನ್ನು ಮಂಡಿಸಲಾಯಿತು. ದೆಹಲಿಯಲ್ಲಿ ಸಾವಿರಾರು ಜನ ಸೇರಿ ಗಂಭೀರವಾಗಿ ಚರ್ಚಿಸಿ ರೈತ ಋಣಮುಕ್ತ ಕಾಯಿದೆಯನ್ನು ರೂಪಿಸಲಾಯಿತು. ಸಂಸದ ಎಂ.ಬಿ. ರಾಜೇಶ್ ಈ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದರು. ಈ ಹಂತದಲ್ಲಿ 200 ಸಂಘಟನೆಗಳನ್ನು ಒಳಗೊಂಡ ಎ.ಐ.ಕೆ.ಸಿ.ಸಿ. ಕಾರ್ಮಿಕ ಸಂಘಟನೆಗಳ ಜೊತೆ ನವೆಂಬರ್ 26, 2020 ರ ಐತಿಹಾಸಿಕ ಪಾರ್ಲಿಮೆಂಟ್ ಚಲೋ ಚಳುವಳಿ ಕುರಿತು ಚರ್ಚೆ ನಡೆಸಿತು. ಈ ಹಂತದಲ್ಲಿ ಹರ್ಯಾಣ, ಪಂಜಾಬ್, ರಾಜಾಸ್ತಾನ್, ಉತ್ತರ ಪ್ರದೇಶಗಳಲ್ಲಿ ಬಹಳ ಗಟ್ಟಿಯಾದ ನೆಲೆ ಹೊಂದಿರುವ ಹಲವು ಪ್ರಾಂತೀಯ ರೈತ ಸಂಘಟನೆಗಳು ಚಳುವಳಿಗೆ ಸೇರಿದವು. ಕೃಷಿ ಸಾಲ ಮನ್ನಾ, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಬೇಡಿಕೆ ಅಲ್ಲದೇ, ಇನ್ನು 17 ಬೇಡಿಕೆಗಳು ಸೇರಿಕೊಂಡಂತೆ ಒಟ್ಟಾರೆ 19 ಬೇಡಿಕೆಗಳ ಆಧಾರದಲ್ಲಿ ದೆಹಲಿ ಚಳುವಳಿ ಆರಂಭವಾಯಿತು.

ಸ್ಪಂದಿಸದ ಸರಕಾರ

ರೈತ ಚಳುವಳಿ ಕುರಿತು ಬಿಜೆಪಿ ನೇತೃತ್ವದ ಕೇಂದ್ರ ಎನ್.ಡಿ.ಎ. ಸರಕಾರದ ಧೋರಣೆ ನಕಾರಾತ್ಮಕವಾಗಿತ್ತು. 9 ಸುತ್ತು 10 ಸುತ್ತುಗಳ ಚರ್ಚೆ ನಡೆದರೂ ಸರಕಾರ ಬೇಡಿಕೆಗಳನ್ನು ಒಪ್ಪಲಿಲ್ಲ. ಹೋರಾಟ ಮುಂದುವರೆಯಿತು. ಕೊನೆಗೆ ಉತ್ತರ ಪ್ರದೇಶದ ವಿಧಾನ ಸಭಾ ಚುನಾವಣೆಯಲ್ಲಿ ತನಗೆ ಹಿನ್ನಡೆಯಾಗಬಹುದು ಎಂಬ ಕಾರಣಕ್ಕಾಗಿ ಸರಕಾರ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಲು ಒಪ್ಪಿತು.

ಇದು ಕಾರ್ಪೋರೇಟ್ ಶಕ್ತಿಗಳು ಮತ್ತು ದುಡಿಯುವ ಜನರ ನಡುವಿನ ಸಂಘರ್ಷ

ಅಭೂತಪೂರ್ವ

ಒಮ್ಮೆ ಪಾರ್ಲಿಮೆಂಟಿನಲ್ಲಿ ಮಂಡಿಸಿ ಅಂಗೀಕರಿಸಲಾದ ಕಾಯ್ದೆಗಳಿಗೆ, ನಂತರದ ಪ್ರತಿಭಟನೆ, ಚಳುವಳಿಗಳ ಕಾರಣಕ್ಕಾಗಿ ತಿದ್ದುಪಡಿ ತಂದ ಉದಾಹರಣೆಗಳು ಹಲವು ಇವೆ. ಆದರೆ ದೇಶದ ಪಾರ್ಲಿಮೆಂಟಿನಲ್ಲಿ ಮಂಡಿಸಿದ್ದ ಕಾಯ್ದೆಗಳನ್ನು, ಅದೇ ಪಾರ್ಲಿಮೆಂಟಿನಲ್ಲಿ ಮಂಡಿಸಿ ಕಾಯ್ದೆಗಳನ್ನು ರದ್ದು ಮಾಡಿದ ಉದಾಹರಣೆ ಇದೇ ಮೊದಲು. ಹೀಗಾಗಿ ಇದೊಂದು ಅಭೂತಪೂರ್ವ ಚಳುವಳಿ ಎಂಬ ಖ್ಯಾತಿಯನ್ನು ಗಳಿಸಿದೆ.

ಈಗ ವಾಪಸ್ ಪಡೆದ ಮೂರು ಕೃಷಿಕಾಯ್ದೆಗಳ ಪ್ರಶ್ನೆ ಮಾತ್ರವಲ್ಲ, ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ಜಾರಿ ಮತ್ತು ಜನ ವಿರೋಧಿ 'ವಿದ್ಯುತ್(ತಿದ್ದುಪಡಿ) ಮಸೂದೆ-2022' ಅನ್ನು ವಾಪಸ್ ಪಡೆಯಬೇಕೆಂಬ ಪ್ರಶ್ನೆಗಳು ಕೂಡ ಬೇಡಿಕೆಗಳಲ್ಲಿ ಸೇರಿವೆ.

ಈ ವಿಷಯಗಳಲ್ಲಿ ಸರಕಾರವು ಚಳುವಳಿಯ ಬೇಡಿಕೆಗಳನ್ನು ಈಡೇರಿಸುವುದಾಗಿ ಲಿಖಿತ ಭರವಸೆ ಕೊಟ್ಟು ನಂತರ ರೈತರಿಗೆ ಮತ್ತು ಚಳುವಳಿಗೆ ದ್ರೋಹ ಬಗೆದಿದೆ. ಬೆಂಬಲ ಬೆಲೆಗೆ ಸಂಬಂಧಿಸಿದಂತೆ ಕಾಯ್ದೆಯನ್ನು ಮಾಡಿಲ್ಲ. ಜನವಿರೋಧಿ ವಿದ್ಯುತ್ ಮಸೂದೆಯನ್ನೇ ಮತ್ತೆ ಮಂಡಿಸಲಾಗಿದೆ.

ಕರ್ನಾಟಕದಲ್ಲಿ ಕಳೆದ 20-25 ವರ್ಷಗಳಲ್ಲಿ ಹತ್ತಾರು ಚಳುವಳಿಗಳು ನಡೆದಿದ್ದರೂ ಸಹ ಈಗ ನಡೆಯುತ್ತಿರುವಂತಹ ಸಂಘಟಿತ ರೂಪದ ಐಕ್ಯ ಚಳುವಳಿ ನಡೆದಿರಲಿಲ್ಲ. ಈ ನವೆಂಬರ್ 26, 2023 ರ ಚಳುವಳಿ ಕಳೆದ 20-25 ವರ್ಷಗಳಲ್ಲೇ ಅತ್ಯಂತ ಸುಸಂಘಟಿತ ಚಳುವಳಿಯಾಗಿ ದಾಖಲೆ ಬರೆಯಲಿದೆ.

ರೈತರ ಕಗ್ಗೊಲೆಗಳ ವಿಷಯದಲ್ಲೂ ಕ್ರಮವಿಲ್ಲ

ಜೀಪು ಹರಿಸಿ ಎಂಟು ಜನ ರೈತ ಚಳುವಳಿಕಾರರನ್ನು ಕೊಂದ ಉತ್ತರ ಪ್ರದೇಶದ 'ಲಕಿಮ್‌ಪುರ ಖೇರಿ' ಹತ್ಯಾಕಾಂಡದ ವಿಷಯದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡಿಲ್ಲ, ದೆಹಲಿ ರೈತ ಚಳುವಳಿಯಲ್ಲಿ ಹುತಾತ್ಮರಾದ 700 ಜನ ರೈತರಿಗೆ ಒಂದು ಸ್ಮಾರಕ ನಿರ್ಮಿಸಬೇಕೆಂಬ ಬೇಡಿಕೆಯೂ ಈಡೇರಿಲ್ಲ.

ಈ ಎಲ್ಲ ಹಿನ್ನೆಲೆಯಲ್ಲಿ ವಚನ ಭ್ರಷ್ಟ ಬಿಜೆಪಿ ಸರಕಾರ ಮತ್ತೆ ಅಧಿಕಾರಕ್ಕೆ ಬರಬಾರದು ಎಂಬ ಗುರಿಯೊಂದಿಗೆ ನವೆಂಬರ್ 26, 2023 ರಿಂದ 28 ರವರೆಗೆ ದೇಶದಾದ್ಯಂತ ರಾಜಭವನದ ಮುಂದೆ ಸಾಮೂಹಿಕ ಮಹಾ ಧರಣಿಯನ್ನು ಸಂಘಟಿಸಲಾಗುತ್ತಿದೆ. ನಂತರವೂ ಚಳುವಳಿ ಮುಂದುವರೆಯುತ್ತದೆ. ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.)ವು ಬಿಜೆಪಿ ಮತ್ತೆ ಅಧಿಕಾರಕ್ಕೆ ಬರದಂತೆ ತಡೆಯಲು ಕರೆ ನೀಡುತ್ತದೆ.



ಮೂಲಭೂತ ಸಂಘರ್ಷ ಏನು

ಈ ಚಳುವಳಿಯ ವಿಷಯದಲ್ಲಿ ನಡೆಯುತ್ತಿರುವ ಮೂಲಭೂತ ಸಂಘರ್ಷ ಏನು ಎಂಬುದು ಮುಖ್ಯ ಪ್ರಶ್ನೆ. ದೇಶದ ರೈತಾಪಿ ಕೃಷಿ ಉಳಿಯ ಬೇಕಾ? ಅಥವಾ ರೈತಾಪಿ ಕೃಷಿ ನಾಶವಾಗಿ ಆ ಜಾಗದಲ್ಲಿ ಕಾರ್ಪೋರೇಟ್ ಕೃಷಿ ಬರಬೇಕಾ? ಎಂಬುದು ಇಲ್ಲಿನ ನಿಜವಾದ ಸಂಘರ್ಷ. ಕೃಷಿ ರಂಗದಲ್ಲಿ ಮಾತ್ರವಲ್ಲ, ಶಿಕ್ಷಣ, ಆರೋಗ್ಯ, ಕೈಗಾರಿಕೆ ಮುಂತಾದ ರಂಗಗಳಲ್ಲಿ ಸಹ ಇದೇ ರೀತಿಯ ಸಂಘರ್ಷವು ಕಾರ್ಪೋರೇಟ್ ಶಕ್ತಿಗಳ ವಿರುದ್ಧ ನಡೆಯುತ್ತಿದೆ. ಈ ಸಂದರ್ಭದಲ್ಲಿ ಕೃಷಿರಂಗದ ವಿಷಯ ವಿಶೇಷ ಪ್ರಾಮುಖ್ಯತೆ ಪಡೆದುಕೊಂಡಿದೆ, ಯಾಕೆಂದರೆ ಭಾರತ ದೇಶದಲ್ಲಿ ಈಗಲೂ ಸುಮಾರು ಶೇ.50 ಕ್ಕಿಂತಲೂ ಹೆಚ್ಚು ಜನರು ಜೀವನೋಪಾಯಕ್ಕಾಗಿ ಕೃಷಿಯನ್ನೇ ಅವಲಂಭಿಸಿದ್ದಾರೆ. ಕೇಂದ್ರ ಸರಕಾರವು ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿದ್ದರೂ ಸಹ ರಾಜ್ಯ ಸರಕಾರಗಳ ಮೇಲೆ ಒತ್ತಡ ಹಾಕಿ ಭೂಮಿ, ಕೃಷಿ ಉತ್ಪಾದನೆ, ಕೃಷಿ ಉತ್ಪನ್ನ ಮಾರುಕಟ್ಟೆ ವಿಷಯಗಳಲ್ಲಿ ಅದೇ ಕಾರ್ಪೋರೇಟ್ ಪರ ನೀತಿಗಳನ್ನು, ಕಾಯ್ದೆಗಳನ್ನು ಜಾರಿ ಮಾಡಿಸಲು ಪ್ರಯತ್ನ ನಡೆಸುತ್ತಿದೆ. ಭೂ ಸುಧಾರಣಾ ಕಾಯ್ದೆ, ಎ.ಪಿ.ಎಂ.ಸಿ. ಕಾಯ್ದೆ, ಕಾಂಟ್ರಾಕ್ಟ್ ಕೃಷಿ ಕಾಯ್ದೆ, ಅವಶ್ಯಕ ವಸ್ತುಗಳ ಕಾಯ್ದೆ ಈ ಎಲ್ಲ ವಿಷಯಗಳಲ್ಲಿ ಕಾರ್ಪೋರೇಟ್ ಶಕ್ತಿಗಳ ಅನುಕೂಲಕ್ಕೆ ತಕ್ಕಂತೆ ಕೇಂದ್ರ ಸರಕಾರವು ಹಣಕಾಸು ಬಂಡವಾಳದ ಪರವಾಗಿ ಕೆಲಸ ಮಾಡುತ್ತಿದೆ.

ರೈತರ ಬಳಿ ಬಂಡವಾಳ ಇಲ್ಲ, ತಂತ್ರಜ್ಞಾನ ಇಲ್ಲ, ಭೂಮಿ ಛಿದ್ರ ಆಗಿದೆ, ಇಂತಹ ಪರಿಸ್ಥಿತಿಯಲ್ಲಿ ಭೂಮಿಯನ್ನು ಒಗ್ಗೂಡಿಸಿ ಕಾರ್ಪೋರೇಟ್ ಕೃಷಿ ಮಾಡಬೇಕು ಎಂದು ಈ ಎಲ್ಲ ಜನವಿರೋಧಿ ಧೋರಣೆ ಮತ್ತು ಕಾಯ್ದೆಗಳಿಗೆ ಸಮರ್ಥನೆ ನೀಡಲಾಗುತ್ತಿದೆ.

ಭೂಮಿ ಹಂಚಿ-ಸಬ್ಸಿಡಿ ಕೊಡಿ

ಆದರೆ ಚಳುವಳಿಯ ಬೇಡಿಕೆಗಳು ಭಿನ್ನವಾಗಿವೆ. ದೃಢವಾಗಿವೆ. ಭಾರತದ ಶೇ. 40 ರಷ್ಟು ಗ್ರಾಮೀಣ ಜನರಿಗೆ ಸ್ವಂತ ಭೂಮಿಯೇ ಇಲ್ಲ. ಅವರಿಗೆ ಅಗತ್ಯ ಪ್ರಮಾಣದ ಭೂಮಿಯನ್ನು ನೀಡಬೇಕು. ಭೂಮಿ ಹಂಚಿಕೆ ಆದ ಮೇಲೆ, ಬೀಜ, ನೀರು, ಗೊಬ್ಬರ, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ಸಬ್ಸಿಡಿ ದರದಲ್ಲಿ ನೀಡಬೇಕು. ಇದಲ್ಲದೇ ಮಾರುಕಟ್ಟೆ ಸೌಕರ್ಯವನ್ನು ಒದಗಿಸಬೇಕು. ಸಹಕಾರಿ ಸಂಸ್ಥೆಗಳ ಮತ್ತು ಸಹಕಾರಿ ಚಳುವಳಿಯ ಮೂಲಕ ಈ ಎಲ್ಲವನ್ನು ಸಾಧಿಸಬೇಕು. ಇದರಿಂದ ಗ್ರಾಮೀಣ ಪ್ರದೇಶಗಳ ಬಡತನ ನಿವಾರಣೆ ಸಹ ಸಾಧ್ಯವಾಗುತ್ತದೆ ಜೊತೆಗೆ ದೇಶದ ಆಹಾರ ಭದ್ರತೆಯನ್ನು ಸಾಧಿಸಿದಂತೆ ಆಗುತ್ತದೆ.

ಈಗ ನಡೆಯುತ್ತಿರುವುದು ಕಾರ್ಪೋರೇಟ್ ಹಿತಾಸಕ್ತಿಗಳ ವಿರುದ್ಧದ ಜನ ಸಾಮಾನ್ಯರ ಸಂಘರ್ಷ. ಈ ಚಳುವಳಿಯ ಮೂಲಕ ನಮಗೆ ವಿದೇಶಿ ಕಾರ್ಪೋರೇಟ್ ಪರ ಮತ್ತು ವಿರೋಧ ಎಂಬ ಗೆರೆ ಎಳೆಯುವುದು ಸಾಧ್ಯವಾಗಬೇಕು.

ಪುಟ 10 ಕ್ಕೆ

ಜನಪರ ಪರ್ಯಾಯ ನೀತಿಗಳಿಗಾಗಿ ಜನರ ಐಕ್ಯತೆಯನ್ನು ಕಟ್ಟುವಂತಹ ಮಹಾಧರಣಿ

ಮೀನಾಕ್ಷಿ ಸುಂದರಂ
ಸಿಐಟಿಯು, ರಾಜ್ಯ ಪ್ರಧಾನ ಕಾರ್ಯದರ್ಶಿ

ಬಿಜೆಪಿ ಸರ್ಕಾರ ಈ ದೇಶದ ಬಹುಸಂಖ್ಯಾತರನ್ನು ಒಳಗೊಳಿಸುವ ನೀತಿಗಳನ್ನು ಜಾರಿಗೆ ತರುತ್ತೇವೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಕಳೆದ ಹತ್ತು ವರ್ಷಗಳ ಆಡಳಿತ ಅವಧಿಯಲ್ಲಿ ದೇಶದ ಬಹುಸಂಖ್ಯಾತ ಜನರನ್ನು ಸಕ್ರಿಯ ಮಾರುಕಟ್ಟೆಯಿಂದ ಹೊರಗುಳಿಸುವುದೇ ಆಗಿದೆ. ಜನಸಾಮಾನ್ಯರು ದೈನಂದಿನ ಅಗತ್ಯಗಳ ಖರ್ಚಿಗೆ ಬೇಕಾದ ಹಣವೂ ಅವರ ಬಳಿ ಇಲ್ಲ ಎಂಬಂತಾಗಿದೆ. ಹೀಗಾಗಿ ಆರ್ಥಿಕ ಬೆಳವಣಿಗೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಸ್ಪಷ್ಟವಾಗಿ ಹೇಳಬೇಕೆಂದರೆ ದೇಶದ ಆರ್ಥಿಕತೆ ಒಂದು ತೀವ್ರವಾದ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಈ ಬಿಕ್ಕಟ್ಟು ಬಹುಶಃ ಇದೇ ವೇಗದಲ್ಲಿ ಬೆಳೆದರೆ ಹಸಿವು ಮತ್ತು ಬಡತನ ಎಂಬುದು ಎಲ್ಲೆಲ್ಲೂ ವ್ಯಾಪಿಸುತ್ತದೆ.

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳಿಗೆ ಒಂದು ವಿಶೇಷ ಗುಣಲಕ್ಷಣ ಇದೆ. ಇದು ಕೇವಲ ಬಂಡವಾಳಶಾಹಿ ಪರ ರೂಪಿಸುತ್ತಿರುವ ಆರ್ಥಿಕ ನೀತಿಗಳು ಮಾತ್ರವಲ್ಲ. ಈ ಆರ್ಥಿಕ ನೀತಿಗಳಿಗೆ ವ್ಯಾಪಕವಾಗಿ ಜನರ ಬೆಂಬಲ ಪಡೆಯಲು ಕೋಮುವಾದಿ ನೆಲೆಯಲ್ಲಿ ಜಾರಿಗೆ ತರುತ್ತಿರುವ ಹುನ್ನಾರ ಇದರ ಹಿಂದೆ ಇದೆ. ಇದನ್ನು ಈ ದೇಶದ ಜನ ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವ ಜರೂರು ಇದೆ.

ಕೇಂದ್ರ ಸರ್ಕಾರ ಅನುಸರಿಸುತ್ತಿರುವ ನೀತಿಗಳು ಈ ದೇಶದ ಸಾಮಾನ್ಯ ಜನರ ಹಿತವನ್ನು ಕಡೆಗಣಿಸುತ್ತಿದೆ. ದೇಶಿ ಮತ್ತು ವಿದೇಶಿ ಕಾರ್ಪೊರೇಟ್ ಕಂಪನಿಗಳ ಹಿತವನ್ನು ಕಾಪಾಡುವ ಉದ್ದೇಶವನ್ನು ಹೊಂದಿದೆ. ಇದರಿಂದಾಗಿ ದೇಶದ ಒಳಗೆ ಆರ್ಥಿಕ ಅಸಮಾನತೆ ವಿಪರೀತವಾಗುತ್ತಿದೆ. ಕೆಲವೇ ಜನರ ಕೈಯಲ್ಲಿ ಇಡೀ ದೇಶದ ಸಂಪತ್ತು ಕ್ರೋಡೀಕರಣವಾಗುತ್ತದೆ.

ಅದು ದೇಶದಲ್ಲಿ ಪ್ರಾಕೃತಿಕವಾಗಿ ಲಭ್ಯವಾಗುತ್ತಿರುವ ಖನಿಜ ಸಂಪತ್ತು ಮತ್ತು ಆರ್ಥಿಕವಾಗಿ ದೊರೆಯುವ ಮೂಲ ಸಂಪತ್ತಿರಲಿ, ಅವುಗಳ ಒಡೆತನ ಇರಲಿ, ಜನಜೀವನದ ಎಲ್ಲಾ ಸೇವೆಗಳು ಇರಲಿ ಎಲ್ಲವನ್ನೂ ಲಾಭದ ನೆಲೆಯಲ್ಲಿ ನೋಡುವ ಸ್ಥಿತಿಯನ್ನು ಉಂಟು ಮಾಡುತ್ತಿದೆ. ಇದು ದೇಶದ ಭವಿಷ್ಯಕ್ಕೆ ಮತ್ತು ಮುಂದಿನ ಪೀಳಿಗೆಗೆ ಮಾರಕವಾಗುತ್ತದೆ. ಅವರ ಹಿತವನ್ನು ನಗಣ್ಯ ಮಾಡುವಂತಹ ಅಪ್ಪಟ ದೇಶದ್ರೋಹಿ ಕೆಲಸವಾಗಿದೆ.

ಇದರ ವಿರುದ್ಧ ಈ ದೇಶದ ಸಂಪತ್ತನ್ನು ಸೃಷ್ಟಿಸುವ ಕೃಷಿ ಕೂಲಿ ಕಾರ್ಮಿಕರು, ಕಾರ್ಮಿಕರು, ರೈತರು ಅಣಿನೆರೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ 26, 27 ಮತ್ತು 28ರಂದು ದೇಶದ ಎಲ್ಲ ರಾಜ್ಯಗಳ ರಾಜಧಾನಿಗಳಲ್ಲಿ ಮಹಾಧರಣಿಗಳನ್ನು ನಡೆಸಲಾಗುತ್ತಿದೆ. ಇದರ ಭಾಗವಾಗಿ ಬೆಂಗಳೂರಿನಲ್ಲಿಯೂ ನಡೆಯುತ್ತಿದೆ.



ಅನ್ನಧಾತರ ಬದುಕಿನ ಭವಣೆ ನಿವಾರಣೆಗೆ ಪ್ರಯತ್ನಗಳಿಲ್ಲ

ಈ ದೇಶದ ಅನ್ನಧಾತರಾಗಿರುವಂತಹ ಕೃಷಿಕೂಲಿ ಕಾರ್ಮಿಕರು ಮತ್ತು ರೈತರ ಬದುಕಿನ ಬವಣೆಗಳನ್ನ ನಿವಾರಿಸಲಿಕ್ಕೆ ಸರ್ಕಾರ ಯಾವುದೇ ಪ್ರಯತ್ನಗಳನ್ನು ಮಾಡುತ್ತಿಲ್ಲ. ಒಂದು ವರ್ಷಕ್ಕೂ ಹೆಚ್ಚು ಕಾಲ ದೆಹಲಿಯ ರಾಜಧಾನಿಯ ಗಡಿಗಳಲ್ಲಿ ಲಕ್ಷಾಂತರ ರೈತರು ಧೀರೋದ್ಧಾತ ಹೋರಾಟಗಳನ್ನು ನಡೆಸಿದರು. ಅವರ ಬೇಡಿಕೆ ಇಷ್ಟೇ ಇತ್ತು. ರೈತರು ಬೆಳೆದ ಫಸಲಿಗೆ ಬೆಂಬಲ ಬೆಲೆ ನೀಡಬೇಕು. ವಿದ್ಯುತ್‌ಶಕ್ತಿಯನ್ನು ಖಾಸಗೀಕರಣ ಮಾಡಬಾರದು ಮತ್ತು ರೈತರ ಬೆಳೆಗಳಿಗೆ ಕೃಷಿ ತಜ್ಞರಾಗಿದ್ದ ಸ್ವಾಮಿನಾಥನ್ ವರದಿ ಅನುಸಾರ ಸಿ2+50 ಎಂಬ ಬೇಡಿಕೆಯನ್ನು ಮುಂದಿಟ್ಟಿದ್ದರು. ಜೊತೆಗೆ ಗ್ರಾಮೀಣ ಉದ್ಯೋಗದ ಮತ್ತು ಗ್ರಾಮೀಣದ ಆರ್ಥಿಕತೆಗೆ ಅಗತ್ಯವಾದ ಪ್ರೋತ್ಸಾಹ ನೀಡಬೇಕೆಂಬುದು ಅವರ ಬೇಡಿಕೆಯಾಗಿತ್ತು. ಇದಕ್ಕೆ ಪೂರಕವಾಗಿರುವ ನೀತಿಗಳನ್ನು ಜಾರಿಗೆ ತರಬೇಕು ಎಂಬುದು ರೈತರ ಬೇಡಿಕೆಯಾಗಿತ್ತು.

ರೈತರ ಮುಂದೆ ಹಲವಾರು ಬೇಡಿಕೆಗಳನ್ನು ಒಪ್ಪಿದರೂ ಜಾರಿಗೆ ತರುವ ಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಇಲ್ಲ. ಬದಲಾಗಿ, ಸರ್ಕಾರ ಕಾರ್ಪೊರೇಟ್ ಪರ ನೀತಿಗಳನ್ನು ಜಾರಿ ಮಾಡಲಿಕ್ಕೆ ಹಿಂಬಾಗಿಲಿನಿಂದ ಆದೇಶಗಳನ್ನು ಹೊರಡಿಸುವ ಪ್ರಯತ್ನವನ್ನು ಮಾಡುತ್ತಿದೆ. ಕೃಷಿಯನ್ನು ಕೂಡಾ ಕಾರ್ಪೊರೇಟ್ ಬಂಡವಾಳಕ್ಕೆ ಧಾರೆ ಎರೆಯುವಂತಹ ನೀತಿಗಳನ್ನು ಸರ್ಕಾರ ಮಾಡುತ್ತಿದೆ. ಮಾತ್ರವಲ್ಲ ಕೃಷಿ ಉತ್ಪನ್ನಗಳ ಮಾರಾಟದಲ್ಲೂ ಕೂಡಾ ಬರುವಂತಹ ಮೌಲ್ಯ ಹೆಚ್ಚಳದ ಲಾಭವನ್ನು ಖಾಸಗಿಯಾಗಿ ಪರಿವರ್ತಿಸಿ, ಯಾವುದೇ ಶ್ರಮವನ್ನು ಹಾಕದಿರುವ ಕಾರ್ಪೊರೇಟ್‌ಗಳ ಕೈಗೆ ಒಪ್ಪಿಸುವಂತಹ ಕೆಲಸವನ್ನು ಮಾಡುತ್ತಿದೆ. ಇದನ್ನು ರೈತರು, ರೈತಾಪಿ ಜನರು ಗಮನಿಸುತ್ತಿದ್ದಾರೆ.

ಕೃಷಿಕರಿಗೆ ಲಾಭದ ಖಾತರಿಯಿಲ್ಲ

ಉದ್ಯಮಿಗಳಿಗೆ ಲಾಭದ ಖಾತರಿ ಇದೆ. ಸಮಗ್ರ ವಿಮಾ ಸೌಲಭ್ಯವಿದೆ. ಆದರೆ ಕೃಷಿಕರಿಗೆ ಇಂತಹ ವ್ಯವಸ್ಥೆ ಇಲ್ಲ. ಹೀಗಾಗಿ ಕೃಷಿ ಅಭಿವೃದ್ಧಿಗೆ ಮತ್ತು ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆಗೆ ಒತ್ತಾಯಿಸಿ ರೈತರು ಹೋರಾಟಕ್ಕೆ ಹೊರಟಿದ್ದಾರೆ. ಕೃಷಿಗೆ ವಿಮೆ ನೀಡಬೇಕು. ಬೆಳೆಗಳು ನಷ್ಟವಾಗುವಂತಹ ಪರಿಸ್ಥಿತಿ ಬಂದರೆ ನೈಸರ್ಗಿಕ ವಿಕೋಪ ಬಂದಲ್ಲಿ ಅಥವಾ ಅತಿವೃಷ್ಟಿ–ಅನಾವೃಷ್ಟಿ ಸಂಭವಿಸಿದಲ್ಲಿ ನಷ್ಟ ಪರಿಹಾರವನ್ನು ನೀಡಲು ಮತ್ತು ಯೋಗ್ಯವಾದ ವಿಮೆಗಾಗಿ ಆಗ್ರಹಿಸಿ ಹೋರಾಟ ಮಾಡಲಾಗುತ್ತಿದೆ.



ಆದರೆ ಆ ವಿಮೆ ಯೋಜನೆಯನ್ನೂ ಕೂಡಾ ಖಾಸಗಿ ವಿಮಾ ಕಂಪನಿಗಳಿಗೆ ನೀಡುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಬೆಳೆ ನಷ್ಟವಾದಾಗ ವಿಮಾ ಕಂಪನಿಗಳಿಂದ ಸಿಗುವ ಪರಿಹಾರ ಮೊತ್ತ ನಗಣ್ಯವಾಗಿದೆ. ರೈತರು ಕಟ್ಟುವ ಪ್ರೀಮಿಯಂ ಹಣಕ್ಕೂ ಅವರಿಗೆ ಸಿಗುವ ಪರಿಹಾರಕ್ಕೂ ಭಾರೀ ವ್ಯತ್ಯಾಸವಿದೆ. ಇದರ ಮೂಲಕ ರೈತರಿಂದ ಹಣ ದೋಚುವಂತಹ ಅಂದರೆ ಕೊಳ್ಳೆ ಹೊಡೆಯುವಂತಹ ಹುನ್ನಾರ ಇದರ ಹಿಂದಿದ್ದು, ಕೇಂದ್ರ ಸರ್ಕಾರ ಇದನ್ನು ಮಾಡುತ್ತಿದೆ.

ಹೀಗಾಗಿ ಇವೆಲ್ಲವನ್ನೂ ಅಂದರೆ ಕೃಷಿಗೆ ರಕ್ಷಣೆ, ಬೆಳೆಗಳಿಗೆ ರಕ್ಷಣೆ, ರೈತರಿಗೆ ರಕ್ಷಣೆ ಇವೆಲ್ಲವೂ ಕೊನೆಗೆ ಅಂತ್ಯಗೊಳ್ಳುವುದು ಕಾರ್ಪೊರೇಟ್ ಕಂಪನಿಗಳು ಹಣ ದೋಚುವುದರಲ್ಲಿ ಇಂತಹ ಧೋರಣೆ ಬದಲಾಗಬೇಕೆಂಬುದು ರೈತರ ಬೇಡಿಕೆಯಾಗಿದೆ.

ಕಾರ್ಮಿಕರಿಗೆ ಕೆಲಸದ ಭದ್ರತೆ ಇಲ್ಲ

ಇನ್ನು ಕಾರ್ಮಿಕರ ಪ್ರಶ್ನೆಗಳಿಗೆ ಬಂದರೆ ದೇಶದ ಒಳಗೆ ಸಾಕಷ್ಟು ಸಂಖ್ಯೆಯಲ್ಲಿ ನಿರುದ್ಯೋಗ ಬೆಳೆಯುತ್ತಿದೆ. ಈ ನಿರುದ್ಯೋಗ ಬೆಳೆಯುತ್ತಿರುವ ಉದ್ಯೋಗ ಅವಕಾಶಗಳು ಇಲ್ಲದಿರುವ ಕಾರಣದಿಂದ ಅಲ್ಲ. ಉದ್ಯೋಗ ಅವಕಾಶಗಳನ್ನು ಯೋಜನಾ ಬದ್ಧವಾಗಿ ಸೃಷ್ಟಿ ಮಾಡದೆ, ಲೇಬರ್ ಮಾರುಕಟ್ಟೆಯ ಒಳಗೆ ಅತಿಹೆಚ್ಚು ಸರಬರಾಜು ಭಾಗ ಹೆಚ್ಚು ಮಾಡಿ, ಬೇಡಿಕೆಯನ್ನು ಕಡಿಮೆ ಮಾಡುವುದರ ಮೂಲಕ ಕೂಲಿಯನ್ನು ಕಡಿತಗೊಳಿಸಲಿಕ್ಕೆ ಪ್ರಯತ್ನ ಮಾಡಲಾಗುತ್ತಿದೆ.

ದೇಶದಲ್ಲಿ ಕೇಂದ್ರ ಸರ್ಕಾರವನ್ನು ಆಯ್ಕೆ ಮಾಡಿದ ಜನರನ್ನು ಮತ್ತು ಅವರ ಮಕ್ಕಳನ್ನು ಗುತ್ತಿಗೆ ಕಾರ್ಮಿಕರಾಗಿ ನೇಮಿಸಿಕೊಳ್ಳಲಾಗುತ್ತಿದೆ. ಅವರಿಗೆ ಯಾವುದೇ ರಕ್ಷಣೆ ಇಲ್ಲದ, ಕೆಲಸದ ಭದ್ರತೆ ಇಲ್ಲದ ಉದ್ಯೋಗಗಳಲ್ಲಿ ನೇಮಿಸಲಾಗುತ್ತಿದೆ. ಇದನ್ನು ಕಾನೂನು ಬದ್ಧವಾಗಿಯೇ ಮಾಡಲಾಗುತ್ತಿದ್ದು ಅಭದ್ರತೆಗೆ ದೂಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ.

ದೇಶದಲ್ಲಿ ಅಭದ್ರವಾದ ಉದ್ಯೋಗ ಮಾತ್ರವಲ್ಲ, ಅರೆ ಕಾಲಿಕ ಉದ್ಯೋಗವನ್ನೂ ಸೃಷ್ಟಿಸಲಾಗುತ್ತಿದೆ. ಜೊತೆಗೆ ಅವಲಂಬಿಸಲಾಗದಂತಹ ಉದ್ಯೋಗ ಸೃಷ್ಟಿಯಾಗುತ್ತಿದೆ. ದೇಶದ ಬಹುಸಂಖ್ಯಾತ ಕಾರ್ಮಿಕರು ಈಗ ಮಾಡುತ್ತಿರುವ ಉದ್ಯೋಗ ನಾಳೆ ಬೆಳಗ್ಗೆ ತನ್ನದಾಗಿರುತ್ತದೆಯೇ ಇಲ್ಲವೇ ಎಂಬ ಆತಂಕದಲ್ಲಿ ದಿನ ದೂಡುತ್ತಿದ್ದಾರೆ. ಮಾತ್ರವಲ್ಲ ಕಾರ್ಮಿಕರು ವೇತನಕ್ಕಾಗುವ ಖರ್ಚುಗಳನ್ನು ಮಾಡಲಿಕ್ಕೆ ಮುಂದಾಗಿರುವ ಪ್ರಯೋಗಗಳು ಇವೆಯಲ್ಲ ಅವು ತುಂಬಾ ಅಪಾಯಕಾರಿ.

ಕಾರ್ಮಿಕರ ಸೌಲಭ್ಯಗಳಿಗೆ ಕತ್ತರಿ

ದೇಶದಲ್ಲಿ ಎಂತಹ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದರೆ, ಕಾರ್ಮಿಕ ವರ್ಗ ನೂರಾರು ವರ್ಷ ಸಮರಧೀರ ಹೋರಾಟಗಳ ಮೂಲಕ ಪಡೆದಂತಹ ಸೌಲಭ್ಯಗಳನ್ನು ಸರ್ಕಾರವೇ ಕಾನೂನು ಮಾಡಿ ಕಿತ್ತು ಹಾಕುವಂತಹುದು. ಕೆಲಸದ ಭದ್ರತೆಯನ್ನು ಕೇಳಲಿಕ್ಕೆ ಹಕ್ಕಿಲ್ಲ, ಕಾರ್ಮಿಕರ ಸಂಘಟನೆ ಮಾಡುವ ಹಕ್ಕಿಲ್ಲ, ಪಿಂಚಣಿ ಇಲ್ಲ. ಅದು ಮಾತ್ರವಲ್ಲದೆ, ಸಾಮಾಜಿಕ ರಕ್ಷಣಾ ಯೋಜನೆಗಳಾದ ಪಿಎಫ್ಐ, ಇಎಸ್ಐ, ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ನೀಡುವಂತಹ ಸೌಲಭ್ಯಗಳು, ಕ್ಯಾಂಟೀನ್ ಸೌಲಭ್ಯಗಳು, ಹೆಚ್ಚುವರಿ ಕೆಲಸಕ್ಕೆ ಎರಡುಪಟ್ಟು ವೇತನ ನೀಡುವಂತಹ ಸೌಲಭ್ಯಗಳು, ಖಾಲಿ ಹುದ್ದೆಗಳಿಗೆ ಖಾಯಂ ಸಿಬ್ಬಂದಿಯನ್ನು ನೇಮಕ ಮಾಡಿ ಎಂದು ಕೇಳುವ ಹಕ್ಕು ಇವೆಲ್ಲವನ್ನೂ ನಿರಾಕರಿಸಲಿಕ್ಕೆ ಅನುವಾಗುವಂತಹ ಕಾನೂನುಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ. ಮಾತ್ರವಲ್ಲದೆ, ಕೆಲಸದ ಸ್ಥಳದಲ್ಲಿ ಸಂರಕ್ಷಣೆ ಮಾಡುವಂತಹ ಹಕ್ಕುಗಳನ್ನು ಕಿತ್ತುಕೊಳ್ಳುವಂತಹ ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರಲಾಗುತ್ತಿದೆ.

ಈ ನಾಲ್ಕು ಸಂಹಿತೆಗಳನ್ನು ಜಾರಿಗೆ ತರಲು ಉದ್ದೇಶಿಸಲಾಗಿದ್ದು ಕಾರ್ಮಿಕ ಹಕ್ಕುಗಳನ್ನು ಬಡಮೇಲು ಮಾಡುವಂತಹ ಉದ್ದೇಶ ಇದರ ಹಿಂದೆ ಇದೆ. ಇದರಿಂದ ಈಗ ಕೆಲಸದಲ್ಲಿರುವಂತಹ ಕಾರ್ಮಿಕರಿಗೂ ಅಪಾಯ, ಮುಂದೆ ಕೆಲಸಕ್ಕೆ ಬರುವವರು ಕಾರ್ಮಿಕರಾಗಿಯೇ ಇರುವುದಿಲ್ಲ. ಮಾಲೀಕರು–ಕಾರ್ಮಿಕರ ಸಂಬಂಧಗಳನ್ನು ಮರೆ ಮಾಚುವ ಪ್ರಯತ್ನಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರಲಾಗುತ್ತಿದೆ. ಹೀಗಾಗಿ ಮಾಲೀಕರಿಗೆ ಕಾರ್ಮಿಕರ ಹಿತರಕ್ಷಣೆಯನ್ನು ನೋಡುವಂತಹ ಯಾವುದೇ ಹೊಣೆಗಾರಿಕೆ ಇಲ್ಲದಂತಾಗಲಿದೆ. ಇಂತಹ ವ್ಯವಸ್ಥೆಯನ್ನು ಮಾಡಲು ಸರ್ಕಾರ ಪ್ರಯತ್ನ ಮಾಡುತ್ತಿದೆ.

ಮಾಲೀಕರು ಕಾರ್ಮಿಕರಿಗೆ ಆಗುವ ವೇತನ ವೆಚ್ಚವನ್ನು ಕಡಿತಗೊಳಿಸಲಿಕ್ಕೆ ಸಾಕಷ್ಟು ಇನ್ಸೆಂಟೀವ್‌ಗಳನ್ನು ಕೊಡಲಾಗುತ್ತಿದೆ. ಅದು ಯಾವ ರೀತಿ ಎಂದರೆ ಈಗ ಹೊಸ ಟ್ರೈನಿಗಳಾಗಿ, ಅಪ್ರೆಂಟಿಸ್‌ಗಳಾಗಿ ಕಾರ್ಮಿಕರನ್ನು ತೆಗೆದುಕೊಂಡರೆ ಒಂದು ತಿಂಗಳಿಗೆ ಒಬ್ಬ ಕಾರ್ಮಿಕನಿಗೆ ಗರಿಷ್ಠ ರೂ. 1.500 ಸಬ್ಸಿಡಿ ನೀಡಲು ಸರ್ಕಾರ ಮುಂದಾಗಿದೆ.

ಈ ರೀತಿಯಲ್ಲಿ ಹಲವು ಯೋಜನೆಗಳನ್ನು ರೂಪಿಸಿ ದೇಶದ ಜನರಿಗೆ ಉದ್ಯೋಗಗಳನ್ನು ಸೃಷ್ಟಿಸದೆ ಮಾಲೀಕರು ಗಳಿಸುವ ಲಾಭದ ಒಟ್ಟು ಪಾಲನ್ನು ಮಾಲೀಕರೆ ಹೊತ್ತುಕೊಂಡು ಹೋಗಲು ಅನುವಾಗುವಂತೆ ಸರ್ಕಾರ ಕಾನೂನುಗಳನ್ನು ರೂಪಿಸುತ್ತಿದೆ.

ನಿರೀಕ್ಷಿತ ಮಟ್ಟದಲ್ಲಿ ಬಂಡವಾಳ ಹೂಡಿಕೆಯಾಗಿತ್ತಿಲ್ಲ

ಹೀಗಿದ್ದರೂ ಬಂಡವಾಳಗಾರರು ಗಳಿಸುವ ಲಾಭ ದೊಡ್ಡ ಮಟ್ಟದಲ್ಲಿ ಹೂಡಿಕೆಯಾಗುತ್ತಿಲ್ಲ. ಮಾಲೀಕರಿಗೆ ಎಲ್ಲಾ ರೀತಿಯ ಸೌವಲತ್ತುಗಳನ್ನು ಮಾಡಿಕೊಟ್ಟರೂ ಅಂದರೆ, ಸಿಂಗಲ್ ವಿಂಡೋ, ಪರವಾನಗಿ ಪಡೆಯಲು ಇರುವ ಸಮಸ್ಯೆಗಳ ➚

ಹಿಂದುತ್ವ-ಝಿಯೋನಿಸ್ಟ್ ಕೂಟವನ್ನು ವಿರೋಧಿಸಿ ಪ್ಯಾಲೆಸ್ತೀನನ್ನು ಬೆಂಬಲಿಸಿ

ಪ್ರಕಾಶ್ ಕಾರತ್

ಗಾಜಾದಲ್ಲಿ ಇಸ್ರೇಲ್ ಯುದ್ಧದಿಂದಾಗಿ ಮಡಿದ ಪ್ಯಾಲೆಸ್ತೀನಿ ಮಕ್ಕಳ ಸ್ಮರಣಾರ್ಥ ಮಕ್ಕಳ ದಿನವನ್ನು ಆಚರಿಸುವುದು ನವ ಭಾರತದಲ್ಲಿ ಒಂದು ಅಪರಾಧವಾಗಿದೆ. ನವೆಂಬರ್ 14ರಂದು ಮುಂಬಯಿಯಲ್ಲಿ ಕೆಲವು ಅಪ್ರಾಪ್ತ ಬಾಲಕಿಯರ ಸಹಿತ ಒಂದಿಷ್ಟು ಜನರು ಜುಹು ಬೀಚ್‌ನಲ್ಲಿ ಮೌನ ಪ್ರಾರ್ಥನೆ ಸಲ್ಲಿಸಿದಾಗ ನಡೆದದ್ದು ಇದೇ. ನೆರೆದವರ ಪೈಕಿ 17 ಜನರನ್ನು ಬಂಧಿಸಿದ ಪೊಲೀಸರು ಸಂಜೆವರೆಗೆ ಠಾಣೆಯಲ್ಲಿಟ್ಟಿದ್ದರು. ಅವರೆಲ್ಲರೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿದ್ದರು. ಗಾಜಾದಲ್ಲಿ 5,600 ಮಕ್ಕಳ ಸಾವು ಸಂಭವಿಸಿದ್ದು ಬಿಜೆಪಿ ಆಡಳಿತಗಾರರಿಗೆ ಏನೇನೂ ಅಲ್ಲ.

ಅದೇ ದಿನ, ಅಂದರೆ ನವೆಂಬರ್ 14 ರಂದು ದೆಹಲಿ ಪೊಲೀಸರು ವಿವಿಧ ಮಸೀದಿಗಳಿಗೆ ಸಂದೇಶ ಕಳಿಸಿ, ಪ್ರಾರ್ಥನೆ ಅಥವಾ ಕಾರ್ಯಕ್ರಮಗಳ ವೇಳೆ ಪ್ಯಾಲೆಸ್ತೀನ್ ಅಥವಾ ಗಾಜಾದಲ್ಲಿ ಇಸ್ರೇಲಿ ಪಡೆಗಳ ದೌರ್ಜನ್ಯದ ಪ್ರಸ್ತಾಪ ಮಾಡಕೂಡದೆಂದು ಎಚ್ಚರಿಕೆ ನೀಡಿದ್ದರು. ಗಾಜಾದಲ್ಲಿ ಮಡಿದ ಸಾವಿರಾರು ಜನರ ಸ್ಮರಣಾರ್ಥ ಪ್ರಾರ್ಥನೆ ಸಲ್ಲಿಸುವುದನ್ನು ಕೂಡ ನಿಷೇಧಿಸಲಾಗಿದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಮೇಲೆ ಮಾತ್ರವಲ್ಲದೆ ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಆಕ್ರಮಣವೂ ಆಗಿದೆ.

ಅಕ್ಟೋಬರ್ 13ರ ಶುಕ್ರವಾರ ಹಾಗೂ ನಂತರದ ಎಲ್ಲಾ ಶುಕ್ರವಾರಗಳಂದು ಶುಕ್ರವಾರದ ಪ್ರಾರ್ಥನೆಗಾಗಿ ಮಸೀದಿಯನ್ನು ಮುಚ್ಚುವಂತೆ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿರುವ ಪ್ರಮುಖ ಮಸೀದಿಯಾದ ಜಾಮಾ ಮಸೀದಿಯ ಆಡಳಿತ ಮಂಡಳಿಗೆ ಸರ್ಕಾರ ಆದೇಶಿಸಿತ್ತು. ಪ್ರಾರ್ಥನೆಗಳ ವೇಳೆ ಗಾಜಾ ಜನರೊಂದಿಗೆ ಸೌಹಾರ್ದತೆ ಸೂಚಿಸುವ ಸಂಭಾವ್ಯತೆಯನ್ನು ತಡೆಯುವುದು ಈ ಕ್ರಮದ ಉದ್ದೇಶವಾಗಿತ್ತು.

ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ನಿಷೇಧ

ಬಿಜೆಪಿ ಆಡಳಿತದ ಎಲ್ಲಾ ರಾಜ್ಯಗಳಲ್ಲಿ, ಯಾವುದೇ ಪ್ರತಿಭಟನೆ ಅಥವಾ ಪ್ಯಾಲೆಸ್ತೀನ್ ಪರ ಪ್ರದರ್ಶನಗಳನ್ನು ಪೊಲೀಸರು ತಡೆದಿದ್ದರು. ದೆಹಲಿಯಲ್ಲಿ ಕೂಡ, ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗೆ ಸೇರಿದ್ದ ವಿದ್ಯಾರ್ಥಿಗಳು ಮತ್ತಿತರರನ್ನು ಪೊಲೀಸರು ಸುತ್ತುವರಿದಿದ್ದರು.

ಇದೆಲ್ಲ, ಇಸ್ರೇಲ್ ಅನ್ನು ಹೆಬ್ಬುಲಿಯಂತೆಯೂ ಪ್ಯಾಲೆಸ್ತೀನಿ ಹೋರಾಟವನ್ನು ಭಯೋತ್ಪಾದನೆ ಎಂದೂ ಚಿತ್ರಿಸುವ ಬಿಜೆಪಿ–ಆರ್‌ಎಸ್‌ಎಸ್ ದೃಷ್ಟಿಕೋನದ ಪರಿಣಾಮವಾಗಿದೆ. ಮೋದಿ ಸರ್ಕಾರ ಇಸ್ರೇಲ್‌ಗೆ ಖುಲ್ಲಂಖುಲ್ಲಾ ಬೆಂಬಲ ನೀಡುವಲ್ಲಿಯೂ ಗಾಜಾ ವಿರುದ್ಧದ ಸಮರದಲ್ಲಿ ಕದನವಿರಾಮ ಘೋಷಿಸಲು ನೀಡಲಾದ ಕರೆಯನ್ನು ತಿರಸ್ಕರಿಸುವಲ್ಲಿಯೂ ಈ ಧೋರಣೆ ಪ್ರತಿಫಲನಗೊಂಡಿದೆ. ಕದನವಿರಾಮ ಬೇಡಿಕೆಯನ್ನು ಇಡೀ ದಕ್ಷಿಣಾರ್ಧ ಗೋಳ ಬೆಂಬಲಿಸಿತ್ತು.

ಸೋದರ ಸಂಬಂಧಿಗಳು

ಹಿಂದುತ್ವ ಮತ್ತು ಬಲಪಂಥೀಯ ಝಿಯೋನಿಸಂ ಸೈದ್ಧಾಂತಿಕ ಸೋದರರಾಗಿವೆ. ಪ್ಯಾಲೆಸ್ತೀನ್‌ನಲ್ಲಿ ಯೆಹೂದಿ ರಾಷ್ಟ್ರ ಸ್ಥಾಪನೆಯನ್ನು ತಾನು ಬೆಂಬಲಿಸುವುದಾಗಿ ಹಿಂದೂತ್ವ ಪರಿಕಲ್ಪನೆಯ ಜನಕನಾದ ವಿ.ಡಿ. ಸಾವರ್ಕರ್ 1923ರಷ್ಟು ಹಿಂದೆಯೇ ಬರೆದಿದ್ದರು. ಝಿಯೋನಿಸಂ ಅನ್ನು ಮುಸ್ಲಿಂ–ವಿರೋಧಿಯೆಂದು ಕಂಡಿದ್ದ ಸಾವರ್ಕರ್ ಅದನ್ನು ಸತತವಾಗಿ ಬೆಂಬಲಿಸಿದ್ದರು. ಇದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ, ಗಾಂಧೀಜಿ ಪ್ಯಾಲೆಸ್ತೀನಿ ಪರವಾಗಿ ದೃಢವಾಗಿ ನಿಂತಿದ್ದರು. 'ಅರಬ್ಬರ ಮೇಲೆ ಯೆಹೂದಿಗಳನ್ನು ಹೇರುವುದು ತಪ್ಪು ಮತ್ತು ಅಮಾನವೀಯವಾದುದು. ಪ್ಯಾಲೆಸ್ತೀನ್‌ನಲ್ಲಿ ಈಗ ನಡೆಯುತ್ತಿರುವುದನ್ನು ಯಾವುದೇ ನೀತಿ ಸಂಹಿತೆ ಮೂಲಕ ಸಮರ್ಥಿಸಲಾಗದು' ಎಂದು 1938ರಲ್ಲಿ ಗಾಂಧಿ ಬರೆದಿದ್ದರು.

ವಾಜಪೇಯಿ ಸರ್ಕಾರದಿಂದ ಆರಂಭ

ಪ್ಯಾಲೆಸ್ತೀನ್ ಕುರಿತ ಭಾರತದ ಧೋರಣೆಯನ್ನು ಮೋದಿ ಸರ್ಕಾರ ಸಂಪೂರ್ಣ ತಿರುವುಮುರುವುಗೊಳಿಸುವ ಪ್ರಕ್ರಿಯೆಗೆ ವಾಜಪೇಯಿ ನೇತೃತ್ವದ ಮೊದಲ ಬಿಜೆಪಿ ಸರ್ಕಾರ ಬೀಜಾಂಕುರ ಮಾಡಿತ್ತು. ಇಸ್ರೇಲ್‌ನೊಂದಿಗೆ ಬಿಜೆಪಿ ಸರ್ಕಾರ ವ್ಯೂಹಾತ್ಮಕ ಸಂಬಂಧ ಹೆಣೆದಿತ್ತು. 2000ನೇ ಇಸವಿಯಲ್ಲಿ ಆಗ ಉಪ ಪ್ರಧಾನಿಯಾಗಿದ್ದ ಎಲ್. ಕೆ. ಆಡ್ವಾಣಿ ಇಸ್ರೇಲ್‌ಗೆ ಭೇಟಿ ನೀಡಿದ್ದರು. ಭಾರತ ಸರ್ಕಾರದ ಉನ್ನತ ನಾಯಕರೊಬ್ಬರು ಇಸ್ರೇಲ್‌ಗೆ ಭೇಟಿ ಕೊಟ್ಟ ಮೊದಲ ಪ್ರಕರಣ ಅದಾಗಿತ್ತು. ಅದು ವಿವಿಧ ಮಿಲಿಟರಿ ಮತ್ತು ಭದ್ರತಾ ಸಂಬಂಧಗಳನ್ನು ರೂಪಿಸುವಲ್ಲಿ ಪರ್ಯಾವಸಾನಗೊಂಡಿತು. ಅದರ ನಂತರ, ಬಲಪಂಥೀಯ ಝಿಯೋನಿಸ್ಟ್ ಸಿದ್ಧಾಂತವನ್ನು ಪ್ರತಿನಿಧಿಸುವ ಇಸ್ರೇಲ್ ಪ್ರಧಾನಿ ಏರಿಯಲ್ ಶರೋನ್ ಭಾರತಕ್ಕೆ ಭೇಟಿ ನೀಡಿದ್ದರು. ಅವರು ಭಾರತಕ್ಕೆ ಆಗಮಿಸಿದ ಮೊದಲ ಇಸ್ರೇಲಿ ಪ್ರಧಾನಿ.

ಬಾಂಧವ್ಯ ಆಳಗೊಳಿಸಿದ ಮೋದಿ

ತಮ್ಮ ಬಲಪಂಥೀಯ ಸಹವರ್ತಿ ಬೆಂಜಮಿನ್ ನೇತನ್ಯಾಹು ಜೊತೆ ನರೇಂದ್ರ ಮೋದಿ ವ್ಯೂಹಾತ್ಮಕ ಸಂಬಂಧವನ್ನು ಇನ್ನಷ್ಟು ಆಳಗೊಳಿಸಿದರು. ಇಸ್ರೇಲ್, ಮೋದಿ ಸರ್ಕಾರದ ಆಂತರಿಕ ಭದ್ರತೆ ವ್ಯವಸ್ಥೆಗಾಗಿ ತಂತ್ರಜ್ಞಾನ ಮತ್ತು ಸಲಕರಣೆಗಳ ಪ್ರಮುಖ ಸರಬರಾಜು ದೇಶವಾಗಿದೆ. ಪೆಗಾಸಸ್ ಸ್ಪೈವೇರ್ (ಗೂಢಚಾರ ತಂತ್ರಾಂಶ) ಅಂಥ ಒಂದು ತಂತ್ರಜ್ಞಾನವಾಗಿದೆ. ಇಸ್ರೇಲ್ ಸರಕಾರದ ಸಮ್ಮತಿಯೊಂದಿಗೆ ಇಸ್ರೇಲಿ ಕಂಪನಿಯೊಂದು ಪೆಗಾಸಸ್ ಅನ್ನು ಪೂರೈಸಿತ್ತು.

ಇಸ್ರೇಲ್‌ನಿಂದ ಗಾಜಾದ ಮೇಲೆ ನರಮೇಧದ ಆಕ್ರಮಣಕ್ಕೆ ಜಗತ್ತಿನಾದ್ಯಂತ ಪ್ರತಿಭಟನೆ ಮತ್ತು ಖಂಡನೆ ಭುಗಿಲೆದ್ದಿದೆ. ಸಂಪೂರ್ಣವಾಗಿ ಇಸ್ರೇಲ್ ಜೊತೆಗಿರುವ ಸರಕಾರಗಳಿರುವ ದೇಶಗಳಲ್ಲಿ ಕೂಡ ಸಾವಿರಾರು ಜನರು ಬೀದಿಗಿಳಿದು ಗಾಜಾ ಮತ್ತು ಪ್ಯಾಲೆಸ್ತೀನಿ ಜನರಿಗೆ ಸೌಹಾರ್ದತೆ ವ್ಯಕ್ತಪಡಿಸಿದರು. ಗಾಜಾ ಮೇಲಿನ ಇಸ್ರೇಲ್ ಆಕ್ರಮಣಕ್ಕೆ ಬೆಂಬಲ ನೀಡುವ ಕನ್ಸರ್ವೇಟಿವ್ ಸರಕಾರ ಮತ್ತು ಪ್ರತಿಪಕ್ಷವಾದ ಲೇಬರ್ ಪಾರ್ಟಿ ನಾಯಕತ್ವವಿರುವ ಬ್ರಿಟನ್‌ನಲ್ಲಿ ಕೂಡ ನೂರಾರು ಸಾವಿರಾರು ಜನರು ಇಸ್ರೇಲ್ ವಿರೋಧಿಸಿ ಪ್ಯಾಲೆಸ್ತೀನ್ ಬೆಂಬಲಾರ್ಥವಾಗಿ ಪ್ರತಿ ಶನಿವಾರ ಮತಪ್ರದರ್ಶನ ನಡೆಸುತ್ತಿದ್ದಾರೆ. ಫ್ರಾನ್ಸ್ ಮತ್ತು ಜರ್ಮನ್ ಸರಕಾರಗಳು, ಪ್ಯಾಲೆಸ್ತೀನ್ ಬೆಂಬಲಾರ್ಥ ಪ್ರತಿಭಟನೆ ಮತ್ತು ಪ್ಯಾಲೆಸ್ತೀನಿ ಧ್ವಜದ ಪ್ರದರ್ಶನವನ್ನು ಕೂಡ ನಿಷೇಧಿಸಿದ್ದರೂ ಅವುಗಳ ರಾಜಧಾನಿ ಪ್ಯಾರಿಸ್ ಮತ್ತು ಬರ್ಲಿನ್‌ನಲ್ಲಿ ಪ್ರತಿಭಟನೆಗಳು ನಡೆದಿವೆ.

ತಾತ್ಕಾಲಿಕ ಪರಿಹಾರ

ನಾಲ್ಕು ದಿನಗಳ ಕದನ ವಿರಾಮ ಮತ್ತು ಹಮಾಸ್ ವಶದಲ್ಲಿರುವ ಒತ್ತೆಯಾಳುಗಳ ಪೈಕಿ 50 ಮಹಿಳೆಯರು ಮತ್ತು ಮಕ್ಕಳ ಬಿಡುಗಡೆಗೆ ಪ್ರತಿಯಾಗಿ ಇಸ್ರೇಲಿ ಜೈಲುಗಳಲ್ಲಿರುವ 150 ಪ್ಯಾಲೆಸ್ತೀನಿ ಮಹಿಳೆಯರು ಹಾಗೂ ಮಕ್ಕಳ ಬಿಡುಗಡೆ ಒಂದು ತಾತ್ಕಾಲಿಕ ಪರಿಹಾರವಷ್ಟೇ ಆಗಿದೆ. ಕದನವಿರಾಮ ಅವಧಿಯ ನಂತರ ಯುದ್ಧ ಮುಂದುವರಿಯುತ್ತದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ, ರಾಜಕೀಯ ಪರಿಹಾರ ಸಿಗುವವರೆಗೆ ಕಾಯಂ ಕದನವಿರಾಮಕ್ಕೆ ಒತ್ತಡ ಹೇರುವುದು ಮುಖ್ಯವಾಗುತ್ತದೆ.

ಭಾರತದಲ್ಲಿ ಪ್ರತಿಭಟನೆ

ಭಾರತದಲ್ಲಿ, ಕೇರಳದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸಾವಿರಾರು ಜನರನ್ನು ಒಳಗೊಂಡ ಸೌಹಾರ್ದತಾ ಸಭೆಗಳು ನಡೆದಿವೆ. ಕೋಲ್ಕತಾದಲ್ಲಿ ಎಡಪಕ್ಷಗಳು ಬೃಹತ್ ಪ್ರದರ್ಶನ ಏರ್ಪಡಿಸಿದ್ದವು. ವಿವಿಧ ರಾಜ್ಯಗಳಲ್ಲಿ ಕೂಡ ಎಡ ಪಕ್ಷಗಳು ಸೌಹಾರ್ದತಾ ಕಾರ್ಯಕ್ರಮಗಳು ಮತ್ತು ಸಭೆಗಳನ್ನು ವ್ಯವಸ್ಥೆಗೊಳಿಸುತ್ತಿವೆ.

ಆದರೆ, ಪ್ಯಾಲೆಸ್ತೀನಿಯರನ್ನು 'ಮುಸ್ಲಿಂ ಭಯೋತ್ಪಾದಕರು' ಎಂದು ಬಿಜೆಪಿ ಮತ್ತು ಕಾರ್ಪೊರೇಟ್ ಮಾಧ್ಯಮ ಚಿತ್ರಿಸುತ್ತಿರುವುದರಿಂದ ಇತರ ಜಾತ್ಯತೀತ ಪ್ರತಿಪಕ್ಷಗಳು ಈ ವಿಚಾರದಲ್ಲಿ ನಿಷ್ಕ್ರಿಯವಾಗಿ ಉಳಿದಿವೆ. ಹೀಗಾಗಿ, ಕಾಯಂ ಕದನ ವಿರಾಮಕ್ಕೆ ಹಾಗೂ ಪ್ಯಾಲೆಸ್ತೀನಿ ಭೂಮಿಗಳನ್ನು ಇಸ್ರೇಲ್ ಆಕ್ರಮಿಸಿಕೊಂಡಿರುವುದನ್ನು ಕೊನೆಗೊಳಿಸಲು ಹಾಗೂ ಸ್ವತಂತ್ರ ಪ್ಯಾಲೆಸ್ತೀನಿ ದೇಶ ಸ್ಥಾಪನೆಗೆ ಬೆಂಬಲವನ್ನು ಕ್ರೋಡೀಕರಿಸಲು ಎಡ ಪಕ್ಷಗಳು ವ್ಯಾಪಕ ಹಾಗೂ ಸುಸ್ಥಿರ ಪ್ರಚಾರವನ್ನು ನಡೆಸುವುದು ಬಹಳ ಮುಖ್ಯವಾಗುತ್ತದೆ.


ಇತರ ಜಾತ್ಯತೀತ ಮತ್ತು ಪ್ರಜಾತಾಂತ್ರಿಕ ಶಕ್ತಿಗಳು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಬೇಕು. ಗಾಜಾ ಮೇಲಿನ ಯುದ್ಧವನ್ನು ಇಸ್ಲಾಮೋಫೋಬಿಕ್ (ಇಸ್ಲಾಂ ಕುರಿತ ಭಯ (ಇಸ್ಲಾಂ–ಭೂತ) ವಿಷಯವಾಗಿ ಪರಿವರ್ತಿಸುವ ಬಿಜೆಪಿ ಯೋಜನೆಯನ್ನು ವಿಫಲಗೊಳಿಸಬೇಕು.

ಅನು: ವಿಶ್ವ

ನಿವಾರಣೆ ಸೇರಿದಂತೆ ಹಲವು ಸವಲತ್ತುಗಳನ್ನು ನೀಡುವುದಾಗಿ ತಿಳಿಸಿದರೂ ಯಾರೂ ಸಹ ಬಂಡವಾಳ ತೊಡಗಿಸುತ್ತಿಲ್ಲ. ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಖಾಸಗಿ ಬಂಡವಾಳ ನಿರೀಕ್ಷಿತ ಮಟ್ಟದಲ್ಲಿ ಏಕೆ ಆಗುತ್ತಿಲ್ಲ ಎಂದು ಬಂಡವಾಳ ಹೂಡಿಕೆದಾರರ ಸಮಾವೇಶಗಳಲ್ಲಿ ಗೋಳು ತೋಡಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ.

ಆದರೆ ಭಾರತದಲ್ಲಿ ಬಂಡವಾಳ ಹೂಡಿಕೆ ಮಾಡಿದರೆ ಲಾಭ ಗಳಿಸಬಹುದು ಎಂಬ ವಿಶ್ವಾಸ ಹೂಡಿಕೆದಾರರಲ್ಲಿ ಇಲ್ಲ. ಅದಕ್ಕೆ ಮುಖ್ಯ ಕಾರಣ ನಮ್ಮ ದೇಶದ ಆರ್ಥಿಕತೆಯನ್ನು ಅಂದರೆ, ಕಾರ್ಖಾನೆಗಳಲ್ಲಿ ಉತ್ಪಾದಿಸುವ ಸರಕನ್ನು ಖರೀದಿಸುವಂತಹ ಸಾಮರ್ಥ್ಯ ಜನರಲ್ಲಿ ಕುಸಿಯುತ್ತಿದೆ. ಏಕೆಂದರೆ ಅವರ ಆದಾಯ ಕಡಿಮೆಯಾಗುತ್ತಿದ್ದು ಮಾರುಕಟ್ಟೆಯಿಂದ ದೂರ ಉಳಿಯುತ್ತಿದ್ದಾರೆ.

ಬಿಜೆಪಿ ಸರ್ಕಾರ ಈ ದೇಶದ ಬಹುಸಂಖ್ಯಾತರನ್ನು ಒಳಗೊಳಿಸುವ ನೀತಿಗಳನ್ನು ಜಾರಿಗೆ ತರುತ್ತೇವೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಕಳೆದ ಹತ್ತು ವರ್ಷಗಳ ಆಡಳಿತ ಅವಧಿಯಲ್ಲಿ ದೇಶದ ಬಹುಸಂಖ್ಯಾತ ಜನರನ್ನು ಸಕ್ರಿಯ ಮಾರುಕಟ್ಟೆಯಿಂದ ಹೊರಗುಳಿಸುವುದೇ ಆಗಿದೆ. ಜನಸಾಮಾನ್ಯರು ದೈನಂದಿನ ಅಗತ್ಯಗಳ ಖರ್ಚಿಗೆ ಬೇಕಾದ ಹಣವೂ ಅವರ ಬಳಿ ಇಲ್ಲ ಎಂಬಂತಾಗಿದೆ. ಹೀಗಾಗಿ ಆರ್ಥಿಕ ಬೆಳವಣಿಗೆ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ಸ್ಪಷ್ಟವಾಗಿ ಹೇಳಬೇಕೆಂದರೆ ದೇಶದ ಆರ್ಥಿಕತೆ ಒಂದು ತೀವ್ರವಾದ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಈ ಬಿಕ್ಕಟ್ಟು ಬಹುಶಃ ಇದೇ ವೇಗದಲ್ಲಿ ಬೆಳೆದರೆ ಹಸಿವು ಮತ್ತು ಬಡತನ ಎಂಬುದು ಎಲ್ಲೆಲ್ಲೂ ವ್ಯಾಪಿಸುತ್ತದೆ. ಯಾವುದೇ ದೇವಸ್ಥಾನಗಳು, ಚರ್ಚುಗಳು, ಮಸೀದಿಗಳು ಈ ಬಡತನವನ್ನು ನಿವಾರಿಸಲು ಸಾಧ್ಯವಿಲ್ಲ.



ಹೋರಾಟದ ಪ್ರಚಾರ

ಇಂತಹ ಆರ್ಥಿಕ ಕುಸಿತವನ್ನು ತಡೆಗಟ್ಟಲು ಈ ಮೂರು ವರ್ಗಗಳು ಹೋರಾಟಕ್ಕೆ ನಿಂತಿವೆ. ಮೂರು ವರ್ಗಗಳು 21 ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟಕ್ಕೆ ಕರೆ ನೀಡಿದ್ದಾರೆ. ಈ ದೇಶದಲ್ಲಿ ಸೃಷ್ಟಿಯಾಗಿರುವ ಸಂಪತ್ತು ಮತ್ತೆ ಕಾರ್ಮಿಕರಿಗೆ ಲಭ್ಯವಾಗಬೇಕು. ಬಂಡವಾಳಶಾಹಿಗಳ ಬಳಿ ಕ್ರೋಡೀಕೃತವಾಗಿರುವ ಸಂಪತ್ತು ಮರುಹಂಚಿಕೆಯಾಗಬೇಕು. ಅಂತಹ ಆರ್ಥಿಕ ನೀತಿಗಳನ್ನು ನಮ್ಮ ದೇಶದಲ್ಲಿರುವಂತಹ ಸರ್ಕಾರಗಳು ಅಳವಡಿಸಬೇಕು ಎಂಬುದು ಈ ಹೋರಾಟದ ಪ್ರಮುಖ ಉದ್ದೇಶವಾಗಿದೆ.

ಹೀಗಾಗಿ ನಾವು ಮುಖ್ಯವಾಗಿ ಹೇಳುವಂತದು ಈ ದೇಶದ ಜನತೆಯನ್ನು ಧರ್ಮದ ಆಧಾರದಲ್ಲಿ, ಮತೀಯ ದ್ವೇಷಗಳನ್ನು ಬೆಳೆಸಿ, ಜನರ ಒಗ್ಗಟ್ಟನ್ನು ಒಡೆದು ಕಾರ್ಪೊರೇಟ್ ಕಂಪನಿಗಳ ಲಾಭ ಹೆಚ್ಚಿಸುವ ಸರ್ಕಾರದ ನೀತಿಗಳ ವಿರುದ್ಧ ಅಣಿನೆರೆಸುವುದಾಗಿದೆ. ಇಡೀ ದುಡಿಯುವ ಜನರನ್ನು ಧರ್ಮ, ಭಾಷೆ, ಕೋಮು ಆಧಾರದಲ್ಲಿ ವಿಭಜಿಸುತ್ತಿರುವ ಸರ್ಕಾರದ ವಿರುದ್ಧ ಐಕ್ಯತೆಯನ್ನು ಕಟ್ಟುವುದು 26, 27 ಮತ್ತು 28ರಂದು ನಡೆಯುವ ಮಹಾಧರಣಿಯ ಮುಖ್ಯ ಉದ್ದೇಶವಾಗಿದೆ. ಮಾತ್ರವಲ್ಲ ಕಾರ್ಪೊರೇಟ್ ಹಿತವನ್ನು ರಕ್ಷಣೆ ಮಾಡುವಂತಹ ನೀತಿಗಳನ್ನು ಯಾವುದೇ ಸರ್ಕಾರ ಮುಂದುವರೆಸಿದರೂ ಅವರಿಗೆ ಬೆಂಬಲ ಇಲ್ಲ ಎಂಬ ಸಂದೇಶವನ್ನು ಕೊಡುವ ಪ್ರಯತ್ನ ಇದಾಗಿದೆ.

ಈ ಹೋರಾಟ ಭಾರತ ದೇಶದ ಚರಿತ್ರೆಯಲ್ಲಿ ಒಂದು ಪ್ರಮುಖವಾದ ಪಾತ್ರವನ್ನು ವಹಿಸಲಿದೆ. ಕೋಮುದ್ವೇಷದ ವಿರುದ್ಧ ಜನರ ಐಕ್ಯತೆಯನ್ನು ಕಟ್ಟುವಂತಹ ಮತ್ತು ಜನಪರ ಆರ್ಥಿಕ ನೀತಿಗಳನ್ನು ರೂಪಿಸಬೇಕೆಂದು ಒತ್ತಾಯಿಸುತ್ತಿರುವ ಹೋರಾಟದಲ್ಲಿ ಎಲ್ಲ ಪ್ರಗತಿಪರ, ಶಾಂತಿ ಬಯಸುವಂತಹ, ಈ ದೇಶದ ಅಭಿವೃದ್ಧಿಯನ್ನು ಬಯಸುವಂತಹ ಎಲ್ಲ ಮನಸುಗಳು ಪಾಲ್ಗೊಳ್ಳಬೇಕು. ●

ಕಾರ್ಪೊರೇಟ್–ಹಿಂದುತ್ವ ಕೂಟದ ದುರಾಡಳಿತಕ್ಕೆ ಜನ ಚಳುವಳಿಗಳ ಐತಿಹಾಸಿಕ ಪ್ರತಿರೋಧ

'ಕಿಸಾನ್ ಸಂಯುಕ್ತ ಮೋರ್ಚಾ' ನೇತೃತ್ವದ 500 ರೈತ ಸಂಘಗಳು ಮತ್ತು ಸರ್ವಪಕ್ಷ ಕಾರ್ಮಿಕ ಸಂಘಗಳು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳು ಮತ್ತು ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಬೃಹತ್ ಧರಣಿಗೆ ಕರೆ ನೀಡಿವೆ. ಈ ಕರೆಯ ಭಾಗವೇ ಬೆಂಗಳೂರಿನಲ್ಲಿ 2023 ನವೆಂಬರ್ 26 ರಿಂದ 28ರ ವರೆಗೆ ಮೂರು ದಿನಗಳ ಮಹಾ ಧರಣಿ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕಳೆದ ಒಂಬತ್ತೂವರೆ ವರ್ಷಗಳಿಂದ ಕಾರ್ಮಿಕ, ರೈತ ವಿರೋಧಿ... ಕಾರ್ಪೊರೇಟ್ ಪರ ನೀತಿಗಳನ್ನು ಜಾರಿಗೊಳಿಸುತ್ತಿದೆ. ಸ್ವಾತಂತ್ರ್ಯದ ನಂತರ ಕಾರ್ಮಿಕರು ಮತ್ತು ರೈತರು ಅಭೂತಪೂರ್ವ ದಾಳಿಯನ್ನು ಎದುರಿಸುತ್ತಿದ್ದಾರೆ. ಈ ನೀತಿಗಳನ್ನು ಸೋಲಿಸಿ ಮೋದಿಯನ್ನು ಅಧಿಕಾರದಿಂದ ಕಿತ್ತೊಗೆಯಿರಿ ಎಂಬ ಘೋಷಣೆಯೊಂದಿಗೆ ಮಹಾ ಧರಣಿ ನಡೆಯಲಿದೆ. ಕಳೆದ ಎರಡು ತಿಂಗಳಿನಿಂದ, ಈ ನೀತಿಗಳ ಕುರಿತು ದೇಶಾದ್ಯಂತ ಜಂಟಿ ಅಭಿಯಾನ ನಡೆಯುತ್ತಿದೆ. ಕಳೆದ ಏಪ್ರಿಲ್ 5 ರಂದು 'ಚಲೋ ದೆಹಲಿ' ಸಂದರ್ಭದಲ್ಲಿ ಕಾರ್ಮಿಕ ಸಂಘಟನೆಗಳು ಏಕತೆಯನ್ನು ಪ್ರದರ್ಶಿಸಿದವು.

2023 ರಲ್ಲಿ ಕೇಂದ್ರ ಸರ್ಕಾರ ತೆಗೆದುಕೊಂಡ ಕೆಲವು ಪ್ರಮುಖ ನಿರ್ಧಾರಗಳನ್ನು ನೋಡೋಣ. 2023ರ ವರ್ಷದಲ್ಲಿಯೇ ಕೇಂದ್ರ ಸರ್ಕಾರವು ಕಾರ್ಪೊರೇಟ್ ಕಂಪನಿಗಳು ಸರ್ಕಾರಿ ಬ್ಯಾಂಕ್‌ಗಳಿಂದ ಪಡೆದಿರುವ ರೂ.2.14 ಲಕ್ಷ ಕೋಟಿ ಸಾಲವನ್ನು ರದ್ದುಗೊಳಿಸಿದೆ. ಇದರೊಂದಿಗೆ ಕೇಂದ್ರವು ಇದುವರೆಗೆ ಒಟ್ಟು ರೂ.15.32 ಲಕ್ಷ ಕೋಟಿ ಕಾರ್ಪೊರೇಟ್ ಸಾಲಗಳನ್ನು ರದ್ದುಗೊಳಿಸಿದೆ. ಇದೇ ಅವಧಿಯಲ್ಲಿ ಸ್ಯಾಮ್‌ಸಂಗ್, ವಿಸ್ಟ್ರಾನ್ ಮತ್ತು ಹಲವಾರು ವಿದೇಶಿ ಆಟೋಮೊಬೈಲ್ ಮತ್ತು ಎಲೆಕ್ಟ್ರಾನಿಕ್ಸ್ ಕಂಪನಿಗಳಿಗೆ ಕೇಂದ್ರ ಸರ್ಕಾರವು ನೇರವಾಗಿ 1.97 ಲಕ್ಷ ಕೋಟಿ ರೂ.ಗಳನ್ನು ಪ್ರೋತ್ಸಾಹಕವಾಗಿ ಪಾವತಿಸಿದೆ. ಈ ಎಲ್ಲಾ ಹಣವನ್ನು ಸಾಮಾನ್ಯ ಜನರು ಬ್ಯಾಂಕ್‌ಗಳಲ್ಲಿ ಇಡುತ್ತಾರೆ. ಈ ಸಾಲ ಮನ್ನಾದಲ್ಲಿ ಅದಾನಿ ಮತ್ತು ಅಂಬಾನಿಗಳೂ ಭಾಗಿಯಾಗಿದ್ದಾರೆ. ಬಡವರ ಹೊಟ್ಟೆ ಮೇಲೆ ಹೊಡೆಯುವ ಮೋದಿ ಕಾರ್ಪೊರೇಟ್‌ಗಳಿಗೆ ಆಹಾರ ನೀಡುವ ನೀತಿ ಅನುಸರಿಸುತ್ತಿದ್ದಾರೆ. ಕಾಗೆಗಳನ್ನು ಹೊಡೆದು ಗಿಡುಗಗಳಿಗೆ ಎಸೆಯುವುದು ಎಂದರೆ ಇದೇ.

ಈ ನವೆಂಬರ್‌ನಲ್ಲಿ 2.23 ಲಕ್ಷ ಕಿಲೋಮೀಟರ್‌ಗಳಷ್ಟು ಭಾರತೀಯ ಜಲಪ್ರದೇಶದಲ್ಲಿ ತೈಲ ಮತ್ತು ಅನಿಲ ನಿಕ್ಷೇಪಗಳನ್ನು ಹೊರತೆಗೆಯಲು 26 ಬ್ಲಾಕ್‌ಗಳನ್ನು ಖಾಸಗೀಕರಣಗೊಳಿಸಲಾಗುವುದು. 2015ರಿಂದ ಕೇಂದ್ರ ಸರ್ಕಾರ ಗಣಿಗಾರಿಕೆ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಖಾಸಗಿ ಕಂಪನಿಗಳಿಗೆ ಗಣಿಗಳಿಂದ ಖನಿಜಗಳನ್ನು ಹೊರತೆಗೆಯಲು ಅನುಮತಿ ನೀಡಿದೆ. ಖಾಸಗಿ ಕಂಪನಿಗಳು ಗಣಿಗಳನ್ನು ಅಗೆದು ಖನಿಜಗಳನ್ನು ಹೊರತೆಗೆಯಲು ಮುಂದೆ ಬರಲಿಲ್ಲ. ಆದ್ದರಿಂದ, ಸರ್ಕಾರವು ಈಗಾಗಲೇ ಅಗೆದಿರುವ ಗಣಿಗಳಿಂದ ಖಾಸಗಿ ಕಂಪನಿಗಳಿಗೆ ಖನಿಜಗಳನ್ನು ಹೊರತೆಗೆಯಲು ಅವಕಾಶಗಳನ್ನು ಒದಗಿಸಲು ಇತ್ತೀಚಿನ ತಿದ್ದುಪಡಿಗಳನ್ನು ಮಾಡಲಾಗಿದೆ. 25 ರಷ್ಟು ಹಣವನ್ನು ಭೂಒಡಲಿನ ಕಲ್ಲಿದ್ದಲು ಗಣಿಗಾರಿಕೆಗೆ ಖಾಸಗಿ ವಲಯಕ್ಕೆ ಪ್ರೋತ್ಸಾಹಕವಾಗಿ ನೀಡಲಾಗುವುದು ಎಂದು ಕಲ್ಲಿದ್ದಲು ಸಚಿವರು ಹೇಳಿದರು. ರಾಯಧನವನ್ನು ಶೇ.12ರಿಂದ ಶೇ.3ಕ್ಕೆ ಇಳಿಸಲಾಗಿದೆ. ಬಿಜೆಪಿ ಸರ್ಕಾರವು ಗಣಿಗಳಿಂದ ಬಂದಿರುವ ಪೆಟ್ರೋಲಿಯಂ, ಅನಿಲ ನಿಕ್ಷೇಪಗಳು ಮತ್ತು ಎಲ್ಲಾ ಖನಿಜಗಳನ್ನು ಚಿನ್ನದ ತಟ್ಟೆಯಲ್ಲಿ ಆರತಿ ಕರ್ಪೂರದಂತಹ ದೊಡ್ಡ ಹೂಡಿಕೆದಾರರಿಗೆ ಹಸ್ತಾಂತರಿಸುತ್ತಿದೆ. ದೇಶದ ಸಂಪತ್ತು ಯಾರ ಹಣ?

ಕಾರ್ಮಿಕ ಮತ್ತು ರೈತ ಐಕ್ಯ ಚಳುವಳಿಗಳ ಮೂಲಕ ಕೇಂದ್ರ ಬಿಜೆಪಿ ನೀತಿಗಳನ್ನು ಸೋಲಿಸುವುದು ಇಂದಿನ ಏಕೈಕ ಗುರಿಯಾಗಿದೆ.

ಈಡೇರದ ಲಿಖಿತ ಭರವಸೆಗಳು

ಅಂದು ದೆಹಲಿಯಲ್ಲಿ 13 ತಿಂಗಳುಗಳ ಕಾಲ ಹೋರಾಟ ನಡೆಸಿದ ರೈತರಿಗೆ ಮೋದಿ ಸರ್ಕಾರ ನೀಡಿದ್ದ ತನ್ನದೇ ಲಿಖಿತ ಭರವಸೆಗಳನ್ನು ಗೌರವಿಸಿಲ್ಲ. ಕನಿಷ್ಟ ಬೆಂಬಲ ಬೆಲೆ (ಎಂ.ಎಸ್.ಪಿ) ಕಾಯ್ದೆ ಜಾರಿಮಾಡಲು ಮುಂದಾಗಲಿಲ್ಲ. ವಿದ್ಯುತ್ ರಂಗದ ಸಂಪೂರ್ಣ ಖಾಸಗೀಕರಣ ಹಾಗು ಕೃಷಿ ಪಂಪ್‌ಸೆಟ್‌ಗೆ ಉಚಿತ/ರಿಯಾಯ್ತಿ ವಿದ್ಯುತ್ ರದ್ದುಪಡಿಸುವ ವಿದ್ಯುತ್ ತಿದ್ದುಪಡಿ ಮಸೂದೆ ರದ್ದತಿ ಭರವಸೆಗಳನ್ನು ಗೌರವಿಸಿಲ್ಲ. ಇವುಗಳೂ ಸೇರಿದಂತೆ ಹಲವು ಅಂಶಗಳ ಬೇಡಿಕೆಗಳೊಂದಿಗೆ "ಜನತೆಯನ್ನು ರಕ್ಷಿಸಿ, ದೇಶವನ್ನು ಉಳಿಸಿ" ಎಂಬ ಘೋಷಣೆಯೊಂದಿಗೆ ದುಡಿಯುವ ಜನತೆ ಒಟ್ಟಾಗಿ ಹೋರಾಟಕ್ಕೆ ಇಳಿದಿದೆ.

ಭಾರತದ ಬಹುತೇಕ ರೈತ ಸಂಘಟನೆಗಳು ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.)ದ ಭಾಗವಾಗಿವೆ ಮತ್ತು ದೇಶದ ಸಂಘಟಿತ ಮತ್ತು ಅಸಂಘಟಿತ ಆರ್ಥಿಕತೆಯ ಎಲ್ಲಾ ವಲಯಗಳ ಬಹುತೇಕ ಕಾರ್ಮಿಕರನ್ನು ಪ್ರತಿನಿಧಿಸುವ ಕಾರ್ಮಿಕ ಸಂಘಟನೆಗಳು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ (ಜೆಸಿಟಿಯು)ಯ ಭಾಗವಾಗಿವೆ. ಕರ್ನಾಟಕದ ಬಹುತೇಕ ರೈತ, ಕಾರ್ಮಿಕ, ದಲಿತ, ಕೃಷಿಕೂಲಿಕಾರ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳು 'ಸಂಯುಕ್ತ ಹೋರಾಟ ಸಮಿತಿ–ಕರ್ನಾಟಕ' ಎಂಬ ವೇದಿಕೆಯಲ್ಲಿ ಸೇರಿಕೊಂಡಿವೆ. ಸರ್ಕಾರದ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ದೇಶದ ರೈತರು ಮತ್ತು ಕಾರ್ಮಿಕರ ಜೊತೆಗೂಡಿ ಈ ಎಲ್ಲಾ ಸಂಘಟನೆಗಳು ಒಂದೇ ವೇಧಿಕೆಯಡಿಯಲ್ಲಿ ಒಟ್ಟಾಗಿವೆ ಎಂಬುದೇ ರಾಜ್ಯದ ಇತಿಹಾಸದಲ್ಲಿ ಮಹತ್ವದ ವಿಷಯವಾಗಿದೆ.

ಬಿಜೆಪಿ ನೀಡಿದ ಭರವಸೆ ಏನು? ಈಗ ಮಾಡುತ್ತಿರುವುದೇನು?

2014 ರ ಸಾರ್ವತ್ರಿಕ ಚುನಾವಣೆ ಸಂದರ್ಭದಲ್ಲಿ ದೇಶಾದ್ಯಂತ ನಡೆದ ಸಭೆಗಳಲ್ಲಿ ತಾನೂ ಅಧಿಕಾರಕ್ಕೆ ಬಂದರೆ ರೈತರ, ಕೃಷಿ ಕೂಲಿಕಾರರ ಎಲ್ಲಾ ಸಾಲಗಳನ್ನು ಮನ್ನಾ ಮಾಡುವುದಾಗಿ, ಎಂ.ಎಸ್ ಸ್ವಾಮಿನಾಥನ್ ಶಿಪಾರಸ್ಸಿನ ಸೂತ್ರ ಸಮಗ್ರ ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಸೇರಿಸಿ ಕನಿಷ್ಟ ಬೆಂಬಲ ಬೆಲೆ (ಎಂ.ಎಸ್.ಪಿ) ಒದಗಿಸುವುದಾಗಿ, ರೈತರ, ಕೃಷಿಕೂಲಿಕಾರರ ಆತ್ಮಹತ್ಯೆಗಳನ್ನು ಸಂಪೂರ್ಣವಾಗಿ ತಡೆಗಟ್ಟುವುದಾಗಿ, ನೀರಾವರಿ ಸೌಲಭ್ಯವನ್ನು ವಿಸ್ತರಿಸುವುದಾಗಿ, ಕಡಿಮೆ ಬಡ್ಡಿ ದರದಲ್ಲಿ ಸುಲಭ ಸಾಲ ವ್ಯವಸ್ಥೆ ಕಲ್ಪಿಸುವುದಾಗಿ, ಕೃಷಿ ಲಾಗುವಾಡುಗಳ ಬೆಲೆಯನ್ನು ಕಡಿಮೆ ಮಾಡುವುದಾಗಿ ನರೇಂದ್ರ ಮೋದಿಯವರು ಮತ್ತು ಬಿಜೆಪಿ ಹಾಗೂ ಎನ್.ಡಿ.ಎ ಭರವಸೆ ನೀಡಿತ್ತು.

ಕೃಷಿ ಆದಾಯದಲ್ಲಿ ಕುಸಿತ

ಕಳೆದ ಒಂಬತ್ತುವರೆ ವರ್ಷಗಳ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ ಸರ್ಕಾರದ ಆಡಳಿತವು ಈ ಭರವಸೆಗಳನ್ನು ಕಿಂಚಿತ್ತೂ ಈಡೇರಿಸಿಲ್ಲ. ಒಂದು ಕಡೆ ನಾಗಾಲೋಟದಲ್ಲಿ ಏರಿಕೆ ಕಂಡಿರುವ ಕೃಷಿ ಲಾಗುವಾಡುಗಳ ವೆಚ್ಚ, ಇನ್ನೊಂದು ಕಡೆ ಕೃಷಿ ಉತ್ಪನ್ನಗಳ ಮಾರಾಟದ ಬೆಲೆಯಲ್ಲಿ ಉತ್ಪಾದನಾ ವೆಚ್ಚಕ್ಕೆ ಅನುಗುಣವಾದ ಏರಿಕೆ ಇಲ್ಲದೇ, ಇಡೀ ದೇಶದ ರೈತಾಪಿ ಸಮುದಾಯ ಬಸವಳಿಯುವಂತೆ ಮಾಡಿದೆ. ವಾಸ್ತವವಾಗಿ ರೈತ ಕುಟುಂಬದ ಆದಾಯ ಗಮನಾರ್ಹ ಪ್ರಮಾಣದಲ್ಲಿ ಕುಸಿದಿದೆ. 2013 ರಲ್ಲಿ ಇದ್ದ ಕೃಷಿ ಕುಟುಂಬದ ಆದಾಯ ಈಗ ದ್ವಿಗುಣವಾಗಿದೆ ಎಂದು ಬಿಜೆಪಿ ಸರ್ಕಾರ ಬಿಂಬಿಸಿಕೊಳ್ಳುತ್ತಿದೆ. ಆದರೆ 2013 ಮತ್ತು 2019 ರ ನಡುವಿನ ಕೃಷಿ ಆದಾಯದಲ್ಲಿ ಶೇ. 5 ರಷ್ಟು ಕುಸಿತವಾಗಿರುವುದನ್ನು 77ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆ (ಎನ್.ಎಸ್.ಎಸ್.)ಯು ಎತ್ತಿ ತೋರಿಸಿದೆ. ವ್ಯವಸಾಯದಲ್ಲಿ ಯಾವುದೇ ಉಳಿತಾಯ ಹಾಗೂ ಪ್ರಗತಿ ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಉಂಟಾಗಿದೆ. ರೈತರ–ಕೃಷಿ ಕೂಲಿಕಾರರ ಸಾಲಭಾದೆ ತೀವ್ರವಾಗಿ ಬೆಳೆಯುತ್ತಿದೆ.

ಶೇ 50 ರಷ್ಟು ಕುಟುಂಬಗಳು ಸಾಲಭಾಧೆಯಲ್ಲಿ

ಕೋವಿಡ್ ಲಾಕ್ ಡೌನ್ ಅನ್ನು ಸರ್ವಾಧಿಕಾರಿ ರೀತಿಯಲ್ಲಿ ಜಾರಿಗೊಳಿಸಿದ ಪರಿಣಾಮವಾಗಿ ರೈತಾಪಿ ಸಮುದಾಯದ ಎಲ್ಲಾ ವಿಭಾಗಗಳು, ಎಲ್ಲಾ ಬೆಳೆಗಳ ರೈತರು, ಕೃಷಿ ಕೂಲಿಕಾರರು, ಅಗಾಧ ಪ್ರಮಾಣದ ನಷ್ಟವನ್ನು ಅನುಭವಿಸಿದ್ದರು. ಇಂತಹ ನಷ್ಟಕ್ಕೆ ಯಾವುದೇ ರೀತಿಯ ಪರಿಹಾರ ಕ್ರಮಗಳನ್ನು ಒದಗಿಸಲಿಲ್ಲ. 2019 ರ ಸಮೀಕ್ಷೆ ಪ್ರಕಾರ ಗ್ರಾಮೀಣ ಪ್ರದೇಶದ ಶೇ 50 ರಷ್ಟು ಕುಟುಂಬಗಳು ಸುಸ್ತಿ ಸಾಲಭಾಧೆ ಅಡಿಯಲ್ಲಿ ಸಿಲುಕಿ ನರಳುತ್ತಿವೆ. ಈ ಹಿಂದಿನ ಅವಧಿಗೆ ಹೋಲಿಸಿದರೆ, ಸಾಲಭಾಧೆ ಪ್ರಮಾಣ ದುಪ್ಪಟ್ಟಾಗಿದೆ. ಕೋಟ್ಯಂತರ ಗ್ರಾಮೀಣ ಜನತೆ ಹಸಿವು ಮತ್ತು ಅಪೌಷ್ಟಿಕತೆಗೆ ಸಿಲುಕಿ ಸಂಕಟವನ್ನು ಅನುಭವಿಸುತ್ತಿವೆ.

2023 ರ ಜಾಗತಿಕ ಹಸಿವಿನ ಸೂಚ್ಯಂಕವು, ನಮ್ಮ ದೇಶದ ಹಸಿವಿನ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. 117 ದೇಶಗಳಲ್ಲಿ ಭಾರತ ಅತ್ಯಂತ ಕಳಪೆಯ 111 ನೇ ಸ್ಥಾನಕ್ಕೆ ಕುಸಿದಿದೆ. 2013 ರಲ್ಲಿ 87 ನೇ ಸ್ಥಾನದಲ್ಲಿತ್ತು.

ಒಂದು ಲಕ್ಷಕ್ಕೂ ಹೆಚ್ಚು ರೈತರು – ಕೃಷಿ ಕೂಲಿಕಾರರ ಆತ್ಮಹತ್ಯೆ

ರೈತರ–ಕೃಷಿ ಕೂಲಿಕಾರರ ಆತ್ಮಹತ್ಯೆಗಳು ನಿಂತಿಲ್ಲ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ (ಎನ್.ಸಿ.ಆರ್.ಬಿ) ಪ್ರಕಾರವೇ ಕಳೆದ ಒಂಬತ್ತು ವರ್ಷಗಳ ಅವಧಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೈತರು–ಕೃಷಿ ಕೂಲಿಕಾರರು ಆತ್ಮಹತ್ಯೆಗೆ ಈಡಾಗಿದ್ದಾರೆ. ಯಾವುದೇ ಜಮೀನು ದಾಖಲೆಗಳಿಲ್ಲದ ಗೇಣಿದಾರರ ಆತ್ಮಹತ್ಯೆಗಳು, ಆದಿವಾಸಿ, ದಲಿತ, ರೈತ ಮಹಿಳೆಯರ, ಅರಣ್ಯ–ಬಗರ್ ಹುಕಂ ಸಾಗುವಳಿದಾರರ ಆತ್ಮಹತ್ಯೆಗಳು, ಈ ಒಂದು ಲಕ್ಷಕ್ಕೂ ಹೆಚ್ಚಿನ ಆತ್ಮಹತ್ಯೆಗಳ ಪಟ್ಟಿಯಿಂದ ಹೊರಗಿಟ್ಟಿದ್ದರೂ ಈ ಪ್ರಮಾಣದ ಆತ್ಮಹತ್ಯೆಗಳು ಎನ್.ಸಿ.ಆರ್.ಬಿ ದಾಖಲೆಗಳಲ್ಲಿ ಕಂಡು ಬಂದಿರುವುದು, ನರೇಂದ್ರ ಮೋದಿಯವರ ಆಳ್ವಿಕೆಯಲ್ಲಿ ರೈತರ–ಕೃಷಿ ಕೂಲಿಕಾರರ ಆತ್ಮಹತ್ಯೆಗಳು ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಿವೆ ಎಂಬುದನ್ನು ತೋರಿಸಿದೆ.



ಕಂಪನಿಗಳ ತಿಜೋರಿ ತುಂಬಿಸುವ ಫಸಲ್ ಬೀಮಾ ಯೋಜನೆ

2014 ರಿಂದ ಇದುವರೆಗೆ ಮಂಡಿಸಿರುವ ಕೇಂದ್ರ ಸರ್ಕಾರದ ಬಜೆಟ್ ನಲ್ಲಿ ಕೃಷಿಗೆ, ಗ್ರಾಮೀಣಾಭಿವೃದ್ಧಿಗೆ, ಗ್ರಾಮೀಣ ಮೂಲಸೌಕರ್ಯಕ್ಕೆ, ಗ್ರಾಮೀಣ ಆರೋಗ್ಯ–ಶಿಕ್ಷಣ, ನೈರ್ಮಲ್ಯಕ್ಕೆ, ಉದ್ಯೋಗ ಖಾತರಿ, ಆಹಾರ ಭದ್ರತೆ, ಕೃಷಿ ಉತ್ಪನ್ನಗಳ ಖರೀದಿ, ಗ್ರಾಮೀಣ ಉದ್ಯೋಗ ಸೃಷ್ಟಿ ಮುಂತಾದ ವಲಯಗಳಿಗೆ ಮೀಸಲಿಡುವ ಅನುದಾನದಲ್ಲಿ ನಿರಂತರವಾಗಿ ಕಡಿತ ಮಾಡಿಕೊಂಡು ಬರಲಾಗಿದೆ. ಬರ, ಪ್ರವಾಹ ಮುಂತಾದ ಯಾವುದೇ ಪ್ರಕೃತಿ ವಿಕೋಪ ನಷ್ಟದ ಸಂದರ್ಭದಲ್ಲಿಯೂ ಸಹ ಪರಿಣಾಮಕಾರಿ ಪರಿಹಾರಗಳನ್ನು ನೀಡದೇ ವಂಚಿಸಿದೆ. ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯೂ ರೈತರಿಂದ ಹಣ ಸುಲಿದು ಕಂಪನಿಗಳ ತಿಜೋರಿ ತುಂಬಿಸುವ ಯೋಜನೆಯಾಗಿದೆ.

ಕನಿಷ್ಟ ಬೆಂಬಲ ಬೆಲೆ ಇಲ್ಲ

ಭತ್ತ, ರಾಗಿ, ಜೋಳ, ಕಬ್ಬು, ಹತ್ತಿ, ತೊಗರಿ, ತೆಂಗು–ಕೊಬ್ಬರಿ, ಅಡಿಕೆ, ಕಾಫಿ, ದ್ರಾಕ್ಷಿ ಮುಂತಾದ ರಾಜ್ಯದ ಬಹುತೇಕ ಎಲ್ಲಾ ಬೆಳೆಗಳು ಬೆಲೆ ಕುಸಿತವನ್ನು ಕಂಡಿವೆ. ಬೆಂಬಲ ಬೆಲೆ ನಿಗದಿ ವ್ಯವಸ್ಥೆ ಇರುವ ಭತ್ತ, ಜೋಳ, ತೊಗರಿ ಮುಂತಾದ ಬೆಳೆಗಳೂ ಕೂಡ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತ ಗಣನೀಯ ಪ್ರಮಾಣದ ಕಡಿಮೆ ಬೆಲೆಗೆ ಕೊಳ್ಳಲಾಗುತ್ತಿದೆ. ಕ್ವಿಂಟಾಲ್ ಕೊಬ್ಬರಿಗೆ ರಾಜ್ಯ ಸರ್ಕಾರದ ಬೆಂಬಲ ಬೆಲೆ ನಿಗದಿ ಶಿಪಾರಸ್ಸು 16,730 ರೂ ಇದ್ದರೆ, ಕೇಂದ್ರ ಸರ್ಕಾರ ನಿಗದಿ ಮಾಡಿರುವ ಬೆಂಬಲ ಬೆಲೆ 11,750 ರೂ ಮಾತ್ರ, ಮಾರುಕಟ್ಟೆಯಲ್ಲಿ ರೈತರಿಗೆ ಸಿಗುತ್ತಿರುವ ಬೆಲೆ ಕೇವಲ 8 ಸಾವಿರದಿಂದ ಒಂಬತ್ತು ಸಾವಿರ ರೂ ಮಾತ್ರ. ಇದೇ ರೀತಿ ಎಲ್ಲಾ ಬೆಳೆಗಳ ಉದಾಹರಣೆ ನೀಡಬಹುದು. ಸಕಾಲಿಕ ಹಾಗೂ ಪರಿಣಾಮಕಾರಿ ಬೆಂಬಲ ಬೆಲೆ ಖರೀದಿಯನ್ನು ಕೇಂದ್ರ ಸರ್ಕಾರ ನಿರಾಕರಿಸಿರುವ ಕಾರಣ ಇಂತಹ

ದುಸ್ಥಿತಿಯನ್ನು ರೈತರು ಅನುಭವಿಸಬೇಕಾಗಿದೆ. ಬೆಂಬಲ ಬೆಲೆ ಖರೀದಿಗೆ ಆಗ್ರಹಿಸಿ ರೈತರು ನಡೆಸಿದ ಹೋರಾಟಗಳನ್ನು ಕೇಂದ್ರ ಸರ್ಕಾರ ನಿರ್ಲಕ್ಷಿಸುತ್ತಿದೆ.

ಈಗಾಗಲೇ ವಿಶ್ವ ವಾಣಿಜ್ಯ ಒಪ್ಪಂದದ ಷರತ್ತುಗಳಿಂದ ತೀವ್ರ ಸ್ವರೂಪದ ಕಷ್ಟಗಳಲ್ಲಿರುವ ರೈತರನ್ನು ಸಾರ್ವಜನಿಕ ಪಡಿತರ ವ್ಯವಸ್ಥೆ ಹಾಗೂ ಕನಿಷ್ಟ ಬೆಂಬಲ ಬೆಲೆ ನೀತಿಗಳನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸುವ ಮೂಲಕ ರಕ್ಷಿಸಬೇಕಾಗಿದ್ದ ಕೇಂದ್ರ ಸರ್ಕಾರವು, ಅಗ್ನೇಯ ಏಷ್ಯಾ ದೇಶಗಳು, ಆಸ್ಟ್ರೇಲಿಯಾ, ಯೂರೋಪ್ ದೇಶಗಳ ಜೊತೆ ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡು ಅಡಿಕೆ, ತೆಂಗು, ಕಾಫಿ, ಮೆಣಸು, ರಬ್ಬರ್, ಹಾಲು ಮತ್ತಿತರ ಹೈನುಗಾರಿಕೆ ಉತ್ಪನ್ನಗಳು, ದ್ರಾಕ್ಷಿ ಮುಂತಾದ ತೋಟಗಾರಿಕೆ ಬೆಳೆಗಳ ಬೆಲೆ ಕುಸಿತಕ್ಕೆ ಕಾರಣವಾಗಿದೆ.

ಹೆಚ್ಚಳಗೊಂಡ ದಲಿತರ ಮೇಲಿನ ದೌರ್ಜನ್ಯ, ನಾಗರಿಕ ಹಕ್ಕುಗಳ ನಿರಾಕರಣೆ

ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ಕಳೆದರೂ ದೇಶವು ಇಂದಿಗೂ ಅನಿಷ್ಟ ಜಾತಿ ಪದ್ಧತಿಯಿಂದ ಮುಕ್ತವಾಗಿಲ್ಲ. ವಿಶೇಷವಾಗಿ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ದೇಶದ ಸಂವಿಧಾನಾತ್ಮಕ ಹಕ್ಕುಗಳು ಕಣ್ಮರೆಯಾಗುತ್ತಿವೆ. ಜಾತಿ ತಾರತಮ್ಯ, ಜಾತಿ ಬೇದವನ್ನು ವ್ಯವಸ್ಥಿತವಾಗಿ ಪ್ರೋತ್ಸಾಹಿಸಲಾಗುತ್ತಿದೆ. ಹಿಂದುತ್ವದ ಹೆಸರಿನಲ್ಲಿ ಅಸ್ಪೃಶ್ಯತೆಯನ್ನು ಜೀವಂತವಾಗಿ ಇಡಲಾಗುತ್ತಿದೆ. ದಲಿತ ಸಮುದಾಯಗಳಿಗೆ ಸ್ವಾಭಿಮಾನದ ಬದುಕನ್ನು ನಿರಾಕರಿಸುತ್ತಿದೆ.

ದಲಿತ ಸಮುದಾಯ ಶಿಕ್ಷಣ ಹಾಗೂ ತರಬೇತಿಯಿಂದ ವಂಚಿತರಾಗಿರುವ ಕಾರಣದಿಂದ ಇವರು ಕಡಿಮೆ ಆದಾಯದ ವೃತ್ತಿಗಳನ್ನು ಅವಲಂಭಿಸುವುದು ಅನಿವಾರ್ಯವಾಗಿರುತ್ತದೆ. ಶೇ. 56 ರಷ್ಟು ಜನ ಇಂದಿಗೂ ಸಫಾಯಿ ಕರ್ಮಚಾರಿಗಳಾಗಿ ಜೀವನ ಸಾಗಿಸುತ್ತಾರೆ ಮಾತ್ರವಲ್ಲ, ಚರಂಡಿಗಳನ್ನು ಸ್ವಚ್ಛಮಾಡುವಾಗ ಸಾವನ್ನಪ್ಪಿದ ಅನೇಕ ಉದಾಹಣೆಗಳಿವೆ. ಇವರಲ್ಲಿ ಬಹುಸಂಖ್ಯಾತ ದಲಿತರು ದಟ್ಟದಾರಿದ್ರದಲ್ಲಿ ಜೀವನ ಸಾಗಿಸುತ್ತಾರೆ. ಅವರಲ್ಲಿ ಬಹುತೇಕ ದಲಿತರ ಮನೆಗಳಲ್ಲಿ ಶುದ್ಧ ಕುಡಿಯುವ ನೀರು ಲಭ್ಯವಿರುವುದಿಲ್ಲ, ವ್ಯವಸ್ಥಿತವಾದ ಶೌಚಾಲಯ ವ್ಯವಸ್ಥೆ ಇಲ್ಲ.

ಭೂಮಿಯನ್ನು ಕಿತ್ತುಕೊಳ್ಳುವ ನೀತಿ

ದಲಿತ ಮತ್ತು ದಲಿತೇತರ ಕುಟುಂಬಗಳ ನಡುವಿನ ಆರ್ಥಿಕ ಅಂತರ ಹೆಚ್ಚುತ್ತಲೇ ಇದೆ. ಮೋದಿ ಸರ್ಕಾರವು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಎಸ್.ಸಿ/ಎಸ್.ಟಿ ಗಳು ಹೊಂದಿರುವ ಅಲ್ಪ ಸ್ವಲ್ಪ ಕೃಷಿ ಭೂಮಿಯನ್ನು ಕಿತ್ತುಕೊಳ್ಳುವ ನೀತಿಯನ್ನು ಅನುಸರಿಸುತ್ತಿದೆ. ತಮ್ಮ ಭೂಸುಧಾರಣಾ ಶಾಸನವನ್ನು ತಿದ್ದುಪಡಿ ಮಾಡಲು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರುತ್ತದೆ. ದಲಿತರಿಗೆ ನೀಡಿದ ಭೂಮಿಯನ್ನು ಬಲವಂತವಾಗಿ ಸ್ವಾಧೀನ ಪಡೆಸಿಕೊಳ್ಳಲು ಭೂಬ್ಯಾಂಕ್ ಗಳನ್ನು ಸ್ಥಾಪಿಸುವುದು ಇತ್ಯಾದಿಗಳಿಗೆ ಪ್ರೋತ್ಸಾಹ ನೀಡುತ್ತಿದೆ.

ದಲಿತರಲ್ಲಿ ಶೇ. 73.5 ರಷ್ಟು ಅನಕ್ಷರಸ್ಥರಿದ್ದಾರೆ. ಇದು ರಾಷ್ಟ್ರೀಯ ಸರಾಸರಿ ಶೇ. 80.9 ಸಾಕ್ಷರತೆಗಿಂತ ಕಡಿಮೆ. ದಲಿತರು ಚಾರಿತ್ರಿಕವಾಗಿ ಅಂಚಿಗೆ ತಳ್ಳಲ್ಪಟ್ಟವರಾಗಿದ್ದಾರೆ. ಇದಕ್ಕೆ ಅವರ ಬಡತನ, ಜಾತಿ ಆಧಾರಿತ ತಾರತಮ್ಯ ಕಾರಣವಾಗಿದೆ. ಹೊಸ ಶಿಕ್ಷಣ ನೀತಿಯು ದಲಿತರನ್ನು ಶಿಕ್ಷಣದಿಂದ ಹೊರಗಿಡುವ ಉದ್ದೇಶವನ್ನು ಹೊಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ನೂರಾರು ಶಾಲೆಗಳನ್ನು ಮುಚ್ಚಲಾಗಿದೆ. ಅಡೆತಡೆ ಇಲ್ಲದ ಶಿಕ್ಷಣದ ವ್ಯಾಪಾರಿಕರಣದಿಂದಾಗಿ ದಲಿತರ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತಿದೆ.

ದೌರ್ಜನ್ಯಗಳು ಹೆಚ್ಚುತ್ತಲೇ ಇವೆ

ಸಾರ್ವಜನಿಕ ವಲಯದ ವಿನಾಶದಿಂದಾಗಿ ಉದ್ಯೋಗ ಮೀಸಲಾತಿ ಮರೀಚಿಕೆಯಾಗಿದೆ. ಎಸ್.ಸಿ ಮತ್ತು ಎಸ್.ಟಿಗಳ ಅಭಿವೃದ್ಧಿಗಾಗಿ ಜಾರಿಗೆ ತರಲಾದ ವಿಶೇಷ ಘಟಕ ಯೋಜನೆಗಳನ್ನು ಮೋದಿ ಸರ್ಕಾರ ವ್ಯವಸ್ಥಿತವಾಗಿ ಸ್ಥಗಿತಗೊಳಿಸಿದೆ. ವಾರ್ಷಿಕ ಬಜೆಟ್‌ಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸುವ ಮೊತ್ತ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದಿದೆ. ಬೆಲೆಗಳು ಗಗನಕ್ಕೆ ಏರುತ್ತವೆ. ಪಡಿತರ ವ್ಯವಸ್ಥೆ ಕುಗ್ಗುತ್ತಿದೆ. ದಲಿತರೇ ಹೆಚ್ಚಿನ ಸಂಖ್ಯೆಯಲ್ಲಿರುವ ಬಡವರಲ್ಲಿ ಅಪೌಷ್ಟಿಕತೆಯ ಹೆಚ್ಚಳಕ್ಕೆ ಕಾರಣವಾಗಿದೆ. ಕಳೆದ 9 ವರ್ಷಗಳಲ್ಲಿ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ಎಲ್ಲಾ ನೀತಿಗಳು ಸಾಮಾಜಿಕ ನ್ಯಾಯದ ಎಲ್ಲಾ ಕಾರ್ಯಕ್ರಮಗಳನ್ನು ಕಿತ್ತು ಹಾಕುವ ಮತ್ತು ಸಾಮಾಜಿಕ ಅಸಮಾನತೆಯನ್ನು ಬಲಪಡಿಸುವ ಉದ್ದೇಶವನ್ನು ಹೊಂದಿದೆ. ದಲಿತರ ವಿರುದ್ಧದ ದೌರ್ಜನ್ಯಗಳು ಹೆಚ್ಚುತ್ತಲೇ ಇವೆ.

ದಲಿತರ ಮೇಲೆ ವಿವಿಧ ಸ್ವರೂಪಗಳ ಅಸ್ಪೃಶ್ಯತೆಯ ಆಚರಣೆಗಳು ದೇಶದ ಹೆಚ್ಚಿನ ಕಡೆಗಳಲ್ಲಿ ನಿರಂತರವಾಗಿ ನಡೆಯುತ್ತಿವೆ. 2014 ರಿಂದ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ಕಾರ್ಪೊರೇಟ್ ಮತ್ತು ಕೋಮುವಾದಿಗಳ ಶಾಮೀಲು ನೀತಿಗಳಿಂದ ಅಸ್ಪೃಶ್ಯತೆ, ಜಾತಿ ತಾರತಮ್ಯ ತೀವ್ರಗೊಂಡಿದ್ದು ಸಂವಿಧಾನದ ಆಶಯಗಳ ಉಲ್ಲಂಘನೆ ನಿರಂತರವಾಗಿ ಹೆಚ್ಚುತ್ತಿದೆ. ಅಸ್ಪೃಶ್ಯತೆಯ ಆಚರಣೆಗಳು ಸಂವಿಧಾನದ 1955 ಕಾಯ್ದೆ ಪ್ರಕಾರ ನಿಷೇಧಿಸಲಾಗಿದ್ದರೂ, ಒಂದಲ್ಲ ಒಂದು ರೀತಿಯಲ್ಲಿ ಅದನ್ನು ಜೀವಂತ ಉಳಿಸಿಕೊಳ್ಳಲಾಗುತ್ತಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾರ್ಪೋರೇಟ್ ಹಿಂದುತ್ವದ ಆಳ್ವಿಕೆ ಕ್ರೋಢಿಕರಣಗೊಳ್ಳುತ್ತಾ ಸಾಗುತ್ತಿದ್ದು ಸಂವಿಧಾನದ ಸಾಮಾಜಿಕ ನ್ಯಾಯ ಮೂಲ ತತ್ವದ ಮೇಲೆ ಗಂಭೀರವಾದ ಪ್ರಹಾರ ನಡೆಸುತ್ತಿದೆ.

ಆದಿವಾಸಿ ಸಮುದಾಯಗಳ ಮೇಲಿನ ದೌರ್ಜನ್ಯ ಹೆಚ್ಚಳ

ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆದಿವಾಸಿ ಸಮುದಾಯಗಳ ಕುರಿತ ಸಂಘ ಪರಿವಾರದ ಸಂಸ್ಥೆಗಳು ನಡೆಸುವ ಅಪಪ್ರಚಾರ – ನಿಂದನೆ, ದ್ವೇಷಕ್ಕೆ ಭಾರಿ ಬೆಂಬಲ ಮತ್ತು ಪ್ರೋತ್ಸಾಹ ಸಿಕ್ಕಿದೆ. ಬಲವಂತದ ಮತಾಂತರ ತಡೆಯುವ ನೆಪದಲ್ಲಿ ಆದಿವಾಸಿ ಸಮುದಾಯಗಳ ಮೇಲೆ ಲೆಕ್ಕವಿಲ್ಲದಷ್ಟು ದೌರ್ಜನ್ಯ–ಧಾಳಿ ನಡೆಸಲಾಗಿದೆ. ಆದಿವಾಸಿಗಳ ನಡುವೆ ಕೋಮು ಧೃವೀಕರಣ ನಡೆಸಲಾಗುತ್ತಿದೆ. ಆದಿವಾಸಿ ಅಸ್ಮಿತೆ ನಿರ್ಧರಿಸಲು ಧರ್ಮವನ್ನು ಒಂದು ಮಾನದಂಡವಾಗಿ ಪರಿಗಣಿಸುವ ಸಂಘ ಪರಿವಾರದ ಆಗ್ರಹಕ್ಕೆ ಮೋದಿ ಸರ್ಕಾರದ ಮನ್ನಣೆಯು, ಸಂವಿಧಾನದ ಮೂಲಭೂತ ಹಕ್ಕು ಧಾರ್ಮಿಕ ಸ್ವಾತಂತ್ರ್ಯವನ್ನು ಆದಿವಾಸಿ ಸಮುದಾಯಗಳಿಗೆ ನಿರಾಕರಿಸುವ ಹುನ್ನಾರವಾಗಿದೆ. ಸಿ.ಎ.ಎ., ಎನ್.ಆರ್.ಸಿ ಹಾಗೂ ಏಕರೂಪ ನಾಗರಿಕ ಸಂಹಿತೆಯ ಪ್ರಸ್ತಾಪಗಳು ಆದಿವಾಸಿ ಸಮುದಾಯಗಳ ಸಂವಿಧಾನಾತ್ಮಕ ಹಕ್ಕು ಕಾನೂನಾತ್ಮಕ ಅವಕಾಶಗಳ ಜೊತೆ ಸಂಘರ್ಷ ಉಂಟು ಮಾಡುವ ಬೆದರಿಕೆಯಾಗಿದೆ. ಖನಿಜ ಸಂಪತ್ತಿನ ಖಾಸಗೀಕರಣದಿಂದಾಗಿ ಆದಿವಾಸಿಗಳನ್ನು ಹಾಡಿ ಮತ್ತು ಕೃಷಿಯಿಂದ ಒಕ್ಕಲೆಬ್ಬಿಸಲಾಗುತ್ತಿದೆ. ಅರಣ್ಯ ಸಂರಕ್ಷಣಾ ತಿದ್ದುಪಡಿ ಕಾಯ್ದೆ 2023 ಮತ್ತಿತರ ಮೋದಿ ಸರ್ಕಾರದ ಕ್ರಮಗಳು ಅರಣ್ಯದ ಮೇಲಿನ ಆದಿವಾಸಿ ಸಮುದಾಯಗಳ ಹಕ್ಕನ್ನು ದುರ್ಬಲಗೊಳಿಸಿವೆ. ಆದಿವಾಸಿಗಳ ಮೇಲೆ ಎಲ್ಲಾ ರೀತಿಯ ದೌರ್ಜನ್ಯಗಳು ದೊಡ್ಡ

ಪುಟ 10 ಕ್ಕೆ

ಮಹಾಧರಣಿಯಲ್ಲಿ ಕೂಲಿಕಾರರು:

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಉಳಿವಿಗಾಗಿ

ಚಂದ್ರಪ್ಪ ಹೊಸ್ಕೆರಾ
ರಾಜ್ಯ ಪ್ರಧಾನ ಕಾರ್ಯದರ್ಶಿ
ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MNREGA) 2005ರಲ್ಲಿ ಜಾರಿಗೆ ಬಂತು. ಇದು ಜಾರಿಗೆ ಬಂದು ಸುಮಾರು 18 ವರ್ಷ ಕಳೆದಿವೆ. ಆದರೂ ಗ್ರಾಮೀಣ ಕೂಲಿಕಾರರಿಗೆ ಉದ್ಯೋಗ ಖಾತ್ರಿಯೆಂಬುದು ಮರೀಚಿಕೆಯಾಗಿದೆ. ಯಾವ ಉದ್ದೇಶದಿಂದ ಈ ಯೋಜನೆ ಜಾರಿಗೆ ಬಂತೋ ಅದು ಸಾಮಾನ್ಯ ಕೂಲಿಕಾರರಿಗೆ, ಗ್ರಾಮೀಣ ಕುಟುಂಬಗಳಿಗೆ ಕೆಲಸ ದೊರಕಿಸಿ ಕೊಡದಂತಾಗಿದೆ. 1991 ರಲ್ಲಿ ಬಂದ ಜಾಗತೀಕರಣ ನೀತಿಯಿಂದಾಗಿ ದೇಶದಲ್ಲಿ ಬಡತನ ತೀವ್ರವಾಗಿ ಬೆಳೆಯುತ್ತಿದೆ. ಗ್ರಾಮೀಣ ಕೆಲಸಗಾರರಿಗೆ ಕೃಷಿಯಲ್ಲಿ ಕೆಲಸ ಸಿಗದಂತಾಗಿದೆ. 365 ದಿನಗಳಲ್ಲಿ ಕೃಷಿಯಲ್ಲಿ ಕೇವಲ 70–80 ದಿನ ಮಾತ್ರ ಸಿಗುತ್ತಿತ್ತು. ಇದರಿಂದ ಬಡವರು ಹಳ್ಳಿ ತೊರೆದು ಪಟ್ಟಣ ಪ್ರದೇಶಕ್ಕೆ ಕೆಲಸ ಹುಡುಕಿಕೊಂಡು ವಲಸೆ ಹೋಗುವ ಪ್ರಮಾಣ ಹೆಚ್ಚಾಯಿತು. ಗ್ರಾಮೀಣ ಪ್ರದೇಶದಲ್ಲಿ ಕೆಲಸದ ದಿನಗಳ ಕಡಿತದಿಂದ ಊಟಕ್ಕೆ ತೊಂದರೆಯಾಗಿ ಪರದಾಡುವ ಸ್ಥಿತಿ ಉಂಟಾಯಿತು. ಹಸಿವಿನ ಸಾವು ದೊಡ್ಡ ರೀತಿಯಲ್ಲಿ ಸಂಭವಿಸಲು ಪ್ರಾರಂಭವಾಯ್ತು. ಇದರ ವಿರುದ್ಧ ದೇಶದಾದ್ಯಂತ ಜನಚಳುವಳಿ ನಡೆದವು. ಈ ಚಳುವಳಿ ತೀವ್ರಗೊಂಡಿತು. ಆಗ ಸುಪ್ರೀಂ ಕೋರ್ಟ್ 'ಹಸಿವಿನಿಂದ ಯಾರನ್ನೂ ಸಾಯಲು ಬಿಡಬಾರದು' ಎಂದು ಕೇಂದ್ರ ಸರಕಾರಕ್ಕೆ ಆದೇಶ ನೀಡಿತು. ಆ ಸಮಯದಲ್ಲಿ ಯುಪಿಎ ಒಂದರ ಸರಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿದ್ದ ಕಮ್ಯೂನಿಸ್ಟ್ ಪಕ್ಷಗಳ ಒತ್ತಾಯದ ಮೇರೆಗೆ ಗ್ರಾಮೀಣ ಪ್ರದೇಶದಲ್ಲಿ ವರ್ಷದಲ್ಲಿ ನೂರು ದಿನಗಳ ಕೆಲಸದ ಭದ್ರತೆ ಸಿಗುವಂತೆ ಕಾನೂನಾಗಿದೆ.

ಆದರೆ, ಬಿಜೆಪಿ ಸರಕಾರವು MNREGA ವನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ. ಇದು ದಲಿತರ, ಕೂಲಿಕಾರರ ಪರವಾದ ನೀತಿಗಳನ್ನು ಜಾರಿಗೆ ತರದೆ, ಇದಕ್ಕೆ ವಿರುದ್ಧವಾದ ನೀತಿಗಳನ್ನು ಜಾರಿಗೆ ತರಲು ಮುಂದಾಗಿದೆ.

ಕೂಲಿಯಲ್ಲಿ ತಾರತಮ್ಯ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಒಂದು ಕೂಲಿ, ಇತರೆ ಜಾತಿ ಕೂಲಿಕಾರರಿಗೆ ಹೆಚ್ಚಿನ ಕೂಲಿ ಜಾರಿಗೆ ತಂದು ಕೂಲಿಕಾರರ ಮಧ್ಯೆ ಭೇದ ಭಾವ ಮೂಡಿಸಲು ಸರ್ಕಾರ ಮುಂದಾಗಿತ್ತು. ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆದಾಗ ಈ ತಾರತಮ್ಯ ನೀತಿಯನ್ನು ಕೈಬಿಡಲಾಯಿತು.

ಎರಡು ಬಾರಿ ಛಾಯಾಚಿತ್ರೀಕರಣ

ನರೇಗಾ ಯೋಜನೆಯಲ್ಲಿ ಕೆಲಸ ನಿರ್ವಹಿಸುವ ಪ್ರದೇಶದಲ್ಲಿ ಸರ್ವರ್ ಕೊರತೆ ಇರುತ್ತದೆ. ಆದರೆ, ಕೇಂದ್ರ ಸರಕಾರವು ಎರಡು ಬಾರಿ ಛಾಯಾಚಿತ್ರೀಕರಣ ಇರಬೇಕೆಂಬ ನಿಯಮ ಮಾಡಿದೆ. ಇಂತಹ ನಿಯಮ ಗ್ರಾಮೀಣ ಪ್ರದೇಶದಲ್ಲಿ ದುಡಿಯುವ ಜನರನ್ನು ಕೆಲಸದಿಂದ ದೂರ ತಳ್ಳುತ್ತದೆ.

ಕೆಲಸದ ಬೇಡಿಕೆ ಹೆಚ್ಚು

ಗ್ರಾಮೀಣ ಪ್ರದೇಶದಲ್ಲಿ ಕೂಲಿ ದಿನಗಳ ಬೇಡಿಕೆ ಹೆಚ್ಚುತ್ತಿದೆ. ಆದರೆ, ಬೇಡಿಕೆಗೆ ಅನುಗುಣವಾಗಿ ನರೇಗಾ ಯೋಜನೆಯ ಮೂಲಕ ಕೆಲಸದ ದಿನಗಳನ್ನು ಹೆಚ್ಚಿಗೆ ಸೃಷ್ಟಿಸುತ್ತಿಲ್ಲ. ಅದರ ಬದಲಾಗಿ ಕೆಲಸದ ದಿನಗಳನ್ನು ಕಡಿತಗೊಳಿಸಿದೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಬೆಳೆಯುತ್ತಿದೆ.

ಕಳಪೆ ವೇತನ

MNREGA ಯೋಜನೆಯಲ್ಲಿ ಕೆಲಸ ನಿರ್ವಹಿಸುವ ಕೂಲಿಕಾರರಿಗೆ ದಿನದ ಕೂಲಿ 316 ರೂ. ಇದೆ. ಆದರೆ, ಕೃಷಿಯಲ್ಲಿ ಕೂಲಿ ಮಾಡುವವರಿಗೆ ಸರಕಾರ ನಿಗದಿಪಡಿಸಿದ ಕೂಲಿ 484 ರೂ. ಇದೆ. ಯಾವ ರಾಜ್ಯದಲ್ಲಿ ಕನಿಷ್ಟ ಕೂಲಿ ಎಷ್ಟಿದೆ ಅಷ್ಟು ಪ್ರಮಾಣದಲ್ಲಿ MNREGA ದಲ್ಲಿ ಕೂಲಿ ಮಾಡುವವರಿಗೂ ನೀಡಬೇಕೆಂದು ಸುಪ್ರೀಂ ಕೋರ್ಟ್ ಆದೇಶವಿದೆ. ಆದರೆ, ನ್ಯಾಯಾಲಯದ ಆದೇಶಗಳನ್ನು ಸರಕಾರ ಪಾಲಿಸುತ್ತಿಲ್ಲ. ಕೇಂದ್ರದ ಬಜೆಟ್ ನಲ್ಲಿ ಈ ಯೋಜನೆಗೆ ಹೆಚ್ಚು ಹಣ ಮೀಸಲಿಟ್ಟರೆ ಮಾತ್ರ ಹೆಚ್ಚು ಕೂಲಿ ಕೊಡಲು ಸಾಧ್ಯ. ಆದರೆ, ಕೇಂದ್ರದ ಬಿಜೆಪಿ ಸರಕಾರ ಕಳಪೆ ವೇತನ ನೀಡುವ ಮೂಲಕ ಬಡವರನ್ನು ಕಡೆಗಣಿಸಿದೆ ಎಂಬುದನ್ನು ಜನತೆ ಪರಿಗಣಿಸಬೇಕು.

ಸಾಮಾಜಿಕ ಲೆಕ್ಕ ಪರಿಶೋಧನೆ ಇಲ್ಲ

ಈ ಯೋಜನೆಯಲ್ಲಿ ಕೂಲಿಗಾಗಿ ಎಷ್ಟು ಹಣ ನೀಡಲಾಗಿದೆ ಮತ್ತು ಸಾಮಗ್ರಿ ಸಲಕರಣೆ ಖರೀದಿಗೆ ಎಷ್ಟು ಹಣ ನೀಡಲಾಗಿದೆ ಎಂಬುದನ್ನು ಪ್ರತಿ ವರ್ಷವೂ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸಬೇಕು. ಆದರೆ, ರಾಜ್ಯದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಯುತ್ತಿಲ್ಲ. ಇದರಿಂದಾಗಿ ಎಷ್ಟು ಭ್ರಷ್ಟಾಚಾರ ನಡೆದರೂ ಸಹ ಗ್ರಾಮ ಪಂಚಾಯತಿಯಲ್ಲಿ ಆಡಿಟ್ ನಡೆಯುವುದಿಲ್ಲ. ಇದು ಶಾಸಕರುಗಳಿಂದ, ಗ್ರಾಮ ಪಂಚಾಯತ್ ಸದಸ್ಯರಿಂದ, ಅಧಿಕಾರಿಗಳಿಂದ ಲೂಟಿಗೆ ಎಡೆಮಾಡಿಕೊಡುತ್ತದೆ.

ಈ ಬಿಜೆಪಿ, ಕಾಂಗ್ರೆಸ್ ಸರಕಾರದ ವಿರುದ್ಧ ಜನರು ಎಚ್ಚೆತ್ತು ಕೊಳ್ಳಬೇಕೆಂಬ ನಿಟ್ಟಿನಲ್ಲಿ ನವೆಂಬರ್ 26, 27, 28 ಮೂರು ದಿನಗಳ ಮಹಾಧರಣಿ ಕಾರ್ಯಕ್ರಮದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಜನಸಾಗರ ಹರಿದು ಬರಲಿ. MNREGA ರದ್ದುಗೊಳಿಸುವ ಹುನ್ನಾರದ ವಿರುದ್ಧ ಪ್ರತಿಭಟನೆ ತೀವ್ರಗೊಳ್ಳಲಿ.



ಬಿಜೆಪಿ: ಬಣಗಳ ಬೆಂಕಿಯ ನಡುವೆ ಭವಿಷ್ಯದ ಹುಡುಕಾಟ......

ಪುಟ 3 ರಿಂದ

ತೊಡಗುವುದಲ್ಲದೆ ಅವರಲ್ಲಿರುವ 'ಸಂಪನ್ಮೂಲ'ವನ್ನು ಇದಕ್ಕೆ ಧಾರೆ ಎರೆಯುವ ನಿರೀಕ್ಷೆ. ಹೀಗಾಗಿ, ಅದು ತಮಗೆ ಒಂದಷ್ಟು ಹೆಚ್ಚಿನ ಬಲ ನೀಡಬಹುದು ಅಥವಾ ಕಳೆದು ಹೋದದ್ದನ್ನು ಸ್ವಲ್ಪ ಮಟ್ಟಿಗಾದರೂ ಮತ್ತೆ ಗಳಿಸಿಕೊಳ್ಳಬಹುದು ಎನ್ನುವ ಆಪೇಕ್ಷೆ–ಲೆಕ್ಕಾಚಾರ.

ಬಿಜೆಪಿಯ ಈ ಲೆಕ್ಕಾಚಾರ ಸರಳವಾದ ರೀತಿಯಲ್ಲಿ ಕಂಡರೂ ಬಿಜೆಪಿ ಒಳಗಿನ ಹಲವು ಬಣಗಳು ಮತ್ತು ಆಕಾಂಕ್ಷಿಗಳ ಪ್ರತಿಕ್ರಿಯೆಗಳು ಬಿಜೆಪಿ ಹೈಕಮಾಂಡ್ ಅಥವಾ ಸಂಘ ಪರಿವಾರ ಭಾವಿಸಿದಷ್ಟು ಹಾದಿ ಸುಗಮವಿಲ್ಲ ಎನ್ನುವುದನ್ನು ತೋರಿಸುತ್ತಿವೆ. ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಕರ್ನಾಟಕ ರಾಜಕಾರಣದ ಸೂತ್ರಧಾರಿ ಯಾಗಿರುವ ಬಿ.ಎಲ್. ಸಂತೋಷ್ ರವರು ಬಿ.ವೈ. ವಿಜಯೇಂದ್ರರನ್ನು ಆಶೀರ್ವದಿಸಿದರಾದರೂ ವಾಸ್ತವದಲ್ಲಿ ಬಿ.ಎಸ್. ವೈ. ಅವರಿಗೆ ಮುಕ್ತ ಹಾದಿಯನ್ನು ಕಲಿಸಿ ಕೊಡಲು ಸಿದ್ಧವಿಲ್ಲ ಎನ್ನುವ ಅಂಶಗಳು ಅವರ ಬಣದಲ್ಲಿರುವ ಪ್ರಮುಖ ನಾಯಕರು ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳೇ ಎತ್ತಿ ತೋರಿಸುತ್ತಿವೆ. ಪಕ್ಷದ ಅಧ್ಯಕ್ಷ ಸ್ಥಾನ ತಮಗೆ ಸಿಕ್ಕುವುದಿಲ್ಲ ಎನ್ನುವುದು ಮಾತ್ರವಲ್ಲ ಮುಂದೆ ಸಂಸತ್ತಿನ ಚುನಾವಣೆಯಲ್ಲೂ ಅಭ್ಯರ್ಥಿಯಾಗುವುದಿಲ್ಲ ಎಂಬುದನ್ನು ಮನಗಂಡ ಸದಾನಂದ ಗೌಡರು ತಮ್ಮ ಅ ಸಂತೋಷವನ್ನು ಪ್ರಕಟಿಸಿದ್ದರು ವಿಜಯೇಂದ್ರ ಅವರ ಅಧ್ಯಕ್ಷತೆಯನ್ನು ಪ್ರಕಟಣೆಯಾಗುತ್ತಿದ್ದಂತೆ ಪ್ರಮುಖವಾಗಿ ಶಾಸಕ ಸಿಟಿ ರವಿ ಮತ್ತು ಶಾಸಕ ಯತ್ನಾಳ್ ಅವರು ಕೆಂಡಮಂಡಲವಾಗಿದ್ದು ಬಹಿರಂಗವಾಗಿ ವ್ಯಕ್ತವಾಯಿತು ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ವಿ ಸೋಮಣ್ಣನವರು ಸಹ ತಮ್ಮ ಬೇಗುದಿಯನ್ನ ಹೊರಹಾಕಿದರು ಇದರಲ್ಲಿ ಬಸವರಾಜ ಪಾಟೀಲ್ ಯತ್ನಾಳ ಮತ್ತು ಸಿಟಿ ರವಿಯವರ ಮಾತುಗಳು ಬಿ.ಎಲ್. ಸಂತೋಷ್ ಅವರ ಪ್ರಾತಿನಿಧಿಕವೆಂದು ಹೇಳಲಾಗುತ್ತದೆ ಈ ಹಿಂದಿನಿಂದಲೂ ಅವರ ಮೂಲಕವೇ ಸಂಘವು ಬಿಎಸ್ ವೈ ಅವರ ಮೇಲೆ ಹರಿ ಹಾಯುತ್ತಿತ್ತು. ಒಂದೆಡೆ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಜನತೆಯಲ್ಲಿ ಬೆಳೆಯುತ್ತಿರುವ ತೀವ್ರ ಅತೃಪ್ತಿ. ಮತ್ತೊಂದೆಡೆ, ರಾಜ್ಯ ಬಿಜೆಪಿ ಕರ್ನಾಟಕದ ಜನತೆಗೆ ಎಸಗಿರುವ ಜನದ್ರೋಹದ ನಕಾರಾತ್ಮಕ ಪರಿಣಾಮಗಳು ಮತ್ತು ಕಾಂಗ್ರೆಸ್ಸಿಗೆ ಸಿಕ್ಕಿರುವ ಜನಾದೇಶದ ಪ್ರಮಾಣ ಇವೆಲ್ಲವೂ ಬಿಜೆಪಿಯ ಭವಿಷ್ಯವನ್ನು ಮಸುಕಾಗಿಸಿವೆ. ಇದು ಅನೇಕ ಬಿಜೆಪಿ ಶಾಸಕರಲ್ಲಿ ಪ್ರಮುಖ ನಾಯಕರಲ್ಲಿ ಪಕ್ಷವನ್ನು ತೊರೆಯುವ ಯೋಚನೆಗಳನ್ನು ಹುಟ್ಟು ಹಾಕಿದೆ. ಸಂಘ ನಿಷ್ಠೆಗೆ ಬಿ.ಎಸ್.ವೈ. ಯನ್ನು ಒಲ್ಲೆಸುತ್ತಿರುವುದಕ್ಕೆ ಆಕ್ರೋಶವಿದೆ.

ಹಾಗೆಯೇ, ವಿರೋಧ ಪಕ್ಷದ ನಾಯಕತ್ವವನ್ನು ಬಸವರಾಜ ಪಾಟೀಲ್ ಯತ್ನಾಳ್ ರವರು ಪಡೆಯುವ ತೀವ್ರ ನಿರೀಕ್ಷೆಯಿಂದ ಹಣಾಹಣಿಯಲ್ಲಿದ್ದರು. ಆದರೆ ಹೈಕಮಾಂಡ್ ನಿರ್ಧಾರ ಬೇರೆ ಆಗಿತ್ತು. ಆರ್. ಅಶೋಕ ರವರನ್ನು ವಿರೋಧ ಪಕ್ಷದ ನಾಯಕನನ್ನಾಗಿಸಿರುವುದಕ್ಕೆ ಕೂಡ ಬಿಜೆಪಿಯಲ್ಲಿ ತೀವ್ರ ಆಕ್ಷೇಪಗಳು ಇವೆ. ಬಿಜೆಪಿ ಹೈಕಮಾಂಡ್ ರಾಜ್ಯದ ಅಧ್ಯಕ್ಷ ಸ್ಥಾನ ಲಿಂಗಾಯತರಿಗೆ, ವಿರೋಧ ಪಕ್ಷದ ಸ್ಥಾನ ಒಕ್ಕಲಿಗರಿಗೆ ಹೀಗೆ ಎರಡು ಪ್ರಬಲ ಜಾತಿಗಳಿಗೆ ಪ್ರಾತಿನಿಧ್ಯವನ್ನು ಕೊಟ್ಟಿದ್ದೇವೆ ಎನ್ನುವ ಸಂಕೇತ ರವಾನಿಸಲಾಗಿದೆ ಎಂದು ಹೇಳಿಕೊಂಡರೂ ವಾಸ್ತವದಲ್ಲಿ ಯಡಿಯೂರಪ್ಪನವರಿಗೆ ಹಿತವಾಗುವ ಶಾಸಕರನ್ನೇ ವಿರೋಧ ಪಕ್ಷದ ಸ್ಥಾನಕ್ಕೆ ತರುವುದುನ್ನೇ ಹೈಕಮಾಂಡ್ ಮನ್ನಿಸಿದೆ. ಹಾಗೆ ನೋಡಿದರೆ ಡಿಕೆ ಶಿವಕುಮಾರ್ ಮತ್ತು ಕುಮಾರಸ್ವಾಮಿ ಅವರ ಎದುರಿನಲ್ಲಿ ಆರ್. ಅಶೋಕ ರವರಿಗೆ ಅಂತಹ ಆಳ ವರ್ಚಸ್ಸು ಗಾಢ ಪ್ರಭಾವ ಇಲ್ಲ. ಮೇಲಾಗಿ ಲಿಂಗಾಯತರ ನಡುವಿನಲ್ಲಿ ಬೇರೆ ಒಬ್ಬರು ನಾಯಕರಾಗಿ ಬೆಳೆಯುವುದನ್ನು ಬಿ.ಎಸ್.ವೈ. ಸಹಿಸುವುದಿಲ್ಲ. ಹೈಕಮಾಂಡ್ ಹೀಗೆ ಬಿ.ಎಸ್.ವೈ. ಬಣಕ್ಕೆ ಬಾಗಿರುವುದು ಕೂಡ ಬಿಜೆಪಿಯಲ್ಲಿ ತೀವ್ರ ಆಕ್ರೋಶವನ್ನು ಹೆಚ್ಚಿಸಿದೆ.

ಒಂದು ಹಂತದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಎನ್.ಡಿ.ಎ. ಭಾಗವಾದ ಜೆ.ಡಿ.ಎಸ್. ನ ಕುಮಾರಸ್ವಾಮಿಯವರನ್ನೇ ವಿರೋಧ ಪಕ್ಷದ ಜಂಟಿ ನಾಯಕನನ್ನಾಗಿ ಮಾಡಬಹುದು ಎನ್ನುವ ವದಂತಿಗಳು ಹಬ್ಬಿದ್ದವು. ಆರ್ ಅಶೋಕ್ ರವರನ್ನು ವಿರೋಧ ಪಕ್ಷದ ನಾಯಕನನ್ನಾಗಿ ಮಾಡುವ ಮೂಲಕ ಒಕ್ಕಲಿಗರ ನಡುವೆ ಬಿಜೆಪಿ ಸ್ವತಂತ್ರವಾಗಿ ವಿಸ್ತರಿಸಿಕೊಳ್ಳುವ ತನ್ನ ಕಾರ್ಯ ಯೋಜನೆಯನ್ನು ಕೈ ಬಿಟ್ಟಿಲ್ಲ ಎನ್ನುವುದನ್ನು ಕಾಣಬಹುದು. ಒಂದೆಡೆ, ಎಚ್.ಡಿ. ಕುಮಾರಸ್ವಾಮಿ, ಇನ್ನೊಂದೆಡೆ, ಡಿ.ಕೆ. ಶಿವಕುಮಾರ್ ಅದರ ಜೊತೆಗೆ ಆರ್. ಅಶೋಕ್ ರವರು ಒಕ್ಕಲಿಗ ಜಾತಿಯ ವೋಟುಗಳನ್ನು ಅದೆಷ್ಟು ಸೆಳೆಯಬಲ್ಲರು ಎನ್ನುವ ಪ್ರಶ್ನೆಯಲ್ಲಿ ತೀವ್ರ ಸ್ಪರ್ಧೆ ಇದೆ.

ಕರ್ನಾಟಕದ ಬಿಜೆಪಿ ಪಕ್ಷ ಭಿನ್ನಮತ, ಬಣ ಗಳ ಬೆಂಕಿಯ ನಡುವೆ ಮುಂದಿನ ಹಾದಿಯ ಹುಡುಕಾಟದಲ್ಲಿ ನಿಂತಿದೆ. ಇವೆಲ್ಲದರ ನಡುವಿನಲ್ಲಿಯೂ ಬಿಜೆಪಿ ಪಕ್ಷ ಎರಡು ಪ್ರಮುಖ ಸ್ಥಾನಗಳಿಗೆ ಮಾಡಿರುವ ನೇಮಕಾತಿ ರಾಜ್ಯದ ರಾಜಕಾರಣದಲ್ಲಿ ಪ್ರಭಾವಿಸುತ್ತದೆ. ವಿಧಾನಸಭಾ ಚುನಾವಣೆಯಲ್ಲಿ ಮತ್ತು ದೇಶದ ಹಲವು ರಾಜ್ಯಗಳಲ್ಲಿ ಸೋತ ಬಳಿಕವೂ ಅದು ಕೋಮುವಾದಿ ಹಿಂದುತ್ವದ ಫ್ಯಾಸಿಸ್ಟ್ ಅಕ್ರಮಣಗಳನ್ನು ನಡೆಸಲು ಹಿಂಜರಿದಿಲ್ಲ. ರಾಜ್ಯದಲ್ಲಿಯೂ ನಿಂತಿಲ್ಲ. ಆಡಳಿತರೂಢ ಕಾಂಗ್ರೆಸ್ ಇದನ್ನು ಎಷ್ಟರಮಟ್ಟಿಗೆ ಎದುರಿಸಬಲ್ಲದು ಎನ್ನುವ ಪ್ರಶ್ನೆ ಮತ್ತೆ ಮತ್ತೆ ಕಣ್ಣಿಗೆ ಹುಟ್ಟುತ್ತಲೇ ಇದೆ. ಬಿಜೆಪಿಯ ರಾಜಕೀಯ ಅಧಿಕಾರ ಮತ್ತು ಅಪಾರವಾದ ಹಣ ಸಂಪನ್ಮೂಲವನ್ನು ಒಳಗೊಂಡು ಎಲ್ಲವನ್ನು ಅದು ಕ್ರೋಢೀಕರಿಸಿ ಕಾರ್ಯವೆಸಗುವ ಸಾಧ್ಯತೆಗಳು ಇದ್ದೇ ಇವೆ. ಅದರ ಆಕ್ರಮಣವನ್ನು ಸೂಕ್ತವಾದ ರೀತಿಯಲ್ಲಿ ಎದುರಿಸುವುದು ಜಾತ್ಯತೀತ ಹಾಗೂ ಜನಪರ ಶಕ್ತಿಗಳಿಗೆ ಇರುವ ಸವಾಲು.

ನೈಜ ಪರ್ಯಾಯ ರೂಪಿಸುವಲ್ಲಿ ಜನ ಚಳುವಳಿಗಳ ಮಹತ್ವದ ಪಾತ್ರ

...... ಪುಟ 3 ರಿಂದ

ಮೂರು ಕೃಷಿ ಕಾಯ್ದೆಯ ವಿರುದ್ಧ ದೇಶದ ರೈತರು 2020 ರಲ್ಲಿ ಸಿಡಿದೆದ್ದದ್ದು ಭಾರತದ ಚರಿತ್ರೆಯಲ್ಲಿಯೇ ಐತಿಹಾಸಿಕ ದಾಖಲೆ. ಒಂದು ವರ್ಷವನ್ನೂ ಮೀರಿ ಅಪಾರ ತ್ಯಾಗ ಬಲಿದಾನಗಳ ಮೂಲಕ ಸಂಘರ್ಷವನ್ನು ಮುಂದುವರಿಸಿದ ರೈತರು ಸರಕಾರವು ಮೂರು ಕಾಯ್ದೆಯನ್ನು ರದ್ದುಪಡಿಸುವುದರೊಂದಿಗೆ ಒಂದು ಹಂತದ ಗೆಲುವನ್ನೂ ದಾಖಲಿಸಿದರು.

ಮೂರು ಕಾಯ್ದೆಗಳು ಅಧಿಕೃತವಾಗಿ ರದ್ದಾದರೂ ಅದರ ಅಪಾಯ ಈಗಲೂ ಇದ್ದೆ ಇದೆ. ಅದರ ಜಾರಿಯನ್ನು ವಿವಿಧ ರೂಪಗಳಲ್ಲಿ ರಾಜ್ಯ ಸರ್ಕಾರಗಳ ಮೂಲಕವಾಗಿಯೂ ಮಾಡಲಾಗುತ್ತಿದೆ. ಜೊತೆಗೆ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ, ಸಾಲ ಮನ್ನಾ ಮುಂತಾದ ಗಂಭೀರ ಪ್ರಶ್ನೆಗಳು ಇತ್ಯರ್ಥವಾಗಿಲ್ಲ. ಇಂತಹ ಬೇಡಿಕೆಗಳನ್ನಿಟ್ಟು ಈಗ ಮತ್ತೊಂದು ಹಂತದ ಹೋರಾಟದ ಅಲೆ ದೇಶದಲ್ಲಿ ಎದ್ದಿರುವುದು ಜನ ಚಳುವಳಿಗೆ ಉತ್ಸಾಹ ತುಂಬುವ ವಿಷಯ.

ಈ ಚಳುವಳಿಯ ವಿಶೇಷ ಎಂದರೆ ಅದು ರೈತರು ಕಾರ್ಮಿಕರು, ಕೃಷಿ ಕೂಲಿಕಾರರು, ದಲಿತರು, ಆದಿವಾಸಿಗಳು, ಮಹಿಳೆಯರು, ವಿದ್ಯಾರ್ಥಿ–ಯುವಜನರು ಮುಂತಾದ ನಾನಾ ವಿಭಾಗಗಳ ಜನರ ಬೇಡಿಕೆಗಳನ್ನು ಒಳಗೊಂಡು ಒಂದು ವಿಶಾಲ ಒಕ್ಕೂಟವಾಗಿ ಬೆಳೆಯುತ್ತಿರುವುದು. ನವೆಂಬರ್ 26–28, 2023 ರ ಹೋರಾಟವು ಕೇವಲ ರೈತರ ಬೇಡಿಕೆಗಳ ಆಧಾರದಲ್ಲಿ ನಡೆಯುತ್ತಿಲ್ಲ. ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ಆಹಾರ ಭದ್ರತೆ, ಸಾಮಾಜಿಕ ನ್ಯಾಯ, ಸಮಾನತೆ, ಸೌಹಾರ್ದತೆ ಮುಂತಾದ ನಾನಾ ರಂಗಗಳಿಗೆ ಸಂಬಂಧಿಸಿದ ಜನಪರ ಬೇಡಿಕೆಯನ್ನು ಈ ಚಳುವಳಿ ಒಳಗೊಂಡಿದೆ. ಈ ಅಭೂತಪೂರ್ವ ಐಕ್ಯತೆಯೇ ಚಳುವಳಿಯ ಮಹತ್ವವನ್ನು ಸಾರುತ್ತಿದೆ. ಇಂತಹ ಚಳುವಳಿಗಳ ಮೂಲಕವೇ, ಪ್ರತಿಗಾಮಿ ಬಿಜೆಪಿ ನೇತೃತ್ವದ ರಾಜಕೀಯ ಕೂಟಗಳಿಗೆ ಭವಿಷ್ಯದಲ್ಲಿ ಜನ ಚಳುವಳಿಗಳ ಆಧಾರದ ಜನತಾ ಪರ್ಯಾಯವನ್ನು ರೂಪಿಸಲು ಸಾಧ್ಯವಾಗುತ್ತದೆ ಎಂಬ ಆಶಾಭಾವನೆ ನಾವು ಇಟ್ಟುಕೊಳ್ಳೋಣ. ಈ ಆಶಾಭಾವನೆಯು ವಾಸ್ತವವಾಗಿ ಜಾರಿಯಾಗಲು ಶ್ರಮಿಸೋಣ.

ಕೋಮುವಾದಿ–ಕಾರ್ಪೋರೇಟ್ ಶಕ್ತಿಗಳ ಪರವಾದ ಆಳುವ ವರ್ಗಗಳ ಜನವಿರೋಧಿ ನೀತಿಗಳ ಎದುರು ಜನಚಳುವಳಿಗಳೇ ನಿಜವಾದ ಪರ್ಯಾಯ ಎಂಬುದನ್ನು ಸಾಬೀತು ಮಾಡಲು ನಾವೆಲ್ಲರೂ ಕೈ ಜೋಡಿಸೋಣ.

ಇಂತಹ ಐತಿಹಾಸಿಕ ಆಂದೋಲನದ ಸಂದರ್ಭದಲ್ಲಿ ದುಡಿಯುವ ಜನರ ಪ್ರಾಣ ಮಿತ್ರ 'ಜನಶಕ್ತಿ' ವಿಶೇಷ ಲೇಖನಗಳ ಸಂಚಿಕೆಯಾಗಿ ತಮ್ಮ ಕೈ ಸೇರುತಿದೆ.

ಸ್ವೀಕರಿಸಿ, ಬೆಂಬಲಿಸಿ.

ಜನ ಚಳುವಳಿಗಳ ಐತಿಹಾಸಿಕ ಪ್ರತಿರೋಧ

ಪುಟ 9 ರಿಂದ

ಪ್ರಮಾಣದಲ್ಲಿ ಹೆಚ್ಚಳಗೊಂಡು, ನಿರುದ್ಯೋಗ, ಹಸಿವು, ಅನಾರೋಗ್ಯದಿಂದ ಬಳಲುವಂತೆ ಮಾಡಿದೆ.

ಮಹಿಳಾ ದೌರ್ಜನ್ಯ ಗಳಲ್ಲಿ ಹೆಚ್ಚಳ–ಪುರುಷ ಪ್ರಧಾನ ಮೌಲ್ಯಗಳ ವೈಭವೀಕರಣಕ್ಕೆ ಪ್ರೋತ್ಸಾಹ

'ಭೇಟಿ ಪಡಾವೋ, ಭೇಟಿ ಬಚಾವೋ' ಘೋಷಣೆ ಮಾಡುತ್ತಾ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಸರ್ಕಾರ, ಕಳೆದ ಒಂಬತ್ತುವರೆ ವರ್ಷಗಳ ತನ್ನ ಆಳ್ವಿಕೆಯಲ್ಲಿ ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಮಹಿಳೆಯರ ಎಲ್ಲಾ ಸಂವಿಧಾನಾತ್ಮಕ ಹಕ್ಕುಗಳನ್ನು ನಿರಾಕರಿಸುವ ಮನುಸ್ಮೃತಿ– ಪುರೋಹಿತಶಾಹಿ ಚೌಕಟ್ಟಿಗೆ ಒಳಪಡಿಸುವ ಪ್ರಯತ್ನಗಳಿಗೆ ನಿರ್ಲಜ್ಜವಾಗಿ ಹಾಗೂ ನಗ್ನವಾಗಿ ಬೆಂಬಲಿಸುತ್ತಿದೆ. ದೇಶದಾದ್ಯಂತ ನಡೆದ ಕೋಮು ಗಲಭೆಗಳಲಿ ದೊಡ್ಡ ಪ್ರಮಾಣದಲ್ಲಿ ಮಹಿಳೆಯರನ್ನು ಗುರಿಪಡಿಸಲಾಗಿದೆ. ಮಹಿಳೆಯರ ವಿರುದ್ಧದ ಹೀನ ಅಪರಾಧಗಳು, ಎಲ್ಲಾ ರೀತಿಯ ದೌರ್ಜನ್ಯ–ಹಿಂಸೆ–ಅತ್ಯಾಚಾರ, ಲೈಂಗಿಕ ಕಿರುಕುಳ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಿದೆ. ಬಿಲ್ಕಿಸ್ ಬಾನು ಅತ್ಯಾಚಾರ ಅಪರಾಧಿಗಳ ಅವಧಿ ಪೂರ್ವ ಬಿಡುಗಡೆ, ಮಣಿಪುರ, ಹತ್ರಾಸ್, ಉನ್ನಾವೋ, ಮುಂತಾದ ಹೀನ ಕ್ರಿಮಿನಲ್ ಕೃತ್ಯಗಳ ಅಪರಾಧಿಗಳನ್ನು ಮೋದಿ ಸರ್ಕಾರ ಹಾಗೂ ಸಂಘ ಪರಿವಾರ ನಿರ್ಲಜ್ಜವಾಗಿ ಸಮರ್ಥಿಸಿಕೊಂಡಿದೆ. ಲೈಂಗಿಕ ಕಿರುಕುಳದ ವಿರುದ್ಧ ಧ್ವನಿ ಎತ್ತಿದ ಮಹಿಳೆಯರನ್ನು ಹೀನಾಯವಾಗಿ ಬಿಂಬಿಸಿ ದಮನಕ್ಕೆ ಗುರಿಪಡಿಸಲಾಗಿದೆ. ಅಂತರಾಷ್ಟ್ರೀಯ ಮಹಿಳಾ ಕುಸ್ತಿಪಟುಗಳಿಗೆ ನೀಡಿದ ಕಿರುಕುಳವು ಈ ಸರ್ಕಾರದ ಮಹಿಳೆಯರ ಕುರಿತ ಧೋರಣೆಗೆ ಕನ್ನಡಿಯಾಗಿದೆ. ಮಹಿಳೆಯರ ಕುರಿತು ಬಳಸುವ ಭಾಷೆಯಲ್ಲಿ ಅಶ್ಲೀಲತೆ ತಾಂಡವವಾಡುತ್ತಿದೆ. ಮಹಿಳಾ ಮೀಸಲಾತಿ ಮಸೂದೆಯನ್ನು ಜನ ಗಣತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆ ಜೊತೆ ತಳುಕು ಹಾಕಿ ಮೀಸಲಾತಿ ಹಕ್ಕಿಗೆ ಗಂಭೀರ ಚ್ಯುತಿ ಉಂಟು ಮಾಡಿದೆ. ವೇತನ ತಾರತಮ್ಯ ಸೇರಿದಂತೆ ಮಹಿಳೆಯರ ವಿರುದ್ಧದ ತಾರತಮ್ಯಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ದುಡಿಯುವ ಮಹಿಳೆಯರ ಹಕ್ಕುಗಳನ್ನುನಾಶ ಮಾಡಲಾಗುತ್ತಿದೆ. ಒಟ್ಟಾರೆಯಾಗಿ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪುರುಷ ಪ್ರಧಾನ ಮೌಲ್ಯಗಳಿಗೆ ಹಾಗೂ ಪುರುಷ ಪ್ರಧಾನ ಸಾಮಾಜಿಕ–ಆರ್ಥಿಕ ವ್ಯವಸ್ಥೆಗೆ ಪ್ರೋತ್ಸಾಹ ಮತ್ತು ಮನ್ನಣೆ ನೀಡುತ್ತಿದೆ. ಇದನ್ನು ಮರೆ ಮಾಚಲು ವ್ಯವಸ್ಥಿತವಾಗಿ ತೋರಿಕೆಯ ಕೆಲವು ಮಹಿಳಾ ಸಬಲೀಕರಣದ ನುಡಿಗಳನ್ನು ಪಠಿಸುತ್ತಿದೆ.

ಐಕ್ಯ ಚಳುವಳಿಯ ಐತಿಹಾಸಿಕ ಮಹತ್ವ

ಪುಟ 5 ರಿಂದ

ಇದು ಒಬ್ಬರಿಂದ, ಒಂದು ಸಂಘಟನೆಯಿಂದ ಸಾಧ್ಯವಾಗುವ ಕೆಲಸವಲ್ಲ. ಶೋಷಿತ ಜನರ ಸಂಘಟನೆಗಳಿಂದ ಸಾಮೂಹಿಕ ಚಳುವಳಿಗಳಿಂದ ಮಾತ್ರ ಸಾಧ್ಯವಾಗುವಂತದ್ದು. ಇದನ್ನು ಸಾಧಿಸಲು ಸಾಮೂಹಿಕ ಆಂದೋಲನ ಒಂದೇ ದಾರಿ. ಇದೊಂದು ದೇಶ ಪ್ರೇಮಿ ಹೋರಾಟ.

ಕರ್ನಾಟಕದಲ್ಲಿ

ಕರ್ನಾಟಕದ ಚಳುವಳಿಯಲ್ಲಿ ಸಹ ವಿಶೇಷ ಉತ್ಸಾಹದ ಲಕ್ಷಣಗಳು ಕಾಣುತ್ತಿವೆ. ಕಾರ್ಮಿಕರು, ಮಹಿಳೆಯರು, ದಲಿತರು, ವಿದ್ಯಾರ್ಥಿ, ಯುವಜನರು, ಈ ಹೋರಾಟಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ. ಮುಂದೆ ಇನ್ನಷ್ಟು ಬಲವಾದ ಹೋರಾಟ ಆಗಬೇಕಿದೆ.

ಕರ್ನಾಟಕ ರಾಜಕಾರಣದಲ್ಲಿ ಪ್ರಧಾನ ಪಕ್ಷಗಳ ಪೈಕಿ ಕಾಂಗ್ರೆಸ್, ಬಿಜೆಪಿ ಅಲ್ಲದೇ ಜೆಡಿ(ಎಸ್) ಎಂಬ ಮೂರನೇ ಶಕ್ತಿ ಇತ್ತು. ಈಗ ಪರಿಸ್ಥಿತಿ ಬದಲಾಗಿದೆ. ಈಗ ಪ್ರಧಾನ ಪಕ್ಷಗಳ ಪೈಕಿ ಕಾಂಗ್ರೆಸ್ ಮತ್ತು ಬಿಜೆಪಿ–ಜೆಡಿ(ಎಸ್) ಮೈತ್ರಿ ಮಧ್ಯೆ ಆಯ್ಕೆ ಎಂಬಂತಾಗಿದೆ. ಕರ್ನಾಟಕದ ಜನ ಚಳುವಳಿಗಳ ಮುಂದಿರುವ ತತ್‌ಕ್ಷಣದ ಗುರಿ ಬಿಜೆಪಿ–ಜೆಡಿ(ಎಸ್) ಮೈತ್ರಿಯನ್ನು ಸೋಲಿಸುವುದಾಗಿದೆ. ಈ ಹೋರಾಟವನ್ನು ಮುಂದುವರಿಸುತ್ತಲೇ ಮುಂದೆ, ಈ ಎರಡೂ ಶಕ್ತಿಗಳಿಗೆ ಪರ್ಯಾಯವಾಗಿ ಕೆಂಪು, ನೀಲಿ, ಹಸಿರು ಸಂಕೇತಿಸುವ ಜನ ಚಳುವಳಿಗಳನ್ನು ಬೆಳೆಸಬೇಕಿದೆ. ಅಂದರೆ ಎಡಪಂಥೀಯರು, ಅಂಬೇಡ್ಕರ್‌ವಾದಿಗಳು, ಲೋಹಿಯಾವಾದಿಗಳು ಒಂದಾಗಿ ಈ ಚಳುವಳಿಯನ್ನು ದೃಢಗೊಳಿಸಬೇಕಿದೆ.

ಕರ್ನಾಟಕದಲ್ಲಿ ಕಳೆದ 20–25 ವರ್ಷಗಳಲ್ಲಿ ಹತ್ತಾರು ಚಳುವಳಿಗಳು ನಡೆದಿದ್ದರೂ ಸಹ ಈಗ ನಡೆಯುತ್ತಿರುವಂತಹ ಸಂಘಟಿತ ರೂಪದ ಐಕ್ಯ ಚಳುವಳಿ ನಡೆದಿರಲಿಲ್ಲ. ಈ ನವೆಂಬರ್ 26, 2023 ರ ಚಳುವಳಿ ಕಳೆದ 20–25 ವರ್ಷಗಳಲ್ಲೇ ಅತ್ಯಂತ ಸುಸಂಘಟಿತ ಚಳುವಳಿಯಾಗಿ ದಾಖಲೆ ಬರೆಯಲಿದೆ. ಇದೇ ಮೊದಲ ಬಾರಿಗೆ ಈ ಚಳುವಳಿಯಲ್ಲಿ ಎಲ್ಲ ಕ್ಷೇತ್ರಗಳ ಜನರು ಉತ್ಸಾಹದಿಂದ ಭಾಗಿ ಆಗುತ್ತಿದ್ದಾರೆ.

ಕರಾಳ ಕಾರ್ಪೋರೇಟ್ ಶಕ್ತಿಗಳ ವಿರುದ್ಧ ಸಂಗ್ರಾಮ

ಕರಾಳ ಕಾರ್ಪೋರೇಟ್ ಶಕ್ತಿಗಳ ವಿರುದ್ಧ ಎಲ್ಲರೂ ಒಟ್ಟುಗೂಡಲು ಒತ್ತು ಕೊಡಲಾಗುತ್ತಿದೆ. ಇದು ಕಾರ್ಪೋರೇಟ್ ಶಕ್ತಿಗಳು ಮತ್ತು ದುಡಿಯುವ ಜನರ ನಡುವಿನ ಸಂಘರ್ಷ. ಈ ದೇಶಪ್ರೇಮಿ ಸಂಗ್ರಾಮದಲ್ಲಿ ವಿಶಾಲ ಜನ ಸಮುದಾಯವನ್ನು ಒಳಗೊಳಿಸಬೇಕಾದ ಸವಾಲು ನಮ್ಮೆಲ್ಲರ ಮುಂದಿದೆ.



‘ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ’ಯು ಮೊದಲ ನೋಟದಲ್ಲಿ, ಅದರ ಫಲಾನುಭವಿಗಳಲ್ಲಿ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ವಿನ್ಯಾಸಗೊಳಿಸಲಾದ ಪ್ರಯೋಜನಕಾರಿ ಕಲ್ಯಾಣ ಕಾರ್ಯಕ್ರಮ ಎಂದು ಕಾಣುತ್ತದೆ, ಆದರೆ ಇದು ನಿಜವಲ್ಲ. ಈ ವೃತ್ತಿಗಳೊಂದಿಗೆ ಸಂಯೋಜಿತವಾಗಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು (Micro, Small & Medium Enterprises-MSME) ಪ್ರಾರಂಭಿಸಲು ಸಿದ್ಧರಿರುವವರಿಗೆ ಸಹಾಯ ಮಾಡಲು ಒದಗಿಸುವ ನಿಧಿಗಳಲ್ಲ. ಇಂತಹ ಉದ್ದೇಶ ಹೊಂದಿದ್ದರೆ ಅದು ಸ್ವೀಕಾರಾರ್ಹವಾಗಿರುತ್ತದೆ. ಯೋಜನೆಯ ದಾಖಲೆಗಳಲ್ಲಿ ಹೇಳಿರುವಂತೆ ವಿಶ್ವಕರ್ಮ ಯೋಜನೆಯು ಹಲವು ಉದ್ದೇಶದಿಂದ ಅನುಷ್ಠಾನಗೊಳ್ಳುತ್ತಿದೆ. ಫಲಾನುಭವಿಗಳನ್ನು ಸಾಂಪ್ರದಾಯಿಕ ಜಾತಿ ಆಧಾರಿತ ಕಸುಬುಗಳಿಗೆ ಸೀಮಿತಗೊಳಿಸುವ ಮೂಲಕ, ನಿರ್ದಿಷ್ಟ ಜಾತಿಗಳೊಂದಿಗೆ ಸಾಂಪ್ರದಾಯಿಕ ವೃತ್ತಿಗಳ ದಬ್ಬಾಳಿಕೆಯ ಒಡನಾಟವನ್ನು ಮರುಸೃಷ್ಟಿಸುವ ವ್ಯರ್ಥ ಪ್ರಯತ್ನದ ಮೂಲಕ ಮನುವಾದಿ ವರ್ಣಾಶ್ರಮ ಧರ್ಮವನ್ನು ಶಾಶ್ವತಗೊಳಿಸಲು ಪ್ರಯತ್ನಿಸುವುದಕ್ಕಿಂತ ಕಡಿಮೆಯಿಲ್ಲದ ಯೋಜನೆ ಇದಾಗಿದೆ.

ಮೋದಿ–9 ವರ್ಷಗಳು–ಭಾಗ–26

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ:

ಹಿಂದಿನ ಜಾತಿ ವ್ಯವಸ್ಥೆಯನ್ನು ಶಾಶ್ವತಗೊಳಿಸಲು ಜಾತಿ ಆಧಾರಿತ ಕುಲಕಸುಬುಗಳ ಹೆಸರಿನಲ್ಲಿ ಹಳೆಯ ಯೋಜನೆಗಳಲ್ಲಿನ ಸೌಲಭ್ಯಗಳನ್ನೇ ವಿಂಗಡಿಸಿ ರೂಪಿಸಿದ ಹೊಸ ಯೋಜನೆಯಿದು

ಸಿ. ಸಿದ್ದಯ್ಯ

ಇನ್ನೇನು ತಮ್ಮ ಅಧಿಕಾರವಧಿ ಮುಗಿಯುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿಯವರು ಹೊಸ ಹೆಸರಿನ ಮತ್ತೊಂದು ಯೋಜನೆಯನ್ನು ಘೋಷಿಸಿದ್ದಾರೆ. 2023ರ ಆಗಸ್ಟ್ 15 ರ ಸ್ವಾತಂತ್ರ್ಯ ದಿನದಂದು, ಕೆಂಪು ಕೋಟೆಯಲ್ಲಿ ಮೋದಿ ಅವರು ‘ವಿಶ್ವಕರ್ಮ ಯೋಜನೆ’ ಎಂಬ ಹೊಸದೊಂದು ಯೋಜನೆಯನ್ನು ಘೋಷಿಸಿದರು. ಈ ಯೋಜನೆಗೆ ಮುಂದಿನ ಐದು ವರ್ಷಗಳಲ್ಲಿ 13,000 ಕೋಟಿ ರೂ.ಗಳ ಪ್ಯಾಕೇಜ್ ಘೋಷಿಸಿದ್ದಾರೆ. (ಅಂದರೆ, ವರ್ಷಕ್ಕೆ 2,600 ಕೋಟಿ ರೂ.) ಸೆಪ್ಟೆಂಬರ್ 17, 2023 ರಂದು ಪ್ರಾರಂಭಿಸಲಾದ ಕುಶಲಕರ್ಮಿಗಳಿಗೆ ತಮ್ಮ ಕೈಗಳು ಮತ್ತು ಉಪಕರಣಗಳೊಂದಿಗೆ ಕೆಲಸ ಮಾಡುವ, 18 ಬಗೆಯ ‘ಕುಲಕಸುಬು’ಗಳಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಶೇ. 5ರ ಬಡ್ಡಿದರದೊಂದಿಗೆ ಸಾಲ ಸೌಲಭ್ಯವನ್ನು ಒದಗಿಸುವ ಗುರಿಯನ್ನು ಈ ಯೋಜನೆಯು ಹೊಂದಿದೆ. (ಇಲ್ಲಿ ‘ಕುಲಕಸುಬು’ ಎಂಬುದನ್ನು ಒತ್ತಿ ಹೇಳಲು ಕಾರಣವೆಂದರೆ, ವಿಶ್ವಕರ್ಮ ಯೋಜನೆಯ ಮನ್ನಣೆ ಸಿಗಬೇಕಾದರೆ, ನೀವು ಮಾಡುತ್ತಿರುವ ವೃತ್ತಿ ನಿಮ್ಮ ಕುಲದ ಕಸುಬಾಗಿರಬೇಕು.)

ಪೀಳಿಗೆಯ ಕೌಶಲ್ಯಗಳು ಮತ್ತು ಗುರು–ಶಿಷ್ಯ ಪರಂಪರೆಯ ಸಂರಕ್ಷಣೆ!!

ಯೋಜನೆಯ ಪರಿಚಯದಲ್ಲಿನ ಪ್ಯಾರಾ 1.1 (MOU1) ಹೀಗೆ ಹೇಳುತ್ತದೆ “ಈ ಸಾಂಪ್ರದಾಯಿಕ ಕುಶಲಕರ್ಮಿಗಳನ್ನು ’ವಿಶ್ವಕರ್ಮರು’ ಎಂದು ಕರೆಯಲಾಗುತ್ತದೆ ಮತ್ತು ಕಮ್ಮಾರರು, ಅಕ್ಕಸಾಲಿಗರು, ಕುಂಬಾರರು, ಬಡಗಿಗಳು, ಶಿಲ್ಪಿಗಳು, ಇತ್ಯಾದಿ ವೃತ್ತಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕೌಶಲ್ಯಗಳು ಅಥವಾ ವೃತ್ತಿಗಳು ಸಾಂಪ್ರದಾಯಿಕ ಗುರು–ಶಿಷ್ಯ ಮಾದರಿಯನ್ನು ಅನುಸರಿಸಿ ಪೀಳಿಗೆಯಿಂದ ಪೀಳಿಗೆಗೆ ರವಾನಿಸಲ್ಪಡುತ್ತವೆ. ಕುಶಲಕರ್ಮಿಗಳು ಮತ್ತು ಕುಶಲಕರ್ಮಿಗಳ ಕುಟುಂಬಗಳು ಮತ್ತು ಇತರ ಅನೌಪಚಾರಿಕ ಗುಂಪುಗಳಲ್ಲಿ ತರಬೇತಿ ಪಡೆದಿರುತ್ತಾರೆ.”

ಇದು ಆಧುನಿಕ ಕೌಶಲ್ಯಗಳು ಮತ್ತು ಉದ್ಯೋಗಗಳಲ್ಲ, ಆದರೆ ಸಾಂಪ್ರದಾಯಿಕ ಕುಶಲಕರ್ಮಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ಜಾತಿಗಳ ಸಾಮಾಜಿಕ ವರ್ಗಗಳಿಗೆ ಸಂಬಂಧಿಸಿವೆ ಮತ್ತು ಸಾಂಪ್ರದಾಯಿಕ ಬೋಧನೆಯನ್ನು ವೈಭವೀಕರಿಸಲಾಗುತ್ತಿದೆ. ಈ ಸಂದೇಶವನ್ನು ಮನೆ ಮನೆಗೆ ತಲುಪಿಸಲು, ಯೋಜನೆಯ ಮಾರ್ಗಸೂಚಿಗಳ ವಿಭಾಗ 2.2.1 ಮತ್ತಷ್ಟು ಹೇಳುತ್ತದೆ, “ ಅಂತಹ ಫಲಾನುಭವಿಗಳಿಗೆ ಈ ಯೋಜನೆಯ ಮೂಲಕ ಒದಗಿಸಲಾದ ಬೆಂಬಲವು ಸಾಂಸ್ಕೃತಿಕ ಆಚರಣೆಗಳು, ಪೀಳಿಗೆಯ ಕೌಶಲ್ಯಗಳು ಮತ್ತು ಗುರು–ಶಿಷ್ಯ ಪರಂಪರೆಯ ಸಂರಕ್ಷಣೆಗೆ ಕೊಡುಗೆ ನೀಡುವುದಲ್ಲದೆ ಅವರಿಗೆ ಗುರುತನ್ನು ಮತ್ತು ಮನ್ನಣೆಯನ್ನು ಒದಗಿಸುತ್ತದೆ.”



ಬಡಗಿ, ಕುಂಬಾರ, ಚಮ್ಮಾರ, ಕ್ಷೌರಿಕ, ಧೋಬಿ, ಧರ್ಜಿ, ದೋಣಿ ತಯಾರಕ, ಆಯುಧಗಳ ತಯ್ಯಾರಕ, ಅಕ್ಕಸಾಲಿಗ, ಸುತ್ತಿಗೆ ಮತ್ತು ಟೂಲ್ ಕಿಟ್ ಮೇಕರ್, ಬೀಗ ರಿಪೇರಿ ಮಾಡುವವರು, ಶಿಲ್ಪಿಗಳು, ಕಟ್ಟಡ ನಿರ್ಮಾಣದಲ್ಲಿ ತೊಡಗಿರುವವರು (ಮೇಸನ್), ಬುಟ್ಟಿ/ ಚಾಪೆ/ಪೊರಕೆ ತಯಾರಕರು, ಸಾಂಪ್ರದಾಯಿಕ ಗೊಂಬೆ ಮತ್ತು ಆಟಿಕೆ ತಯ್ಯಾರಕರು, ಹೂಮಾಲೆ ಕಟ್ಟುವವರು, ಮೀನಿನ ಬಲೆ ನೇಯ್ಯುವವರು ವಿಶ್ವಕರ್ಮ ಯೋಜನೆಗೆ ಸೇರಲು ಅರ್ಹರಾಗಿರುತ್ತಾರೆ.

ಈ ಎಲ್ಲಾ 18 ವೃತ್ತಿಗಳು ಜಾತಿ ಆಧಾರಿತ ಕುಲಕಸುಬುಗಳನ್ನು ಮಾತ್ರ ಒಳಗೊಂಡಿದೆ, ಎಲ್ಲರೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ಜಾತಿಗಳ ಸಾಮಾಜಿಕ ವರ್ಗಗಳ ಅಡಿಯಲ್ಲಿ ಬರುತ್ತಾರೆ ಮತ್ತು ಈ ವರ್ಗಗಳ ಫಲಾನುಭವಿಗಳಿಗೆ "ಗುರುತಿಸುವಿಕೆ" ಮತ್ತು "ಮನ್ನಣೆ" ಯನ್ನು ಒದಗಿಸುತ್ತವೆ ಎಂಬ ಅಂಶವು, ಯೋಜನೆಯ ಹಿಂದಿರುವ ಶ್ರೇಯಾಂಕದ ಜಾತಿವಾದಿ ತಿಳುವಳಿಕೆಯ ಸಂದೇಶವನ್ನು ನೀಡುತ್ತದೆ. ಇಲ್ಲಿ ಜಾರಿಯಾಗುತ್ತಿರುವುದು ಆಧುನಿಕ ಸ್ವಯಂ ಉದ್ಯೋಗ ಅಥವಾ ಸಣ್ಣ ಉದ್ಯಮಶೀಲ ಯೋಜನೆ ಅಲ್ಲ. ಫಲಾನುಭವಿಗಳನ್ನು ಸಾಂಪ್ರದಾಯಿಕ ಜಾತಿ ಆಧಾರಿತ ಕಸುಬುಗಳಿಗೆ ಸೀಮಿತಗೊಳಿಸುವ ಮೂಲಕ, ನಿರ್ದಿಷ್ಟ ಜಾತಿಗಳೊಂದಿಗೆ ಸಾಂಪ್ರದಾಯಿಕ ವೃತ್ತಿಗಳ ದಬ್ಬಾಳಿಕೆಯ ಒಡನಾಟವನ್ನು ಮರುಸೃಷ್ಟಿಸುವ ವ್ಯರ್ಥ ಪ್ರಯತ್ನದ ಮೂಲಕ ಮನುವಾದಿ ವರ್ಣಾಶ್ರಮ ಧರ್ಮವನ್ನು ಶಾಶ್ವತಗೊಳಿಸಲು ಪ್ರಯತ್ನಿಸುವುದಕ್ಕಿಂತ ಕಡಿಮೆಯಿಲ್ಲದ ಯೋಜನೆ ಇದಾಗಿದೆ.

ಶೈಕ್ಷಣಿಕ ಯೋಜನೆಗಳನ್ನು ಹೆಚ್ಚಿಸುವ ಕ್ರಮಗಳಿಲ್ಲ

ಪರಿಶಿಷ್ಟ ಜಾತಿ/ಪಂಗಡಗಳು ಮತ್ತು ಇತರೆ ಹಿಂದುಳಿದ ಜಾತಿ ಸಮುದಾಯಗಳ ಯುವ ಪೀಳಿಗೆಯ ಬಹುಪಾಲು ಜನರು ತಮ್ಮ ಸಾಂಪ್ರದಾಯಿಕ ಜಾತಿ–ಸಂಬಂಧಿತ ಕಸುಬುಗಳನ್ನು ತೊರೆದು, ಆಧುನಿಕ ಕೈಗಾರಿಕಾ ಮತ್ತು ಸೇವಾ ವಲಯದ ಉದ್ಯೋಗದಲ್ಲಿ ನುರಿತ ಕೆಲಸಗಾರರು ಮತ್ತು ವೃತ್ತಿಪರರಾಗಲು ಸದಾ ಬಯಸುತ್ತಾರೆ. ಉನ್ನತ ಶಿಕ್ಷಣದ ಪ್ರವೇಶವನ್ನು ಹೆಚ್ಚಿಸಲು ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ಯೋಜನೆಗಳನ್ನು ರೂಪಿಸುವ ಬದಲು, ಮೋದಿ ಸರ್ಕಾರವು ಕೇವಲ ಜಾತಿ ವ್ಯವಸ್ಥೆಯನ್ನು ಶಾಶ್ವತಗೊಳಿಸಲು ವಿಶ್ವಕರ್ಮ ಯೋಜನೆ ಅನುಷ್ಠಾನವನ್ನು ಅನುಸರಿಸುತ್ತಿದೆ. ವಿಶ್ವಕರ್ಮ ಯೋಜನೆಯು ಈ ಸಮುದಾಯಗಳ ವಿದ್ಯಾರ್ಥಿಗಳು ಆಧುನಿಕ ಉನ್ನತ ಶಿಕ್ಷಣ ಮತ್ತು ನುರಿತ ಉದ್ಯೋಗವನ್ನು ಪಡೆಯಲು ಪ್ರಯತ್ನಿಸುವುದರಿಂದ ಅವರನ್ನು ಹಿಮ್ಮೆಟ್ಟಿಸಲು ಮತ್ತು ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತದೆ.

ಗೋಲ್ವಾಲ್ಕರ್ ಅವರು ಬಹಳ ಹಿಂದೆಯೇ ಪ್ರಸ್ತಾಪಿಸಿದ ಹಿಂದುತ್ವದ ಅಜೆಂಡಾವನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುತ್ತಿರುವ ಮಾಜಿ ಆರ್‌ಎಸ್‌ಎಸ್ ಪ್ರಚಾರಕ್ ಪ್ರಧಾನಿ ಮೋದಿ ಈ ಯೋಜನೆಯನ್ನು ಘೋಷಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಅಂದು ಮದ್ರಾಸ್ ರಾಜ್ಯದಲ್ಲಿ ಸಿ. ರಾಜಗೋಪಾಲಚಾರಿ

1953 ರಲ್ಲಿ ಹಿಂದಿನ ಮದ್ರಾಸ್ ರಾಜ್ಯದಲ್ಲಿ ಆಗಿನ ಮುಖ್ಯಮಂತ್ರಿ ಸಿ ರಾಜಗೋಪಾಲಚಾರಿ ಅವರು ಪ್ರಸ್ತಾಪಿಸಿದ ಅಪಖ್ಯಾತಿ ಪಡೆದ ’ಕುಲ ಕಲ್ವಿ ತಿಟ್ಟಂ’ (ಪರಂಪರಾಗತ ಶಿಕ್ಷಣ ನೀತಿ) ಗೆ ಹಲವು ವಿಧಗಳಲ್ಲಿ ಇಂದಿನ ವಿಶ್ವಕರ್ಮ ಯೋಜನೆಯು ಮರಳುತ್ತದೆ. ಅಂದಿನ ಇಂತಹ ಯೋಜನೆಗೆ ಮದ್ರಾಸ್ ರಾಜ್ಯದ ಎಲ್ಲಾ ಭಾಗಗಳಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು. ಆಗ ರಾಜ್ಯ ವಿಧಾನಸಭೆಯಲ್ಲಿನ ಪ್ರಮುಖ ವಿರೋಧ ಪಕ್ಷವಾಗಿದ್ದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ, ಈ ಯೋಜನೆಯನ್ನು ಗ್ರಾಮೀಣ ಸಮಾಜದ ಸಾಮಾಜಿಕ–ಆರ್ಥಿಕ ಜೀವನದಲ್ಲಿ ಯಥಾಸ್ಥಿತಿಯನ್ನು ಕಾಪಾಡುವ ಕೊಳಕು ಪ್ರಯತ್ನವೆಂದು ಪರಿಗಣಿಸಿತು. ಇದು ಮಕ್ಕಳನ್ನು ಅವರ ಪೂರ್ವಜರ ಕಸುಬುಗಳಿಗೆ ಅಂಟಿಕೊಳ್ಳುವಂತೆ ಒತ್ತಾಯಿಸುತ್ತದೆ ಮತ್ತು ದೇಶವನ್ನು ಕೈಗಾರಿಕಾ ಪೂರ್ವ ಯುಗಕ್ಕೆ ಹಿಂತಿರುಗಿಸಲು ಪ್ರಯತ್ನಿಸುತ್ತದೆ ಎಂದು ಆರೋಪಿಸಿತು.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಕಮ್ಯುನಿಸ್ಟ್ ಪಕ್ಷದ ಕಾಮ್ರೇಡ್ ಪಿ. ರಾಮಮೂರ್ತಿ ಅವರು, “ಊಳಿಗಮಾನ್ಯ–ವಸಾಹತುಶಾಹಿ ವ್ಯವಸ್ಥೆಯನ್ನು ಆರೋಗ್ಯಕರ, ರಾಷ್ಟ್ರೀಯ, ಸ್ವತಂತ್ರ, ಸಾಮಾಜಿಕವಾಗಿ–ಯೋಜಿತ, ಉತ್ಪಾದಕ ಆಧುನಿಕ ಆರ್ಥಿಕತೆಯಿಂದ ಬದಲಾಯಿಸುವುದು ಈ ಸಮಯದ ಅಗತ್ಯವಾಗಿದೆ. ಶಿಕ್ಷಣವು ವಿಜ್ಞಾನ ಆಧಾರಿತವಾಗಿರಬೇಕು." ಎಂದಿದ್ದರು. ‘ಕುಲ ಕಲ್ವಿ ತಿಟ್ಟಂ’ ವಿರುದ್ಧದ ಜನರ ಪ್ರತಿಭಟನೆಯು ಮುಖ್ಯಮಂತ್ರಿ ರಾಜಾಜಿಯವರ ರಾಜೀನಾಮೆಗೆ ಕಾರಣವಾಯಿತು.

ವೃತ್ತಿಯು ಕುಟುಂಬ–ಆಧಾರಿತ ಸಾಂಪ್ರದಾಯಿಕ ಆಗಿರಬೇಕಂತೆ!!

ಈ ಯೋಜನೆಯ ಲಾಭ ಪಡೆಯಲು ಇರಬೇಕಾದ ಅರ್ಹತೆ ಹೇಗಿದೆ ನೋಡಿ; ಫಲಾನುಭವಿಗೆ 18 ವರ್ಷ ತುಂಬಿರಬೇಕು. ಫಲಾನುಭವಿಯು ನೋಂದಣಿ ದಿನಾಂಕದಂದು ಸಂಬಂಧಿಸಿದ ವೃತ್ತಿಯಲ್ಲಿ ತೊಡಗಿಸಿಕೊಂಡಿರಬೇಕು. ಅದು ಕುಟುಂಬ–ಆಧಾರಿತ ಸಾಂಪ್ರದಾಯಿಕ ವೃತ್ತಿ ಆಗಿರಬೇಕು. ಅಂದರೆ, ನಿಮ್ಮ ಕುಟುಂಬ ಸಾಂಪ್ರದಾಯಿಕವಾಗಿ ಅದೇ ವೃತ್ತಿ ಮಾಡಿಕೊಂಡು ಬಂದಿದ್ದರೆ ಮಾತ್ರ ನೀವು ವಿಶ್ವಕರ್ಮ ಯೋಜನೆಯ ಲಾಭ ಪಡೆಯಬಹುದು! ಉದಾಹರಣೆಗೆ, ನಿಮ್ಮ ಕುಟುಂಬ ಕುಂಬಾರ ವೃತ್ತಿಯನ್ನು ಕುಲಕಸುಬನ್ನಾಗಿ ಮಾಡದೇ, ಬೇರೆ ವೃತ್ತಿ ಮಾಡಿಕೊಂಡು ಬಂದಿದ್ದು, ಈಗ ನೀವು ಕುಂಬಾರ ವೃತ್ತಿ ಮಾಡುತ್ತಿದ್ದರೆ ನೀವು ಈ ಯೋಜನೆಯ ಲಾಭ ಪಡೆಯಲು ಅರ್ಹರಲ್ಲ. ನೀವು ಪಾದರಕ್ಷೆ ಹೊಲಿಯುವ ಕಾಯಕದಲ್ಲಿ ತೊಡಗಿಕೊಂಡಿರುವ ಮಾತ್ರಕ್ಕೆ ನೀವು ಈ

ಪುಟ 15 ಕ್ಕೆ

ಈ ಹಿಂದಿನ ಯೋಜನೆಗಳೂ ಸಾಲ ಸೌಲಭ್ಯ ನೀಡುತ್ತಿದ್ದವು

ವಿಶ್ವಕರ್ಮ ಯೋಜನೆ ಬರುವ ಮುನ್ನವೂ ಸ್ವಯಂ ಉದ್ಯೋಗವನ್ನು ಉತ್ತೇಜಿಸಲು ಹಲವು ಯೋಜನೆಗಳನ್ನು ರೂಪಿಸಿ ಜಾರಿಗೆ ತರಲಾಗಿದೆ. ಉದಾಹರಣೆಗೆ: ಪ್ರಧಾನ ಮಂತ್ರಿ ಉದ್ಯೋಗ ಸೃಷ್ಟಿ ಕಾರ್ಯಕ್ರಮ (ಪಿಎಂಇಜಿಪಿ), ಪ್ರಧಾನ್ ಮಂತ್ರಿ ಸ್ವನಿಧಿ ಯೋಜನೆ, ಮುದ್ರಾ ಯೋಜನೆಗಳಲ್ಲಿಯೂ ಇಲ್ಲಿ ವೃತ್ತಿಯವರಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ. ಮೋದಿ ಪ್ರಧಾನಿ ಆಗುವ ಮೊದಲೂ ಸ್ವ–ಉದ್ಯೋಗ ಮಾಡಬಯಸುವ ಯುವಜನತೆಗೆ ಆರ್ಥಿಕ ನೆರವು ನೀಡುವ ಬಹಳಷ್ಟು ಯೋಜನೆಗಳಿದ್ದವು. ಈ ಯಾವುದೇ ಯೋಜನೆಗಳಲ್ಲಿಯೂ ಫಲಾನುಭವಿಗಳು ಮಾಡುವ ವೃತ್ತಿಯು ವಂಶಪಾರಂಪರ್ಯವಾಗಿರಬೇಕು, ಅದು ಕುಲಕಸುಬಾಗಿರಬೇಕು ಎಂಬ ಷರತ್ತುಗಳಿಲ್ಲ. ಇಂತಹ ಹಲವು ಯೋಜನೆಗಳು ಇಂದಿಗೂ ಇವೆ. ಆದರೂ, ನಮ್ಮ ಪ್ರಧಾನಿಯವರು ಇದನ್ನು ಈ ಸಾಂಪ್ರಾದಾಯಿಕ ವೃತ್ತಿ ಜನರ ಅನುಕೂಲಕ್ಕಾಗಿ ರೂಪಿಸಲಾಗಿದೆ ಎಂಬಂತೆ ಪ್ರಚಾರ ಮಾಡತೊಡಗಿದ್ದಾರೆ. ಇದಕ್ಕಾಗಿ ದೊಡ್ಡ ದೊಡ್ಡ ಜಾಹಿರಾತುಗಳನ್ನು ನೀಡುತ್ತಿದ್ದಾರೆ. ಈ ಮೂಲಕ ಚುನಾವಣೆಯಲ್ಲಿ ಮತಗಳಿಸುವ ತಂತ್ರ ಮಾಡತೊಡಗಿದ್ದಾರೆ.

ಸುರಂಗ ಅಪಘಾತದಲ್ಲಿ ಸಿಲುಕಿರುವ ಕಟ್ಟಡ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆಯನ್ನು ತೀವ್ರಗೊಳಿಸಬೇಕು –ಸಿಡಬ್ಲ್ಯುಎಫ್ಐ ಆಗ್ರಹ



ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ ಸುರಂಗದಲ್ಲಿ 41 ಕಾರ್ಮಿಕರು ಸಿಲುಕಿಕೊಂಡಿರುವ ಘಟನೆಯು ಕಾರ್ಮಿಕರ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಸರ್ಕಾರಗಳ ಕ್ರಿಮಿನಲ್ ನಿರ್ಲಕ್ಷ್ಯವನ್ನು ಬಯಲಿಗೆಳೆದಿದೆ ಎಂದು ಭಾರತ ಕಟ್ಟಡ ನಿರ್ಮಾಣ ಕಾರ್ಮಿಕರ ಒಕ್ಕೂಟ (ಸಿಡಬ್ಲ್ಯುಎಫ್ಐ) ಟೀಕಿಸಿದೆ.

41 ಕಟ್ಟಡ ಕಾರ್ಮಿಕರ ಜೀವಗಳು ಇನ್ನೂ ಅಪಾಯದಲ್ಲಿರುವ ಉತ್ತರ ಕಾಶಿಯಲ್ಲಿ ಪರಿಹಾರ ಕಾರ್ಯಾಚರಣೆಗಳ ವೈಫಲ್ಯ ಮತ್ತು ವಿಳಂಬದ ಬಗ್ಗೆ ಅದು ತೀವ್ರ ದುಃಖ ಹಾಗೂ ಆತಂಕ ವ್ಯಕ್ತಪಡಿಸಿದೆ.

ನವ ಉದಾರವಾದಿ ಬಿಜೆಪಿ ಸರ್ಕಾರಗಳು ಅನುಸರಿಸುತ್ತಿರುವ ಅಮಾನವೀಯ ಲಾಭಕೋರ 'ಅಭಿವೃದ್ಧಿ' ಮಾದರಿಗಳು ಮತ್ತು ನೀತಿಗಳ ಪರಿಣಾಮ ಈ ಈ ಮಾನವ ನಿರ್ಮಿತ ದುರಂತ ಅಪಘಾತ. ವರದಿಗಳು ಮತ್ತು ತಜ್ಞರ ಹೇಳಿಕೆಗಳ ಪ್ರಕಾರ, ನೂರಾರು ಕಾರ್ಮಿಕರು ಮತ್ತು ಹಗಲು ರಾತ್ರಿ ದುಡಿಯುವ ಇಂತಹ ಬೃಹತ್ ನಿರ್ಮಾಣ ಯೋಜನೆಗಳಲ್ಲಿ ಅವಘಡಗಳು ಸಂಭವಿಸಿದಾಗ ಅವುಗಳಿಂದ ಪಾರಾಗಲು ಇರಬೇಕಾದ ತುರ್ತು ಮಾರ್ಗಗಳು ಸೇರಿದಂತೆ ಯಾವುದೇ ಸುರಕ್ಷತಾ ಕ್ರಮಗಳನ್ನು ಇಲ್ಲಿ ತೆಗೆದುಕೊಳ್ಳಲಾಗಿಲ್ಲ. ಇದೇ ರೀತಿಯ ಅನೇಕ ಪ್ರಕರಣಗಳು ಹಿಂದೆ ಸಂಭವಿಸಿರುವಾಗಲೂ ವಿಶೇಷವಾಗಿ ಹಿಮಾಲಯ ಪ್ರದೇಶದಲ್ಲಿ, ದೊಡ್ಡ ಖಾಸಗಿ ನಿರ್ಮಾಣ ಕಂಪನಿಗಳು ಭೂವಿಜ್ಞಾನಿಗಳ ನಿರ್ದೇಶನಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಕಾರ್ಮಿಕರ ಜೀವಕ್ಕೆ ಅಪಾಯವನ್ನುಂಟುಮಾಡುತ್ತಿವೆ ಎಂದು ಸಿಡಬ್ಲ್ಯುಎಫ್ಐ ಹೇಳಿದೆ.

ಹೊಸ ಸುರಂಗ ನಿರ್ಮಿಸುವಾಗ ಅನುಸರಿಸಬೇಕಾದ ವಿಧಾನಗಳು ಮತ್ತು ತಂತ್ರಜ್ಞಾನಗಳನ್ನು ಹಾಗೂ ಸುರಕ್ಷತಾ ನಿರ್ದೇಶನಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಕಾನೂನು ಜಾರಿ ಕಾರ್ಯವಿಧಾನವು ಸಂಪೂರ್ಣ ವಿಫಲವಾಗಿರುವುದಕ್ಕೆ ಈ ಘಟನೆ ಸಾಕ್ಷಿ.

ಭಾರತದಲ್ಲಿನ ಕಟ್ಟಡ ನಿರ್ಮಾಣ ಕ್ಷೇತ್ರವು ಪ್ರಪಂಚದಾದ್ಯಂತದ ಕೆಲಸದ ಸ್ಥಳದಲ್ಲಿ ಅಪಘಾತಗಳಿಗೆ ಹೆಚ್ಚಿನ ಕೊಡುಗೆ ನೀಡುತ್ತಿದೆ. ಉತ್ತರಕಾಶಿಯಲ್ಲಿ ದುರ್ಘಟನೆ ನಮ್ಮ ಸರ್ಕಾರಗಳು ಸಮಯೋಚಿತ ಕ್ರಮ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸುವಾಗ ನಿರ್ವಹಿಸಬೇಕಾದ ಸಮನ್ವಯತೆಯಲ್ಲಿ ನಿರ್ಲಕ್ಷ್ಯ ವಹಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಮೋದಿ ಸರ್ಕಾರದ ಕೇಂದ್ರ ಸಚಿವರು ಚುನಾವಣಾ ಪ್ರಚಾರದಲ್ಲಿ ನಿರತರಾಗಿದ್ದು, ನಿರ್ವಹಣಾ ಕೇಂದ್ರದ ತಂಡವನ್ನು ಬಹಳ ತಡವಾಗಿ ಘಟನಾ ಸ್ಥಳಕ್ಕೆ ಕಳುಹಿಸಲಾಗಿದೆ ಮಾತ್ರವಲ್ಲ ಘಟನೆ ಸಂಭವಿಸಿದ 10 ದಿನಗಳ ಬಳಿಕ ಮಾತ್ರವೇ ಅಂತಾರಾಷ್ಟ್ರೀಯ ತಜ್ಞರ ಸೇವೆ ಪಡೆಯಲಾಗಿದೆ ಎಂದು ಅದು ಆಕ್ರೋಶ ವ್ಯಕ್ತಪಡಿಸಿದೆ.

ದುರ್ಘಟನೆಯ ಸ್ಥಳಕ್ಕೆ ತೆರಳಿದ ಕಾರ್ಮಿಕ ನಾಯಕರಿಗೆ ಘಟನಾ ಸ್ಥಳಕ್ಕೆ ತೆರಳಲು ಅವಕಾಶ ನೀಡಲಿಲ್ಲ ಪ್ರತಿಭಟನೆಯ ನಂತರವೇ ಸಿಐಟಿಯು ನಿಯೋಗಕ್ಕೆ ಕೆಲಸದ ಸ್ಥಳದಲ್ಲಿ ಇತರ ಕಾರ್ಮಿಕರನ್ನು ಭೇಟಿ ಮಾಡಲು ಅವಕಾಶ ನೀಡಲಾಯಿತು. ಸುರಂಗದ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಹಾಕಲಾಗಿದ್ದ ಹ್ಯೂಮ್ ಪೈಪ್‌ಗಳನ್ನು ಸಹ ತೆಗೆದುಹಾಕಲಾಗಿದೆ ಎಂದು ಕಾರ್ಮಿಕರು ದೂರಿದರು. ಈ ನಿರ್ಲಕ್ಷ್ಯಕ್ಕೆ ಕಾರಣವಾದ ಖಾಸಗಿ ನಿರ್ಮಾಣ ಸಂಸ್ಥೆಯ ವಿರುದ್ಧ ಇದುವರೆಗೆ ಯಾವುದೇ ಪ್ರಕರಣ ದಾಖಲಾಗಿಲ್ಲ ಎನ್ನುವುದು ಹಲವು ಅನುಮಾನಗಳಿಗೆ ಎಡೆಮಾಡಿದೆ.

ಕಾರ್ಮಿಕರ ಜೀವಗಳನ್ನು ಉಳಿಸಲು ಎಲ್ಲಾ ತಜ್ಞರು ಮತ್ತು ಯಂತ್ರೋಪಕರಣಗಳು ಲಭ್ಯವಾಗುವಂತೆ ಸರ್ಕಾರವು ರಕ್ಷಣಾ ಕಾರ್ಯಾಚರಣೆಯನ್ನು ಹೆಚ್ಚಿಸಬೇಕೆಂದು ಸಿಡಬ್ಲ್ಯುಎಫ್ಐ ಆಗ್ರಹಿಸಿದೆ.

ಸೂಕ್ಷ್ಮ ಪರಿಸರ ಪ್ರದೇಶದಲ್ಲಿ ಸುರಂಗದ ವಿವಿಧ ಹಂತಗಳಲ್ಲಿ ಯಾವುದೇ ಹಂತದಲ್ಲಿ ಸಡಿಲತೆಯ ಬಗ್ಗೆ ಇಂತಹ ಕಾಮಗಾರಿಗಳನ್ನು ಸಂಪೂರ್ಣ ತನಿಖೆ ಒಳಪಡಿಸಬೇಕು ಮತ್ತು ಅಪಘಾತಕ್ಕೆ ಕಾರಣವಾದ ಎಲ್ಲರ ವಿರುದ್ಧ ದೂರು ದಾಖಲಿಸಬೇಕು. ನೊಂದ ಕಾರ್ಮಿಕರ ಕುಟುಂಬಗಳಿಗೆ ಅಗತ್ಯ ನೆರವು ನೀಡಬೇಕು. ಹಾಗೂ ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯ ಸಂಹಿತೆಯನ್ನು (ಒಎಸ್‌ಹೆಚ್ ಕೋಡ್) ತಕ್ಷಣವೇ ಹಿಂಪಡೆಯಬೇಕೆಂದು ಒತ್ತಾಯಿಸಿರುವ ಸಿಡಬ್ಲ್ಯುಎಫ್ಐ ಈ ಹೊಸ ಸಂಹಿತೆಯು ಪ್ರಸ್ತುತ ಇರುವ ಸುರಕ್ಷತಾ ಕ್ರಮಗಳನ್ನೆಲ್ಲವನ್ನೂ ದುರ್ಬಲಗೊಳಿಸುತ್ತದೆ, ಬದಲಿಗೆ ಕಾರ್ಮಿಕರನ್ನು ಹೊರಗೆ ತಳ್ಳುತ್ತದೆ ಎಂದು ಹೇಳಿದೆ.

ಇಂತಹ ಘಟನೆಗಳ ಪುನರಾವರ್ತನೆ ಯಾಗದಂತೆ ಹಾಗೂ ಕಾರ್ಮಿಕರ ಕೆಲಸದ ಸ್ಥಳದಲ್ಲಿ ಸುರಕ್ಷತಾ ವ್ಯವಸ್ಥೆಯನ್ನು ಬಲಪಡಿಸಲು ಸರಕಾರ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಅದು ಆಗ್ರಹಿಸಿದೆ. ●

ಸಿಲುಕಿಕೊಂಡಿರುವ ಕಾರ್ಮಿಕರ ರಕ್ಷಣೆಗೆ ಸರ್ವ ಪ್ರಯತ್ನಗಳನ್ನು ಮಾಡಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಉತ್ತರಾಖಂಡದ ಉತ್ತರಕಾಶಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಸುರಂಗ ಕುಸಿದು ಅದರೊಳಗೆ ಸಿಲುಕಿರುವ 41 ಕಾರ್ಮಿಕರ ಸ್ಥಿತಿ ಕಳವಳ ಉಂಟುಮಾಡುತ್ತಿದೆ. ಘಟನೆ ನಡೆದು ಒಂದು ವಾರ ಕಳೆದರೂ ಇಲ್ಲಿಯವರೆಗೆ ಅವರನ್ನು ರಕ್ಷಿಸಲು ನಡೆಸಿದ ಪ್ರಯತ್ನಗಳು ಸಫಲವಾಗಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ.

ರಕ್ಷಣಾ ಕಾರ್ಯಕ್ಕೆ ಅಂತರಾಷ್ಟ್ರೀಯ ತಜ್ಞರು ಮತ್ತು ಏಜೆನ್ಸಿಗಳ ನೆರವನ್ನು ಕೇಂದ್ರ ಸರ್ಕಾರ ಏಕೆ ಪಡೆದಿಲ್ಲ ಎಂಬುದು ವಿವರಿಸಲಾಗದ ಸಂಗತಿ. ಸಿಕ್ಕಿಬಿದ್ದ ಕಾರ್ಮಿಕರನ್ನು ಹೊರತೆಗೆಯಲು ಇತ್ತೀಚಿನ ಪರಿಣತಿ ಮತ್ತು ತಂತ್ರಜ್ಞಾನವನ್ನು ನಿಯೋಜಿಸಲು ಸರ್ವಪ್ರಯತ್ನ ನಡೆಸಬೇಕು ಎಂದು ಅದು ಆಗ್ರಹಿಸಿದೆ.

"ಶಿಕ್ಷಣ ಉಳಿಸಿ, ಎನ್‌ಇಪಿ ತಿರಸ್ಕರಿಸಿ-ಭಾರತ ಉಳಿಸಿ, ಬಿಜೆಪಿಯನ್ನು ತಿರಸ್ಕರಿಸಿ" ಜನವರಿ 12 ರಂದು ಪಾರ್ಲಿಮೆಂಟ್ ಚಲೋ; ಫೆಬ್ರವರಿ 1 ರಂದು ಚೆನ್ನೈ ರ‍್ಯಾಲಿ 16 ವಿದ್ಯಾರ್ಥಿ ಸಂಘಟನೆಗಳ ಜಂಟಿ ಕರೆ

ಭಾರತದ ಹದಿನಾರು ಪ್ರಮುಖ ವಿದ್ಯಾರ್ಥಿಗಳ ಸಂಘಟನೆಗಳು ಶಿಕ್ಷಣ ಕ್ಷೇತ್ರದಲ್ಲಿ ಮೋದಿ ಸರ್ಕಾರ ಅನುಸರಿಸುತ್ತಿರುವ ವಿಧ್ವಂಸಕ ಕ್ರಮಗಳ ವಿರುದ್ಧ ರಾಷ್ಟ್ರವ್ಯಾಪಿ ಚಳವಳಿಯನ್ನು ನಡೆಸಲು ರಚಿಸಿಕೊಂಡಿರುವ ಜಂಟಿ ವೇದಿಕೆ "ಯುನೈಟೆಡ್ ಸ್ಟೂಡೆಂಟ್ಸ್ ಆಫ್ ಇಂಡಿಯಾ" "ಶಿಕ್ಷಣವನ್ನು ಉಳಿಸಿ, ಎನ್‌ಇಪಿಯನ್ನು ತಿರಸ್ಕರಿಸಿ-ಭಾರತ ಉಳಿಸಿ, ಬಿಜೆಪಿಯನ್ನು ತಿರಸ್ಕರಿಸಿ" ಎಂದು ಕರೆ ನೀಡಿದೆ. ಈ ಚಳುವಳಿಯ ಮೊದಲ ಹೆಜ್ಜೆಯಾಗಿ ಜನವರಿ 12ರಂದು 'ಸಂಸತ್ ಚಲೋ' ಕಾರ್ಯಕ್ರಮದ ಅಡಿಯಲ್ಲಿ ನವದೆಹಲಿಯಲ್ಲಿ ಬೃಹತ್ ಸಂಯುಕ್ತ ರ‍್ಯಾಲಿ ನಡೆಯಲಿದೆ. ನಂತರ ಫೆಬ್ರುವರಿ 1ರಂದು ಚೆನ್ನೈನಲ್ಲಿ ಮತ್ತೊಂದು ರ‍್ಯಾಲಿ ನಡೆಸುವುದಾಗಿ ನವೆಂಬರ್ 21, 2023 ರಂದು ಪ್ರೆಸ್ ಕ್ಲಬ್ ಆಫ್ ಇಂಡಿಯಾದಲ್ಲಿ ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ಸಂಘಟನೆಗಳ ಮುಖಂಡರು ಪ್ರಕಟಿಸಿದ್ದಾರೆ. ಈ ಚಳುವಳಿಯ ಮೊದಲ ಹೆಜ್ಜೆಯ ಕಾರ್ಯಾಚರಣೆಯ ಆಗ್ರಹಗಳು ಹೀಗಿವೆ:

1. ರಾಷ್ಟ್ರೀಯ ಶಿಕ್ಷಣ ನೀತಿ 2020 ಮತ್ತು ನೀಟ್‌ಗೆ ತಿರಸ್ಕಾರ
2. ಭಗತ್ ಸಿಂಗ್ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯಿದೆ ತರಬೇಕು.
3. ಶುಲ್ಕ ಹೆಚ್ಚಳಕ್ಕೆ ಪ್ರತಿರೋಧ ಮತ್ತು ಶಿಶುವಿಹಾರದಿಂದ ಸ್ನಾತಕೋತ್ತರ ಹಂತದ ವರೆಗೆ ಉಚಿತ, ಗುಣಮಟ್ಟದ ಶಿಕ್ಷಣ.
4. ಶಿಕ್ಷಣದ ಕೋಮುವಾದೀಕರಣ, ವ್ಯಾಪಾರೀಕರಣ ಮತ್ತು ಕೇಂದ್ರೀಕರಣಕ್ಕೆ ಪ್ರತಿರೋಧ; ಶಿಕ್ಷಣದಲ್ಲಿ ಪ್ರಜಾಸತ್ತಾತ್ಮಕ ಜಾತ್ಯತೀತ ಪ್ರಗತಿಪರ ವೈಜ್ಞಾನಿಕ ಮನೋಧರ್ಮವನ್ನು ಎತ್ತಿಹಿಡಿಯಬೇಕು.
5. ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಇತರ ಹಿಂದುಳಿದ ಜಾತಿಗಳು ಮತ್ತು ಇತರ ಅಂಚಿನಲ್ಲಿರುವ ಗುಂಪುಗಳಿಗೆ ಹಕ್ಕುಗಳು ಮತ್ತು ಅವಕಾಶಗಳನ್ನು ರಕ್ಷಿಸಬೇಕು ಮತ್ತು ಸೃಷ್ಟಿಸಬೇಕು. ಖಾಸಗಿ ವಲಯದಲ್ಲಿ ಮೀಸಲಾತಿ ನೀತಿಯನ್ನು ಜಾರಿಗೊಳಿಸಬೇಕು.
6. ರೋಹಿತ್ ಕಾಯಿದೆಯನ್ನು ತರಬೇಕು ಮತ್ತು ಜಾತಿ ಮತ್ತು ಆರ್ಥಿಕ ಸ್ಥಾನಮಾನದ ಆಧಾರದ ತಾರತಮ್ಯವನ್ನು ನಿಲ್ಲಿಸಬೇಕು.
7. ಪ್ರತಿ ಕ್ಯಾಂಪಸ್‌ನಲ್ಲಿ GSCASH ಅನ್ನು ಸ್ಥಾಪಿಸಬೇಕು-ಎಲ್ಲಾ ಶಿಕ್ಷಣ ಸಂಸ್ಥೆಗಳನ್ನು ಲೈಂಗಿಕ ಕಿರುಕುಳ ಮತ್ತು ಲಿಂಗ ತಾರತಮ್ಯದಿಂದ ಮುಕ್ತಗೊಳಿಸಬೇಕು ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಲೈಂಗಿಕ ಕಿರುಕುಳದ ವಿರುದ್ಧ ಸಮಿತಿಗಳನ್ನು ರಚಿಸಬೇಕು.
8. ಎಲ್ಲಾ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು ನಡೆಸಬೇಕು. ಬೋಧಕ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಖಾತ್ರಿಪಡಿಸಬೇಕು. ●





ವಿಸ್ತರಣಾಕೋರ ಪ್ರವೃತ್ತಿ, ಜನಾಂಗಭೇದ ನೀತಿ, ನರಮೇಧಕ್ಕೂ ಹಿಂಜರಿಯದ ಜನಾಂಗೀಯ 'ಶುದ್ಧೀಕರಣ'ದ ಪ್ರವೃತ್ತಿ – ವಲಸಿಗ ವಸಾಹತುಶಾಹಿಯ ಈ ಎಲ್ಲ ಲಕ್ಷಣಗಳನ್ನೂ ಇಸ್ರೇಲ್ ಮೈಗೂಡಿಸಿಕೊಂಡಿದೆ. ಇಸ್ರೇಲಿ ಬಲಪಂಥೀಯರಿಗೆ, ಶತಮಾನಗಳ ಕಾಲ ಯಹೂದಿಗಳು ಅನುಭವಿಸಿದ ಕಿರುಕುಳ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಾಝಿ ಜರ್ಮನಿಯಲ್ಲಿ ನಡೆದ ಅವರ ಹತ್ಯಾಕಾಂಡವು ವಲಸಿಗ ವಸಾಹತುಶಾಹಿಗೆ ಒಂದು ರೀತಿಯ ಮುಸುಕನ್ನು ಒದಗಿಸಿದೆ. ಇದಕ್ಕೆ ಪಾಶ್ಚಾತ್ಯ ಸಾಮ್ರಾಜ್ಯಶಾಹಿಗಳ ಬೆಂಬಲ ಶತಮಾನಗಳ ಕಾಲ ಪಾಶ್ಚಾತ್ಯ ದೇಶಗಳು ಯಹೂದಿಗಳಿಗೆ ನೀಡಿದ ಕಿರುಕುಳಗಳ ಬಗ್ಗೆ ಹೊಂದಿರುವ ಅಪರಾಧಿ ಭಾವನೆಯನ್ನು ನಿವಾರಿಸಿಕೊಳ್ಳುವ ಒಂದು ಮಾರ್ಗ. ಈ ವಲಸಿಗ ವಸಾಹತುಶಾಹಿಯನ್ನು ಕೇವಲ ಪ್ಯಾಲೆಸ್ತೀನಿ ಜನರ ಹಿತದೃಷ್ಟಿಯಿಂದ ಮಾತ್ರವಲ್ಲ, ಇಡೀ ವಿಶ್ವದ ಜನರ ಹಿತದೃಷ್ಟಿಯಿಂದ ತಡೆದು ನಿಲ್ಲಿಸಲೇಬೇಕು.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ನೊಂದವರೆಂಬ ಮುಸುಕು ಹೊದ್ದಿರುವ ಇಸ್ರೇಲಿನ ನೆಲೆಸಿಗ ವಸಾಹತುಶಾಹಿ

ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳು ವಸಾಹತುಶಾಹಿಯ ಎರಡು ವಿಭಿನ್ನ ಮಾದರಿಗಳ ಉಗಮವನ್ನು ಕಂಡವು: ಮೊದಲನೆಯದು, ಅದಾಗಲೇ ಮಿಗುತಾಯವನ್ನು ಕಿತ್ತುಕೊಳ್ಳುವ ವ್ಯವಸ್ಥೆಗಳನ್ನು ರೂಢಿಸಿಕೊಂಡು, ಅದರಿಂದ ಪೋಷಣೆ ಪಡೆದ ಕೇಂದ್ರೀಕೃತ ಆಡಳಿತವನ್ನು ಸ್ಥಾಪಿಸಿಕೊಂಡಿದ್ದ ದೇಶಗಳನ್ನು ವಶಪಡಿಸಿಕೊಂಡು ಅಲ್ಲಿ ಹಳೆಯ ಆಡಳಿತ ವ್ಯವಸ್ಥೆಗಳನ್ನು ಬದಲಿಸಿ ವಸಾಹತುಶಾಹಿ ಆಳ್ವಿಕೆಯನ್ನು ಸ್ಥಾಪಿಸುವುದು. ವಸಾಹತುಶಾಹಿಯ ಈ ವಿಧಾನಕ್ಕೆ ಭಾರತ ಒಂದು ಅತ್ಯುತ್ತಮ ಉದಾಹರಣೆ. ಸ್ಥಳೀಯ ಕುಶಲಕರ್ಮಿಗಳನ್ನು ನಾಶಪಡಿಸುವುದು ಮತ್ತು ಆ ಮೂಲಕ ಯುರೋಪಿನಲ್ಲಿ ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳುವುದಲ್ಲದೆ, ಕಸಿದುಕೊಂಡ ಮಿಗುತಾಯವನ್ನು ಮೆಟ್ರೊಪಾಲಿಟನ್ ದೇಶಗಳಿಗೆ ಬೇಕಾಗುವ ಸರಕುಗಳ ರೂಪದಲ್ಲಿ ಸಾಗಿಸುವುದು ಈ ಮಾದರಿಯ ಸಾರಾಂಶ. ಆದರೆ ಈ ದೇಶಗಳಲ್ಲಿನ ಜನಸಂಖ್ಯಾ ಬಾಹುಳ್ಯ ಮತ್ತು ಉಷ್ಣ ಹವಾಗುಣದಿಂದಾಗಿ ಈ ದೇಶಗಳಿಗೆ ಸಮಶೀತೋಷ್ಣ ಹವಾಗುಣದ ಯೂರೋಪಿನ ದೇಶಗಳ ಜನರ ವಲಸೆ ನಡೆದದ್ದು ಬಹಳ ಕಡಿಮೆ.

ಎರಡನೆಯ ಮಾದರಿಗೆ ಅಮೆರಿಕಾ ಒಂದು ಅತ್ಯುತ್ತಮ ಉದಾಹರಣೆಯಾಗಿದೆ. ಸ್ಥಳೀಯ ಜನರನ್ನು ಅವರ ಭೂಮಿಯಿಂದಲೇ ಹೊರದಬ್ಬುವುದು ಮತ್ತು ಹೊರದಬ್ಬಿದ ವಸಾಹತುಗಾರರೇ ಅದನ್ನು ಆಕ್ರಮಿಸಿಕೊಳ್ಳುವುದು ಮತ್ತು ಅಂಥಹ ಪ್ರದೇಶಗಳನ್ನು ವಶಪಡಿಸಿಕೊಂಡ ಮಾದರಿ ಇದು. ಮೆಟ್ರೊಪಾಲಿಟನ್(ಯುರೋಪಿಯನ್) ದೇಶಗಳಿಂದ ವಲಸೆ ಹೋಗುವುದು ಮತ್ತು ಸ್ಥಳೀಯ ನಿವಾಸಿಗಳಿಂದ ಭೂಮಿಯನ್ನು (ಮತ್ತು ಅವರ ಇತರೆ ಕೆಲವು ಸ್ವತ್ತುಗಳನ್ನು) ಕಿತ್ತುಕೊಳ್ಳುವುದು, ಸ್ಥಳೀಯ ಜನರ ಸಂಹಾರ ಅಥವಾ ಅವರನ್ನು ಒಂದು "ಮೀಸಲು" ಪ್ರದೇಶ ಎನಿಸಿಕೊಂಡ ಕೊಂಪೆಗಳಿಗೆ ತಳ್ಳುವುದು ಈ ವಿಧಾನಸ ಸಾರಾಂಶ. ವಸಾಹತುಶಾಹಿಯ ಈ ಎರಡು ಮಾದರಿಗಳನ್ನು ನಾನು ಅನುಕ್ರಮವಾಗಿ "ಕಸಿದುಕೊಳ್ಳುವ ವಸಾಹತುಶಾಹಿ" ಮತ್ತು "ನೆಲಸಿಗ ವಸಾಹತುಶಾಹಿ" ಎಂದು ಕರೆಯುತ್ತೇನೆ.

ವಸಾಹತುಶಾಹಿಯ ಈ ಎರಡು ಮಾದರಿಗಳ ನಡುವಿನ ವ್ಯತ್ಯಾಸವೆಂದರೆ, ಒಂದು ಮಾದರಿಯಲ್ಲಿ ಭೂಮಿಯ ಉತ್ಪನ್ನಗಳನ್ನು ಕಸಿದುಕೊಳ್ಳಲಾಗುತ್ತಿತ್ತು ಮತ್ತು ಇನ್ನೊಂದರಲ್ಲಿ ಭೂಮಿಯನ್ನೇ ಕಸಿದುಕೊಳ್ಳಲಾಗುತ್ತಿತ್ತು. ಈ ಸಂದರ್ಭದಲ್ಲಿ ಗಮನಿಸಬೇಕಾದ ಒಂದು ಮುಖ್ಯವಾದ ಅಂಶವೆಂದರೆ: ಮೊದಲನೆಯ ಮಾದರಿಯಲ್ಲಿ, ಭೂಮಿಯಲ್ಲಿ ಕೆಲಸ ಮಾಡಲು ಸ್ಥಳೀಯ ಜನರ ಅವಶ್ಯಕತೆ ಅಪಾರವಾಗಿತ್ತು. ಅವರು ಭೂಮಿಯಿಂದ ತೆಗೆದ ಫಸಲಿನ ಒಂದು ಬಹು ದೊಡ್ಡ ಪಾಲನ್ನು ವಸಾಹತುಶಾಹಿಯು ವಶಪಡಿಸಿಕೊಂಡ ಕಾರಣದಿಂದಾಗಿ ಸ್ಥಳೀಯ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಈ ವಿದ್ಯಮಾನವು ಬ್ರಿಟಿಷ್ ಭಾರತದಲ್ಲಿ ಕ್ಷಾಮಗಳ ರೂಪದಲ್ಲಿ ಮರುಕಳಿಸುತ್ತಿತ್ತು. ಆದರೆ, ವಸಾಹತುಶಾಹಿಯು ವಶಪಡಿಸಿಕೊಳ್ಳುವ ಮಿಗುತಾಯವನ್ನು ಉತ್ಪಾದಿಸಲು ಸಾಕಷ್ಟು ಮಂದಿ ಸ್ಥಳೀಯ ಜನರು ಬದುಕುಳಿಯಬೇಕಾದದ್ದು ಅನಿವಾರ್ಯವಾಗಿತ್ತು. ಅದಕ್ಕಾಗಿ, ವಸಾಹತುಶಾಹಿಯು ಕೆಲವು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲೇಬೇಕಾಯಿತು. ಈ ಸುಧಾರಣಾ ಕ್ರಮಗಳ ಸಂಬಂಧವಾಗಿ ಎರಡನೆಯ ಮಾದರಿಯ ಬಗ್ಗೆ ಹೇಳುವುದಾದರೆ, ಅಂದರೆ ವಲಸಿಗ ವಸಾಹತುಶಾಹಿಯ ವಿಷಯದಲ್ಲಿ, ಅದು ಸ್ಥಳೀಯ ಜನರನ್ನು ಸಂರಕ್ಷಿಸುವ ಅಗತ್ಯವೇ ಇರಲಿಲ್ಲ. ಏಕೆಂದರೆ, ಮೆಟ್ರೊಪಾಲಿಟನ್ ದೇಶಗಳಿಂದ ವಲಸೆ ಬಂದವರು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದರೆ, ಅಥವಾ ಸ್ಥಳೀಯರನ್ನು ಸಂಹರಿಸಿ ಬೇರೆಡೆಯಿಂದ ಕಾರ್ಮಿಕರನ್ನು ಸುಲಭವಾಗಿ ಪಡೆಯಬಹುದಾದರೆ, ಸ್ಥಳೀಯರನ್ನು ಸಂರಕ್ಷಿಸುವ ಅಗತ್ಯವಿರಲಿಲ್ಲ. ಹಾಗಾಗಿ, ವಲಸಿಗ ವಸಾಹತುಶಾಹಿಯು ವಿಶೇಷವಾಗಿ ಜನಾಂಗೀಯ ಶುದ್ಧೀಕರಣವನ್ನು ರೂಢಿಸಿಕೊಂಡಿತ್ತು. ಮತ್ತು, ಅದಕ್ಕಾಗಿ ನರಮೇಧವನ್ನೂ ನಡೆಸಿತ್ತು.



ವಲಸಿಗ ವಸಾಹತು ಶಾಹಿಯು ಮತ್ತೊಂದು ಪ್ರಮುಖ ಲಕ್ಷಣವೆಂದರೆ ಅದು ವಿಸ್ತರಣಾಕೋರವಾಗಿತ್ತು. ವಲಸೆ ಮುಂದುವರಿಯುತ್ತಿದ್ದಂತಯೇ, ವಲಸಿಗರು ಆಕ್ರಮಿಸಿಕೊಳ್ಳುತ್ತಿದ್ದ ಭೂಮಿಯ ವಿಸ್ತೀರ್ಣವೂ ಹೆಚ್ಚುತ್ತಲೇ ಇತ್ತು ಎಂಬ ಅರ್ಥದಲ್ಲಿ ಅದು ವಿಸ್ತರಣಾಕೋರವಾಗಿತ್ತು. ಆಕ್ರಮಿಸಬಹುದಾದ ಭೂಮಿಯ ನೈಸರ್ಗಿಕ ಮಿತಿಯನ್ನು ತಲುಪುವವರೆಗೂ ಅಥವಾ ಆಕ್ರಮಣಕ್ಕೆ ಪಕ್ಕದ ಬಲಿಷ್ಟ ಪ್ರಭುತ್ವವಿದ್ದಲ್ಲಿ ಅದರ ಗಡಿಗಳು ಅಡ್ಡಿಯಾಗುವವರೆಗೂ ಭೂಮಿಯ ಅತಿಕ್ರಮಣ ಮುಂದುವರೆಯುತ್ತಲೇ ಇತ್ತು.

ಆಧುನಿಕ ವಲಸಿಗ ವಸಾಹತುಶಾಹಿಗೆ ಒಂದು ಉದಾಹರಣೆ

ಇವೆಲ್ಲವೂ ಗತಕಾಲಕ್ಕೆ ಸೇರಿದ್ದು ಎಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ; ಬಂಡವಾಳಶಾಹಿಯ ಅಡಿಯಲ್ಲಿ ಸಾಮ್ರಾಜ್ಯಶಾಹಿಯು ಒಂದು ವಾಸ್ತವವಾಗಿ ಉಳಿದಿದೆಯಾದರೂ, ವಸಾಹತುಶಾಹಿಯು ಈಗ ಅಷ್ಟೇನೂ ಪ್ರಸ್ತುತವಲ್ಲ ಎಂದು ಕೆಲವರು ಹೇಳಲಾಗುತ್ತದೆ. ಇದು ತಪ್ಪೇ ತಪ್ಪು. ಏಕೆಂದರೆ, ಇಂದಿನ ಕಾಲಮಾನದಲ್ಲೂ, ವಸಾಹತುಶಾಹಿ ಇದೆ ಎಂಬುದಕ್ಕೆ ಇಸ್ರೇಲ್ ಒಂದು ಉತ್ತಮ ಉದಾಹರಣೆಯಾಗಿದೆ. ಹಲವು ಶತಮಾನಗಳಿಂದಲೂ ಅಲ್ಪಸಂಖ್ಯಾತ ಯಹೂದಿಗಳು ಹಿಂಸೆ, ಕಿರುಕುಳಗಳಿಗೆ ಒಳಗಾಗಿದ್ದರು. 1939–1945ರ ಅವಧಿಯಲ್ಲಿ ಜರ್ಮನಿಯಲ್ಲಿ ನಾಜಿಗಳು ನಡೆಸಿದ ಹತ್ಯಾಕಾಂಡದಲ್ಲಿ ಅವು ಭಯಾನಕ ಪರಾಕಾಷ್ಠೆಯನ್ನು ಕಂಡವು. ನಂತರ, ಒಂದು ವೈಷಮ್ಯಭರಿತ ಜಗತ್ತಿನಿಂದ, ಬ್ರಿಟಿಷ್ ವಸಾಹತುಶಾಹಿಯ ಪ್ರೋತ್ಸಾಹದಿಂದ ನಿರಾಶ್ರಿತರಾಗಿ ಪ್ಯಾಲೆಸ್ಟೈನ್‌ಗೆ ಬಂದರು ಮತ್ತು 1948ರಲ್ಲಿ ಅದು ತಮ್ಮದೇ ಪವಿತ್ರ ನಾಡು ಎಂಬ ದಾವೆಯೊಂದಿಗೆ ಇಸ್ರೇಲ್‌ನ ಝಿಯೋನಿಸ್ಟ್ ಪ್ರಭುತ್ವವನ್ನು ಸ್ಥಾಪಿಸಿದರು. ಆದರೆ, ಸಾಮ್ರಾಜ್ಯಶಾಹಿ ಅಮೆರಿಕಾದ ಒಳಸಂಚುಗಳು ಮತ್ತು ಅದರ ಸಕ್ರಿಯ ಹಸ್ತಕ್ಷೇಪಗಳೊಂದಿಗೆ ಮತ್ತು ಆ ದೇಶದಲ್ಲಿ ಒಂದಾದ ಮೇಲೊಂದರಂತೆ ಅಧಿಕಾರಕ್ಕೆ ಬಂದ ಬಲಪಂಥೀಯ ಸರ್ಕಾರಗಳಿಂದಾಗಿ, ಕಿರುಕುಳಕ್ಕೊಳಗಾದ ನಿರಾಶ್ರಿತರಿಗೆ ಒಂದು ಆಶ್ರಯ ತಾಣವೆಂದು ಸ್ಥಾಪನೆಯಾದ ಆ ದೇಶವು, ಈಗ ಆಧುನಿಕ ವಲಸಿಗ ವಸಾಹತುಶಾಹಿಗೆ ಒಂದು ಉದಾಹರಣೆಯಾಗಿ ನಿಂತಿದೆ. ಅದರ ಅಂತರ್ಗತ ವಿಸ್ತರಣಾ ಪ್ರವೃತ್ತಿಯಿಂದ ಹಿಡಿದು, ದೇಶದ ಸಶಸ್ತ್ರ ವಲಸಿಗರನ್ನು ಪಶ್ಚಿಮ ದಂಡೆ ಮತ್ತು ಗಾಜಾ ಪಟ್ಟಿಯಂತಹ ಹೊಸ ಪ್ರದೇಶಗಳಿಗೆ ಸ್ಥಳಾಂತರಗೊಳ್ಳಲು ಪ್ರೋತ್ಸಾಹ, ಜನಾಂಗೀಯ ಶುದ್ಧೀಕರಣದ ಪ್ರವೃತ್ತಿ ಮತ್ತು ಈಗ ನರಮೇಧವನ್ನೂ ನಡೆಸುವವರೆಗೆ, ಆ ದೇಶವು ವಲಸಿಗ ವಸಾಹತುಶಾಹಿಯ ಎಲ್ಲ ಲಕ್ಷಣಗಳನ್ನೂ ಮೈಗೂಡಿಸಿಕೊಂಡಿದೆ.

ಜನಾಂಗಭೇದ ಆಳ್ವಿಕೆ ಎಲ್ಲ ವಲಸಿಗ ವಸಾಹತುಶಾಹಿಗಳ ವಿಶೇಷ ಲಕ್ಷಣ. ಈ ಗುಣಲಕ್ಷಣವು ಒಂದು ರೀತಿಯಲ್ಲಿ ಎಲ್ಲ ವಸಾಹತುಶಾಹಿಗಳಿಗೂ ಅನ್ವಯಿಸುತ್ತದೆ. ಅಲ್ಲಿನ ಪ್ರತಿ ವಸಾಹತು ನಗರದೊಳಗೂ ವಸಾಹತುಶಾಹಿ ಯಜಮಾನರು ವಾಸಿಸುವ ಪ್ರದೇಶ, ಅವರು ಕೆಲಸ ಮಾಡುವ ಪ್ರದೇಶ ಮತ್ತು ಸಾಮಾನ್ಯ ಜನರು ವಾಸಿಸುವ ಪ್ರದೇಶಗಳ ನಡುವೆ ಕಟ್ಟುನಿಟ್ಟಾದ ವಿಭಜನೆ ಇರುತ್ತದೆ. ವಲಸಿಗ ವಸಾಹತುಶಾಹಿಯ ಅಡಿಯಲ್ಲಿ, "ಬಿಳಿಯರ" ಪ್ರದೇಶಗಳು ಕೇವಲ ಕೆಲವೇ ಕೆಲವು ಮಂದಿ ವಸಾಹತುಶಾಹಿ ಅಧಿಕಾರಿಗಳಿಗೆ ಸ್ಥಳಾವಕಾಶ ನೀಡುತ್ತವೆ ಮಾತ್ರವಲ್ಲ, ಒಂದು ಬಹು ದೊಡ್ಡ ಸಂಖ್ಯೆಯ ವಲಸಿಗರಿಗೂ ಸ್ಥಳಾವಕಾಶ ನೀಡುತ್ತವೆ. ಇದು ಜನಾಂಗಭೇದ ನೀತಿಯ ಪರಿಸ್ಥಿತಿಯನ್ನು ನಿಕಟವಾಗಿ ಹೋಲುತ್ತದೆ. ವಸಾಹತುಶಾಹಿಯ ಸಮಕಾಲೀನ ಉದಾಹರಣೆಯಾದ ಇಸ್ರೇಲ್ ಕೂಡ ಜನಾಂಗಭೇದ ನೀತಿಯ ಅತ್ಯುತ್ತಮ ಚಿತ್ರಣವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಸಾಮ್ರಾಜ್ಯಶಾಹಿಗಳ 'ಪ್ರಾಯಶ್ಚಿತ್ತ' ಕ್ರಮ!

ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಸ್ಥಿರವಾದ ಬೆಂಬಲವಿಲ್ಲದೆ ಇಸ್ರೇಲಿ ವಸಾಹತುಶಾಹಿ ಮೇಲೇಳುತ್ತಿರಲಿಲ್ಲ. ಸಾಮ್ರಾಜ್ಯಶಾಹಿಗಳಿಗೆ ಮೊಟ್ಟಮೊದಲನೆಯದಾಗಿ ಇದು, ಹಲವು ಶತಮಾನಗಳ ಕಾಲ ಯಹೂದಿಗಳಿಗೆ ನೀಡಿದ ಕಿರುಕುಳಗಳ ಬಗ್ಗೆ ತಾವು ಹೊಂದಿರುವ ಅಪರಾಧಿ ಭಾವನೆಯನ್ನು ನಿವಾರಿಸಿಕೊಳ್ಳುವ ಒಂದು ಮಾರ್ಗವಾಗಿದೆ. ಈ ಪಾಶ್ಚಾತ್ಯ ಸಾಮ್ರಾಜ್ಯಶಾಹಿ ದೇಶಗಳು, ಪ್ಯಾಲೆಸ್ತೀನೀಯರಿಗೆ ಇಸ್ರೇಲ್ ಕೊಡುತ್ತಿರುವ ಕಿರುಕುಳಗಳನ್ನು ಬೆಂಬಲಿಸುವ ಮೂಲಕ ತಮ್ಮನ್ನು ತಾವು ಅಪರಾಧ ಮುಕ್ತಗೊಳಿಸಿಕೊಳ್ಳುತ್ತಿವೆ. ಮತ್ತು, ಇಸ್ರೇಲಿ ಬಲಪಂಥೀಯರಿಗೆ, ಶತಮಾನಗಳ ಕಾಲ ಯಹೂದಿಗಳು ಅನುಭವಿಸಿದ ಕಿರುಕುಳ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಜರ್ಮನಿಯಲ್ಲಿ ನಡೆದ ಹತ್ಯಾಕಾಂಡವು ವಲಸಿಗ ವಸಾಹತುಶಾಹಿಗೆ ಒಂದು ರೀತಿಯ ಮುಸುಕನ್ನು ಒದಗಿಸಿದೆ. ಈ ವಸಾಹತುಶಾಹಿಯ ಬಗ್ಗೆ ಮತ್ತು ಅದರ ಸಂಬಂಧಿತ ವಿದ್ಯಮಾನಗಳಾದ ಜನಾಂಗಭೇದ ನೀತಿ, ವಿಸ್ತರಣಾವಾದ, ಜನಾಂಗೀಯ ಶುದ್ಧೀಕರಣ ಮತ್ತು ನರಮೇಧದ ಬಗ್ಗೆ ಮಾಡುವ

ಪುಟ 15 ಕ್ಕೆ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ



ಅರ್ಜೆಂಟಿನಾದ 'ಟ್ರಂಪ್' ಅಧ್ಯಕ್ಷ!

ಜಗದ ಸುತ್ತ

ಎನ್.ಕೆ. ವಸಂತ್‌ರಾಜ್

ಟ್ರಂಪ್ ಅರ್ಜೆಂಟಿನಾದ ಅಧ್ಯಕ್ಷರಾಗುವುದು ಹೇಗೆ ಸಾಧ್ಯ ಎಂದಿರಾ?! ಅರ್ಜೆಂಟಿನಾದ 'ಟ್ರಂಪ್' ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ನವೆಂಬರ್ 19 ರಂದು ಅರ್ಜೆಂಟೀನಾದಲ್ಲಿ ನಡೆದ ಎರಡನೇ ಸುತ್ತಿನ ಅಧ್ಯಕ್ಷೀಯ ಚುನಾವಣೆಯಲ್ಲಿ “ಲಿಬರ್ಟಿ ಅಡ್ವಾನ್ಸಸ್” ಕಡು ಬಲಪಂಥೀಯ ಪಕ್ಷದ ಅಭ್ಯರ್ಥಿ ಜೇವಿಯರ್ ಮಿಲೀ ಜಯ ಗಳಿಸಿದ್ದಾರೆ. ಮಿಲೀ ತಮ್ಮ ಜನಮರುಳು ಘೋಷಣೆಗಳು, ಕಡು ಬಲಪಂಥೀಯ ಪ್ರತಿಗಾಮಿ ಸಾಮಾಜಿಕ–ಆರ್ಥಿಕ ಧೋರಣೆಗಳು, ತಿಕ್ಕಲು ವರ್ತನೆಗಳಿಂದಾಗಿ ಅರ್ಜೆಂಟಿನಾದ 'ಟ್ರಂಪ್' ಎಂಬ ಅಡ್ಡಹೆಸರು ಗಳಿಸಿದ್ದಾರೆ.

ಮಿಲೀ 55.7% ಮತಗಳನ್ನು ಗಳಿಸಿದ್ದರೆ, ಅವರ ಎದುರಾಳಿ “ಹೋಮ್ ಲ್ಯಾಂಡ್ ಒಕ್ಕೂಟ” ದ ಎಡ–ನಡುಪಂಥೀಯ ಸೆರ್ಗಿಯೋ ಮಾಸಾ 44.3% ಮತ ಪಡೆದು ಶೇ.11 ರಷ್ಟು ಮತಪ್ರಮಾಣದಷ್ಟು ಹಿಂದುಳಿದಿದ್ದಾರೆ. ಮಿಲೀ ಡಿಸೆಂಬರ್ 10 ರಂದು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಎರಡನೆಯ ಅತಿ ದೊಡ್ಡ ಆರ್ಥಿಕವಾದ ಅರ್ಜೆಂಟಿನಾ ಕಡು ಬಲಪಂಥದತ್ತ ಹೊರಳಿದ್ದು, ಎಡಪಂಥದತ್ತ ದಕ್ಷಿಣ ಅಮೆರಿಕಾದ ಚಲನೆಗೆ ದೊಡ್ಡ ಏಟು ಕೊಟ್ಟಂತಾಗಿದೆ.

ತಮ್ಮ ವಿಜಯೋತ್ಸವದ ಭಾಷಣದಲ್ಲಿ ಅವರು “ಅರ್ಜೆಂಟಿನಾದ ಪರಿಸ್ಥಿತಿ ಗಂಭೀರವಾಗಿದ್ದು ಆತಂಕಕಾರಿಯಾಗಿದೆ. ನಿಧಾನದ ಬದಲಾವಣೆಗೆ ಅವಕಾಶವಿಲ್ಲ.. ..ನಾವು ವೇಗವಾಗಿ ಸಂರಚನೆಯಲ್ಲಿ ಮೂಲಭೂತ ಬದಲಾವಣೆ ಮಾಡದಿದ್ದರೆ, ನಾವು ಚರಿತ್ರೆಯಲ್ಲೇ ಅತ್ಯಂತ ಕೆಟ್ಟ ಬಿಕ್ಕಟ್ಟು ಎದುರಿಸಲಿದ್ದೇವೆ ಎಂದರು.”

ಮಿಲೀ ಅವರ ವಿಜಯವನ್ನು ಅಭಿನಂದಿಸಿದ ನಂತರ ಮಾಸಾ “ಯೂನಿಯನ್ ಫಾರ್ ದಿ ಹೋಮ್ಲ್ಯಾಂಡ್” ಕಚೇರಿಯಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡುತ್ತಾ ಹೀಗೆ ಹೇಳಿದರು, “ಎರಡು ಮಾರ್ಗಗಳಿವೆ: ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯ, ಭದ್ರತೆ ಮತ್ತು ಪ್ರಭುತ್ವ, ರಾಷ್ಟ್ರೀಯ ಉದ್ಯಮ, ಉದ್ಯೋಗ, ಸಣ್ಣ–ಮಧ್ಯಮ ಕೈಗಾರಿಕೆಗಳು, ತಮ್ಮ ಹಕ್ಕುಗಳನ್ನು ಹೊಂದಿರುವ ಕಾರ್ಮಿಕರು ಮತ್ತು ರಾಷ್ಟ್ರೀಯ ಏಕತೆ.– ಇವುಗಳನ್ನು ಉತ್ತೇಜಿಸುವ ಮತ್ತು ರಕ್ಷಿಸುವ ಮಾರ್ಗವನ್ನು ನಾವು ಆರಿಸಿದ್ದೇವೆ, ಅರ್ಜೆಂಟೀನಾ ಎಲ್ಲರೂ ಒಪ್ಪುವ ರಾಷ್ಟ್ರೀಯ ನೀತಿಗಳನ್ನು ಅಂಗೀಕರಿಸಬೇಕು ಎಂದು ನಾನು ನಂಬಿದ್ದೇನೆ.”

ಉಚಿತ ಆರೋಗ್ಯ ಮತ್ತು ಉನ್ನತ ಶಿಕ್ಷಣ ಸೇರಿದಂತೆ ದೇಶದ ಕಷ್ಟಪಟ್ಟು ಗೆದ್ದ ಅನೇಕ ವಿಜಯಗಳು ಮಿಲಿ ಸರ್ಕಾರದಿಂದ ಆಕ್ರಮಣಕ್ಕೆ ಒಳಗಾಗುತ್ತವೆ ಎಂಬ ಭಯದಲ್ಲಿರುವ ಅರ್ಜೆಂಟೀನಾದ ಪ್ರಗತಿಪರ ಮತ್ತು ಎಡ ಚಳುವಳಿಗಳಲ್ಲಿ ಮಿಲಿಯ ಗೆಲುವು ಆಘಾತವನ್ನುಂಟು ಮಾಡಿದೆ. ಇದಲ್ಲದೆ, ಆರ್ಥಿಕತೆಯನ್ನು ಡಾಲರೈಸ್ ಮಾಡುವ, ಕೇಂದ್ರೀಯ ಬ್ಯಾಂಕ್ ಅನ್ನು ವಿಸರ್ಜಿಸುವ ಜೊತೆಗೆ ಸಾರ್ವಜನಿಕ ಖರ್ಚನ್ನು ಕಡಿತಗೊಳಿಸುವ ಮಿಲಿಯ ದೃಢ ನಿಶ್ಚಯವು ಅರ್ಜೆಂಟೀನಾದ ಈಗಾಗಲೇ ಹೆಣಗಾಡುತ್ತಿರುವ ಆರ್ಥಿಕತೆಯನ್ನು ಪ್ರಪಾತಕ್ಕೆ ತಳ್ಳಲಿದೆ. 2022 ರಲ್ಲಿ, ಅರ್ಜೆಂಟೀನಾ 100% ಕ್ಕಿಂತ ಹೆಚ್ಚು ಹಣದುಬ್ಬರವನ್ನು ದಾಖಲಿಸಿದೆ ಮತ್ತು ಬಡತನದ ಪ್ರಮಾಣವು ಪ್ರಸ್ತುತ 40% ರಷ್ಟಿದೆ%.

ಚುನಾವಣೆಗೆ ಮುಂಚಿತವಾಗಿ ಮಿಲಿಯ ಪ್ರಸ್ತಾವಿತ ಆರ್ಥಿಕ ಸುಧಾರಣೆಗಳ ಪರಿಣಾಮಗಳ ಬಗ್ಗೆ “ಸಂಕ್ಷಿಪ್ತವಾಗಿ, ಜೇವಿಯರ್ ಮಿಲಿಯ ಡಾಲರೀಕರಣ ಮತ್ತು ಹಣಕಾಸಿನ ಕಠಿಣ ಪ್ರಸ್ತಾಪಗಳು ಆಧುನಿಕ ಆರ್ಥಿಕತೆಗಳ ಸಂಕೀರ್ಣತೆಗಳನ್ನು ಕಡೆಗಣಿಸುತ್ತವೆ, ಐತಿಹಾಸಿಕ ಬಿಕ್ಕಟ್ಟುಗಳಿಂದ ಪಾಠಗಳನ್ನು ನಿರ್ಲಕ್ಷಿಸುತ್ತವೆ ಮತ್ತು ಈಗಾಗಲೇ ತೀವ್ರವಾದ ಅಸಮಾನತೆಗಳನ್ನು ಎತ್ತಿ ಹಿಡಿಯಲು ಬಾಗಿಲು ತೆರೆಯುತ್ತವೆ. ಅರ್ಜೆಂಟೀನಾ ತನ್ನ ಸಂಕೀರ್ಣ ಆರ್ಥಿಕತೆಯನ್ನು ಮುಂದೊಯ್ಯಲು, ಅಲ್ಪಾವಧಿಯಲ್ಲಿ ಆಕರ್ಷಕವಾಗಿ ಮಾತ್ರವಲ್ಲದೆ ಸುಸ್ಥಿರ, ನ್ಯಾಯಸಮ್ಮತವಾದ ಸಮತೋಲಿತ, ಪ್ರಾಯೋಗಿಕ ಆಧಾರಗಳಿರುವ ಮತ್ತು ದೀರ್ಘಾವಧಿಯಲ್ಲಿ ಸಬಲೀಕರಿಸುವ ಕಾರ್ಯತಂತ್ರಗಳೊಂದಿಗೆ ನೀತಿ ನಿರೂಪಣೆಯನ್ನು ಮಾಡುವುದು ಬಹಳ ಮುಖ್ಯ,” ಎಂದು ಎಚ್ಚರಿಕೆ ನೀಡುವ ಪತ್ರವನ್ನು ವಿಶ್ವದ 100 ಕ್ಕೂ ಹೆಚ್ಚು ಅರ್ಥಶಾಸ್ತ್ರಜ್ಞರು ಬಿಡುಗಡೆ ಮಾಡಿದ್ದರು.

ಮಾನವ ಹಕ್ಕುಗಳ ರಕ್ಷಕರು ಮತ್ತು ದೇಶದ ಹಿಂದಿನ ನಾಗರಿಕ–ಮಿಲಿಟರಿ ಸರ್ವಾಧಿಕಾರಕ್ಕೆ ಬಲಿಯಾದವರು ಮತ್ತು ಅದರಿಂದ ಬದುಕುಳಿದವರು 'ಕ್ರೂರ ಸರ್ವಾಧಿಕಾರ ಇರಲೇ ಇಲ್ಲ' ಮತ್ತು ಅದನ್ನು ಸಮರ್ಥಿಸುವ ಮಿಲೀ ಅವರ ಮನೋಭಾವದ ಬಗ್ಗೆ ಎಚ್ಚರಿಕೆ ನೀಡಿದ್ದರು. ಮೊದಲ ಸುತ್ತಿನ ಮುನ್ನ ನಡೆದ ಅಧ್ಯಕ್ಷೀಯ ಚರ್ಚೆಯಲ್ಲಿ, ಹಿಂದಿನ ನಾಗರಿಕ–ಮಿಲಿಟರಿ ಸರ್ವಾಧಿಕಾರದಲ್ಲಿ ಸಾರ್ವತ್ರಿಕವಾಗಿ ಒಪ್ಪಿತವಾದ “ಬಂಧನಕ್ಕೊಳಗಾದ ಮತ್ತು ಕಣ್ಮರೆಯಾದ 30,000 ಜನರ ಸಂಖ್ಯೆ” ತಪ್ಪಾಗಿದೆ ಮತ್ತು ಅದು ನಿಜವಾಗಿ 8,753 ಎಂದು ಅವರು ಹೇಳಿದ್ದಾರೆ. “ಇತಿಹಾಸದ ತಿರುಚಿದ ನೋಟ” ಇದೆ ಮತ್ತು ಜನರು ಮಾನವ ಹಕ್ಕುಗಳ “ಸಿದ್ಧಾಂತ” ವನ್ನು “ಹಣ ಸಂಪಾದಿಸಲು ಮತ್ತು ಮೋಸದ ವ್ಯವಹಾರಗಳನ್ನು ನಡೆಸಲು” ದುರ್ಬಳಕೆ ಮಾಡಿದ್ದಾರೆಂದು ಆರೋಪಿಸಿದರು. ಅವರ ಉಪಾಧ್ಯಕ್ಷ ಅಭ್ಯರ್ಥಿ ಹಾಗೂ ಸಹಚರ ವಿಕ್ಟೋರಿಯಾ ವಿಲ್ಲಾರ್ರುಯೆಲ್, ಎಡಪಂಥೀಯ ಗೆರಿಲ್ಲಾ ಗುಂಪುಗಳ “ಸಂತ್ರಸ್ತರ ಗೌರವಾರ್ಥವಾಗಿ” ಮತ್ತು 30,000 ಜನ ಬಂಧನಕ್ಕೊಳಗಾದ ಮತ್ತು ಕಣ್ಮರೆಯಾದ “ಮಾನವ ಹಕ್ಕುಗಳ ಸಂಘಟನೆಗಳ ಸುಳ್ಳು ಬಯಲು ಮಾಡಲು” ಸೆಪ್ಟೆಂಬರ್ ನಲ್ಲಿ ಒಂದು ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಕಾಲದ ವ್ಯಂಗ್ಯವೆಂದರೆ ಈ ವರ್ಷ ಹಿಂದಿನ ಸರ್ವಾಧಿಕಾರ ಕುಸಿದು ಪ್ರಜಾಪ್ರಭುತ್ವದ ಮರಳುವಿಕೆಯ 40 ನೇ ವಾರ್ಷಿಕೋತ್ಸವ.

ಫಲಿತಾಂಶಗಳು ಬಿಡುಗಡೆಯಾದ ನಂತರ, ಸಾಮಾಜಿಕ ನಾಯಕ ಮತ್ತು ಹಿಂದಿನ ಅಧ್ಯಕ್ಷೀಯ ಅಭ್ಯರ್ಥಿ ಜುವಾನ್ ಗ್ರಾಬೊಯಿಸ್ ಹೀಗೆ ಬರೆದಿದ್ದಾರೆ, “ಧೈರ್ಯದೊಂದಿಗೆ ಪ್ರತಿಕೂಲತೆಯನ್ನು ಎದುರಿಸಿ, ನಮ್ಮ ಸಂಘಟನೆಯನ್ನು ಬುದ್ಧಿವಂತಿಕೆಯಿಂದ ಉಳಿಸಿಕೊಳ್ಳಿ ಮತ್ತು ನಮ್ಮ ನಂಬಿಕೆಗಳನ್ನು ದೃಢವಾಗಿ ಕಾಪಾಡಿಕೊಳ್ಳಿ, ಏಕೆಂದರೆ, ನಮ್ಮ ಕೈಯಲ್ಲಿರುವ ಸಂವಿಧಾನ ಮತ್ತು ನಮ್ಮ ಹೃದಯದಲ್ಲಿರುವ ಜನರೊಂದಿಗೆ, ಎಂದಿಗಿಂತಲೂ ಬಲಶಾಲಿಯಾಗಿ ಹೆಚ್ಚು, ಹೆಚ್ಚು ಉತ್ತಮವಾಗಿ ನಾವು ಹಿಂತಿರುಗಲಿದ್ದೇವೆ.... ಯಾರೂ ಇಲ್ಲಿ ಬಿಟ್ಟುಕೊಡುವುದಿಲ್ಲ, ಕಿರುಕುಳವು ನಮ್ಮನ್ನು ಮುಟ್ಟಿದರೆ ಅದು ಭವಿಷ್ಯದ ಮುನ್ನುಗ್ಗುವಿಕೆಯಾಗಿರುತ್ತದೆ... ಮತ್ತು ಭೂಮಿ, ಆಶ್ರಯ ಮತ್ತು ಉದ್ಯೋಗಗಳನ್ನು ಎಲ್ಲರೂ ಶಾಶ್ವತವಾಗಿ ಹೊಂದಿರುವ ನ್ಯಾಯಯುತ, ಮುಕ್ತ ಮತ್ತು ಸಾರ್ವಭೌಮ ದೇಶದ ಕನಸು ಯಾವತ್ತೂ ಜೀವಂತವಾಗಿರಲಿ”.

ಕೊಲಂಬಿಯಾದ ಅಧ್ಯಕ್ಷ ಗುಸ್ತಾವೊ ಪೆಟ್ರೋ, ಮಿಲಿಯ ಅವರನ್ನು ಅಭಿನಂದಿಸಿದರು. ಆದರೆ ಹೀಗೂ ಹೇಳಿದರು “ಅರ್ಜೆಂಟೀನಾದಲ್ಲಿ ಕಡು ಬಲಪಂಥ ಗೆದ್ದಿದೆ; ಇದು ನಿಮ್ಮ ಸಮಾಜದ ನಿರ್ಧಾರ. ಲ್ಯಾಟಿನ್ ಅಮೆರಿಕಕ್ಕೆ ದುಃಖವಾಗಿದೆ ಮತ್ತು ನಾವು ನೋಡುತ್ತೇವೆ... ಸಮಾಜಕ್ಕಾಗಿ ಮತ್ತು ಮನುಕುಲದ ಪ್ರಸ್ತುತ ಸಮಸ್ಯೆಗಳಿಗೆ ಸ್ಪಂದಿಸಲು ನವ ಉದಾರೀಕರಣವು ಈಗ ಯಾವುದೇ ಪ್ರಸ್ತಾಪವನ್ನು ಹೊಂದಿಲ್ಲ,


ಚೀನಾ, ಬ್ರೆಜಿಲ್, ಕ್ಯೂಬಾ, ವೆನೆಜುವೇಲಾ ದಂತಹ (ಎಡ ಒಲವಿನ ಮತ್ತು) ಕಮ್ಯುನಿಸ್ಟ್ ದೇಶಗಳೊಂದಿಗೆ ಎಲ್ಲಾ ಸಂಬಂಧಗಳನ್ನು ಕಡಿತಗೊಳಿಸುವುದಾಗಿ ಮತ್ತು “ಮೆರ್ಕೊಸೂರ್” (ಲ್ಯಾಟಿನ್ ಅಮೆರಿಕದ ಎಡಪಂಥೀಯ ದೇಶಗಳ ಕೂಟ)ನಿಂದ ಹೊರಹೋಗುವುದಾಗಿ ಮಿಲೀ ಪ್ರತಿಜ್ಞೆ ಮಾಡಿದ್ದಾರೆ. “ನಾನು ಕಮ್ಯುನಿಸ್ಟರೊಂದಿಗೆ ಒಪ್ಪಂದ ಮಾಡಿಕೊಳ್ಳುವುದಿಲ್ಲ.” ಏತನ್ಮಧ್ಯೆ, ಇತ್ತೀಚಿನ ಪ್ರಚಾರ ರ್‍ಯಾಲಿಯಲ್ಲಿ ಮಿಲೀ ಇಸ್ರೇಲಿ ಧ್ವಜವನ್ನು ಬೀಸಿದರು ಮತ್ತು ತಿಂಗಳುಗಳ ಹಿಂದೆ “ನಾನು ಅಧ್ಯಕ್ಷನಾದರೆ ಯು.ಎಸ್. ಮತ್ತು ಇಸ್ರೇಲ್ ಜೊತೆ ಪ್ರಮುಖ ಮಿತ್ರರಾಷ್ಟ್ರಗಳಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತೇನೆ. ಇಸ್ರೇಲ್ ನೊಂದಿಗಿನ ಮೈತ್ರಿಯ ಮಟ್ಟವು ಎಷ್ಟು ಆಳವಾಗಿದೆ ಎಂದರೆ ಅರ್ಜೆಂಟೀನಾದ ರಾಯಭಾರ ಕಚೇರಿಯನ್ನು ಟೆಲ್ ಅವಿವ್ ನಿಂದ ಜೆರುಸಲೆಮ್ ಗೆ ಸ್ಥಳಾಂತರಿಸಲು ನಾನು ಉದ್ದೇಶಿಸಿದ್ದೇನೆ.” ಎಂದೂ ಅವರು ಹೇಳಿದ್ದಾರೆ.

ಸ್ಪೈನ್ ನಲ್ಲಿ ಪ್ರಗತಿಪರ ಒಕ್ಕೂಟ ಸರಕಾರ ರಚನೆ

ನವೆಂಬರ್ 20 ರಂದು, ಸ್ಪಾನಿಷ್ ಸೋಷಿಯಲಿಸ್ಟ್ ವರ್ಕರ್ಸ್ ಪಾರ್ಟಿ (ಪಿಎಸ್ಒಇ) ನಾಯಕ ಪೆಡ್ರೊ ಸ್ಯಾಂಚೆಜ್ ತಮ್ಮ ಹೊಸ ಮಂತ್ರಿಮಂಡಲವನ್ನು ಘೋಷಿಸಿದರು, ಇದರಲ್ಲಿ 22 ಸದಸ್ಯರಿದ್ದಾರೆ, ಅವರಲ್ಲಿ 12 ಮಹಿಳೆಯರು. ಬಹುಪಾಲು ಮಂತ್ರಿಗಳು ಪಿಎಸ್ ಒಇ ಮೂಲದವರಾಗಿದ್ದರೆ, ಕಮ್ಯುನಿಸ್ಟ್ ಪಾರ್ಟಿ ಆಫ್ ಸ್ಪೇನ್ (ಪಿಸಿಇ) ಸೇರಿದಂತೆ ಯೋಲಂಡಾ ಡಯಾಜ್ ನೇತೃತ್ವದ ಎಡಪಂಥೀಯ ಸುಮರ್ ಗುಂಪು ಸಂಪುಟದಲ್ಲಿ 5 ಸ್ಥಾನಗಳನ್ನು ಪಡೆದಿದೆ. ಪೊಡೆಮೊಸ್ ಪಕ್ಷವನ್ನು ಕ್ಯಾಬಿನೆಟ್ನಲ್ಲಿ ಸೇರಿಸಲಾಗಿಲ್ಲ.

ಕಳೆದ ವಾರ, ಸ್ಪೈನ್ ನ ಚುನಾಯಿತ ಶಾಸಕರು ದೇಶವನ್ನು ಮುನ್ನಡೆಸಲು ಸ್ಯಾಂಚೆಜ್ ಅವರನ್ನು ಆಯ್ಕೆ ಮಾಡಿದರು. ಅವರ ಪರವಾಗಿ 179 ಮತಗಳು ಮತ್ತು ವಿರುದ್ಧ 171 ಮತಗಳು ಬಂದಿದ್ದವು. ಈ ವರ್ಷದ ಜುಲೈನಲ್ಲಿ ನಡೆದ ಸ್ಪ್ಯಾನಿಷ್ ಸಾರ್ವತ್ರಿಕ ಚುನಾವಣೆಯ ನಂತರ, ಪಾರ್ಲಿಮೆಂಟಿನ (ಚೇಂಬರ್ ಆಫ್ ಡೆಪ್ಯೂಟೀಸ್) 350 ಸೀಟುಗಳಲ್ಲಿ ನಲ್ಲಿ ಯಾವುದೇ ಪಕ್ಷ ಅಥವಾ ಒಕ್ಕೂಟವು ಸರಳ ಬಹುಮತವನ್ನು ಗಳಿಸದೆ ಉಂಟಾದ ರಾಜಕೀಯ ಅನಿಶ್ಚಿತತೆ ಕೊನೆಗೊಂಡಿದೆ.

ತಿಂಗಳುಗಳ ಮಾತುಕತೆ ಮತ್ತು ಚೌಕಾಶಿಗಳ ನಂತರ, 'ಕ್ಯಾಟಲಾನಿಯ ಮತ್ತು ಬಾಸ್ಕ್ ರಾಷ್ಟ್ರೀಯ ಚಳುವಳಿಯ ನಾಯಕತ್ವ'ಕ್ಕೆ ಕ್ಷಮಾದಾನ ಕೊಡುವ ಒಪ್ಪಂದವನ್ನು ಪ್ರಸ್ತಾಪಿಸಿದ ನಂತರ, ಕ್ಯಾಟಲೋನಿಯಾ ಮತ್ತು ಬಾಸ್ಕ್ ನಿಂದ ರಾಷ್ಟ್ರೀಯವಾದಿ ಮತ್ತು ಗಣರಾಜ್ಯ ವಿಭಾಗಗಳ ಬೆಂಬಲವನ್ನು ಪಡೆಯಲು ಮತ್ತು ಈ ಒಕ್ಕೂಟ ರಚಿಸಲು ಸ್ಯಾಂಚೆಜ್ ಗೆ ಸಾಧ್ಯವಾಗಿದೆ.



“ಪ್ರತ್ಯೇಕತಾವಾದಿಗಳಿಗೆ” ಕ್ಷಮಾದಾನ ನೀಡುವ ಇಂತಹ ಪ್ರಯತ್ನವು “ಉಗ್ರ-ರಾಷ್ಟ್ರೀಯವಾದಿ”ಗಳನ್ನು ಮತ್ತು ಬಲಪಂಥೀಯ ವಿಭಾಗಗಳನ್ನು ಕೆರಳಿಸಿದೆ. ಇದಕ್ಕಾಗಿ ಸ್ಯಾಂಚೆಜ್ ಅವರನ್ನು ಖಂಡಿಸುವ ದೊಡ್ಡ ಪ್ರಮಾಣದ ಪ್ರತಿಭಟನೆಗಳನ್ನು ದೇಶದ ಅನೇಕ ಭಾಗಗಳಲ್ಲಿ ಸಂಪ್ರದಾಯವಾದಿ ಪೀಪಲ್ಸ್ ಪಾರ್ಟಿ ಮತ್ತು ಬಲಪಂಥೀಯ ವೋಕ್ಸ್ ಸಂಘಟಿಸಿದ್ದವು.

ಇದಕ್ಕೂ ಮೊದಲು ನವೆಂಬರ್ 6 ರಂದು ಬಲಪಂಥೀಯ ಪ್ರತಿಭಟನಾಕಾರರ ಒಂದು ಭಾಗವು ಹಿಂಸಾತ್ಮಕವಾಗಿ ತಿರುಗಿ ಪಿಎಸ್ ಒಇ ಕಚೇರಿಯನ್ನು ಹೊಡೆದುರುಳಿಸಲು ಪ್ರಯತ್ನಿಸಿತು, ಪೊಲೀಸರೊಂದಿಗೆ ಘರ್ಷಣೆ ನಡೆಸಿತು. ➚

ನೊಂದವರೆಂಬ ಮುಸುಕು ಹೊದ್ದಿರುವ ಇಸ್ರೇಲಿನ ನೆಲೆಸಿಗ ವಸಾಹತುಶಾಹಿ.....

ಪುಟ 13 ರಿಂದ

ಯಾವುದೇ ಟೀಕೆಗೂ ತಕ್ಷಣವೇ "ಯಹೂದಿ–ದ್ವೇಷ" ಎಂಬ ಕಳಂಕವನ್ನು ಹಚ್ಚಲಾಗುತ್ತದೆ. ಇದು ಹತ್ಯಾಕಾಂಡಗಳ ಚರಿತ್ರೆ ಹೊಂದಿದ ಮತ್ತು ಇತ್ತೀಚೆಗೆ ನಾಜಿಸಂನೊಂದಿಗೆ ಹೊಂದಿದ ಸಂಬಂಧದ ಕಾರಣದಿಂದಾಗಿ ಅಸಹ್ಯಕರವೂ ಹೌದು.

ಇಸ್ರೇಲಿ ಸರ್ಕಾರವು ಗಾಝಾದ ಜನರ ಮೇಲೆ ಪ್ರಸ್ತುತ ನಡೆಸುತ್ತಿರುವ ದಾಳಿಯ ನಡುವೆಯೂ, ಅನೇಕ ಮೆಟ್ರೋಪಾಲಿಟನ್ ನಗರಗಳಲ್ಲಿ ಪ್ಯಾಲೆಸ್ಟೈನ್ ಪರ ಪ್ರತಿಭಟನಾ ಪ್ರದರ್ಶನಗಳನ್ನು ನಿಷೇದಿಸುತ್ತಿರುವುದು ಈಗಿನ ಪರಿಸ್ಥಿತಿಯು ಸಾಮ್ರಾಜ್ಯಶಾಹಿಗೆ ಮತ್ತು ಎಲ್ಲೆಡೆಯ ಬಲಪಂಥೀಯರಿಗೆ ಹೆಚ್ಚು ಅನುಕೂಲಕರವಾಗಿದೆ ಎಂಬುದನ್ನು ತೋರಿಸುತ್ತದೆಯಾದರೂ, ಆದರೂ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಸರ್ಕಾರಗಳ ಅಸಮ್ಮತಿಯ ಹೊರತಾಗಿಯೂ ಅವು ಸಂಭವಿಸುತ್ತಿವೆ. ವಾಸ್ತವವಾಗಿ, ಲಂಡನಿನಲ್ಲಿ ನಡೆದ ಇಂತಹ ಪ್ರತಿಭಟನಾ ಪ್ರದರ್ಶನಗಳು ಲಂಡನ್ ಪೊಲೀಸ್ ಪ್ಯಾಲೆಸ್ಟೈನ್–ಪರ ಪಕ್ಷಪಾತಿ ಎಂದು ಆರೋಪಿಸುವಂತೆ ಸ್ವತಃ ಬ್ರಿಟಿಷ್ ಗೃಹ ಕಾರ್ಯದರ್ಶಿ ಸುಯೆಲ್ಲಾ ಬ್ರೇವರ್‌ಮನ್ ರನ್ನು ಪ್ರೇರೇಪಿಸಿದೆ.

ವಲಸಿಗ ಇಸ್ರೇಲಿ ವಸಾಹತುಶಾಹಿಗೆ ಸಾಮ್ರಾಜ್ಯಶಾಹಿ ದೇಶಗಳು ನೀಡುತ್ತಿರುವ ಬೆಂಬಲದ ಹಿಂದಿರುವ ಎರಡನೆಯ ಕಾರಣವೆಂದರೆ, ಈ ದೇಶಗಳು ಹಿಂದೆ ವಲಸಿಗ ವಸಾಹತುಶಾಹಿಯ ಮೂಲಕ ಅಸ್ತಿತ್ವಕ್ಕೆ ಬಂದವುಗಳು ಅಥವಾ ಅದರಿಂದ ಪ್ರಯೋಜನ ಪಡೆದವುಗಳು. ಅಮೆರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ದೇಶಗಳು ವಲಸಿಗ ವಸಾಹತುಶಾಹಿಯ ಉತ್ಪನ್ನಗಳೇ. ಜನಾಂಗೀಯ ಶುದ್ಧೀಕರಣವನ್ನು ಸ್ವತಃ ತಮ್ಮ ಉದಯದ ಸಾಧನವಾಗಿ ಬಳಸಿಕೊಂಡ ನಂತರ, ಅವರು ಈ ಜನಾಂಗೀಯ ಶುದ್ಧೀಕರಣದ ಆಚರಣೆಯನ್ನು ಈಗ ವಿರೋಧಿಸುವುದು ಸಾಧ್ಯವಿಲ್ಲ, ಅದರಲ್ಲೂ ವಿಶೇಷವಾಗಿ ಇಸ್ರೇಲ್ ನಂತಹ ತಮ್ಮ ಪ್ರೀತಿ ಪಾತ್ರ ದೇಶವು ಅದನ್ನು ಆಚರಿಸುತ್ತಿರುವಾಗ.

ಸಾಮ್ರಾಜ್ಯಶಾಹಿಯ ಸ್ಥಳೀಯ ಮಾಂಡಲಿಕ

ಈ ದೇಶಗಳು ಇಸ್ರೇಲಿಗೆ ನೀಡುತ್ತಿರುವ ಸ್ಥಿರ ಬೆಂಬಲದ ಹಿಂದಿರುವ ಪ್ರಬಲ ಕಾರಣವೆಂದರೆ, ಇಸ್ರೇಲ್ ಪಶ್ಚಿಮ ಏಷ್ಯಾದಲ್ಲಿ ಸಾಮ್ರಾಜ್ಯಶಾಹಿಯ ಸ್ಥಳೀಯ ಮಾಂಡಲಿಕನಾಗಿ ಮತ್ತು ಅದರ ಪರಿಣಾಮಕಾರಿ ಮಿತ್ರನಾಗಿ ಆವಿರ್ಭವಿಸಿದೆ. ಸಾಮ್ರಾಜ್ಯಶಾಹಿಯು ಈ ಪ್ರದೇಶದಲ್ಲಿ ತನ್ನ ಪ್ರಾಬಲ್ಯವನ್ನು ಕಾಪಾಡಿಕೊಳ್ಳಲು ಹಲವು ಹತ್ತು ಪ್ರಯತ್ನಗಳನ್ನು ಸತತವಾಗಿ ಮಾಡಿದೆ. ಈ ಪ್ರದೇಶದ ಪ್ರಗತಿಪರ–ಜಾತ್ಯತೀತ, ಎಡ ಮತ್ತು ಕಮ್ಯುನಿಸ್ಟ್ ಚಳುವಳಿಗಳನ್ನು ದುರ್ಬಲಗೊಳಿಸುವುದಕ್ಕಾಗಿ (ಕೆಲವು ವರ್ಷಗಳ ಹಿಂದೆ ಅರಬ್ ಜಗತ್ತಿನಲ್ಲಿ ಕಮ್ಯುನಿಸಂ ಒಂದು ಬಹಳ ಬಲವಾದ ನೆಲೆಯನ್ನು ಹೊಂದಿತ್ತು), ಇಸ್ಲಾಮಿಕ್ ಮೂಲಭೂತವಾದಿ ಗುಂಪುಗಳನ್ನು (ಹಮಾಸ್ ಕೂಡ ಸೇರಿದಂತೆ)ಬೆಂಬಲಿಸುವುದರಿಂದ ಹಿಡಿದು, ಮಿಲಿಟರಿ ಕಾರ್ಯಾಚರಣೆ ನಡೆಸುವವರೆಗೆ ಹಲವಾರು ಹತ್ಯಾರಗಳನ್ನು ಬಳಕೆ ಮಾಡಿದೆ. ಸಾಮ್ರಾಜ್ಯಶಾಹಿಯ ಬತ್ತಳಿಕೆಯಲ್ಲಿರುವ ಅತ್ಯಂತ ಶಕ್ತಿಶಾಲಿ ಆಯುಧವೆಂದರೆ, ಇಸ್ರೇಲಿ ವಲಸಿಗ ವಸಾಹತುಶಾಹಿಗೆ ಸ್ಥಿರ ಬೆಂಬಲ ನೀಡುತ್ತಾ ಬಂದಿರುವ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಾ ಬಂದಿರುವ ಕ್ರಮವೇ. ಗಾಝಾದಲ್ಲಿ ನಡೆಯುತ್ತಿರುವ ನರಮೇಧದ ನಡುವಿನಲ್ಲೂ, ತಕ್ಷಣವೇ ಕದನ ವಿರಾಮ ಕೋರಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ನಿರ್ಣಯದ ವಿರುದ್ಧ ಅಮೆರಿಕಾ ಮತ ಚಲಾಯಿಸಿದ್ದು ಆಶ್ಚರ್ಯವೇನಲ್ಲ. "ಮಾನವೀಯ" ಕಾರಣಗಳಿಗಾಗಿ ತನ್ನ ದಾಳಿಯಲ್ಲಿ ಸಾಂದರ್ಭಿಕವಾಗಿ"ವಿರಾಮ"ವಿರುವಂತೆ ಇಸ್ರೇಲ್ ನೋಡಿಕೊಳ್ಳಬೇಕು ಎಂದು ಅಮೆರಿಕಾ ಹೇಳುವುದು ಒಂದು ವಿಪರ್ಯಾಸವೇ ಸರಿ. ಇಸ್ರೇಲ್ ತನಗೆ ತೃಪ್ತಿಯಾಗುವಷ್ಟು ಪ್ಯಾಲೆಸ್ತೀನಿಯರನ್ನು ಕೊಲ್ಲಲಿ ಮತ್ತು ಗಾಯಗೊಳಿಸಲಿ, ಆದರೆ, ಸತ್ತವರನ್ನು ಮತ್ತು ಗಾಯಗೊಂಡವರನ್ನು ಆಗಾಗ ಸಾಗಿಸಬೇಕೆಂದು ಮಾನವ ಧರ್ಮ ಬಯಸುತ್ತದೆ ಎಂದು ಹೇಳಿದಂತಿದೆ ಅದರ ಮಾನವತಾವಾದ!

ವಲಸಿಗ ಇಸ್ರೇಲಿ ವಸಾಹತುಶಾಹಿಯನ್ನು ಮುಂದುವರೆಯಲು ಬಿಟ್ಟರೆ, ಅದು ಕಂಡುಕೊಳ್ಳುವ ಅನಿವಾರ್ಯ ತಾರ್ಕಿಕ ಪರಿಹಾರವೆಂದರೆ, ಪ್ಯಾಲೆಸ್ತೀನಿ ಜನರನ್ನು ಜನಾಂಗೀಯ ಶುದ್ಧೀಕರಣದ ನರಮೇಧಕ್ಕೆ ಗುರಿಪಡಿಸುವುದು. ಯೂರೋಪಿನಿಂದ ಬಂದ ವಲಸಿಗರು ಸ್ಥಳೀಯ ಅಮೆರಿಂಡಿಯನ್ನರನ್ನು ಕೊಳೆಹಾಕುತ್ತಿದ್ದ 'ಮೀಸಲು' ಪ್ರದೇಶಗಳನ್ನು ನೆನಪಿಸುವ ರೀತಿಯ ಗಾಝಾದ "ತೆರೆದ ಜೈಲು"ಗಳಲ್ಲಿ ದನಗಳನ್ನು ರೊಪ್ಪದಲ್ಲಿ ಕೂಡಿಹಾಕುವಂತೆ ಪ್ಯಾಲೆಸ್ತೀನಿಯರನ್ನು ಕೂಡಿಹಾಕುವ ಕ್ರಮವು ತನ್ನ "ಭದ್ರತೆ"ಯನ್ನು ಖಚಿತಪಡಿಸಿಕೊಳ್ಳಲು ಸಾಕಾಗುವುದಿಲ್ಲ ಎಂದು ಇಸ್ರೇಲ್ ಭಾವಿಸಿದೆ. ಈ ಸನ್ನಿವೇಶದಲ್ಲಿ ಇಸ್ರೇಲಿ ನಿರ್ಮಾಣ ಸಂಸ್ಥೆಗಳು ಪ್ಯಾಲೆಸ್ಟೀನಿ ಕೆಲಸಗಾರರ ಬದಲಿಗೆ ಭಾರತೀಯ ಕಾರ್ಮಿಕರನ್ನು ನೇಮಿಸಿಕೊಳ್ಳಲು ಬಯಸುತ್ತವೆ ಎಂಬುದು ಮೂರನೇ ಜಗತ್ತಿನಲ್ಲೊಂದು ಬೃಹತ್ತಾದ ಕಾರ್ಮಿಕ ಮೀಸಲು ಪಡೆ ಇರುವುದರಿಂದಾಗಿ, ಪ್ಯಾಲೆಸ್ತೀನಿಯರನ್ನು ಅನವಶ್ಯಕವೆಂದು ಪರಿಗಣಿಸಿದ ರೀತಿಯಲ್ಲೇ, ಯಾವುದೇ ಒಂದು ನಿರ್ದಿಷ್ಟ ಗುಂಪಿನ ಜನರು ತಮಗೆ ಅನವಶ್ಯಕ ಎಂದು ವಲಸಿಗ ಇಸ್ರೇಲಿ ವಸಾಹತುಶಾಹಿಯು ಭಾವಿಸುತ್ತದೆ ಎಂಬುದನ್ನು ಎತ್ತಿ ತೋರುತ್ತದೆ.

ಈ ವಲಸಿಗ ವಸಾಹತುಶಾಹಿಯನ್ನು ಕೇವಲ ಪ್ಯಾಲೆಸ್ತೀನಿ ಜನರ ಹಿತದೃಷ್ಟಿಯಿಂದ ಮಾತ್ರವಲ್ಲ, ಇಡೀ ವಿಶ್ವದ ಜನರ ಹಿತದೃಷ್ಟಿಯಿಂದ ತಡೆದು ನಿಲ್ಲಿಸಲೇಬೇಕು. ಏಕೆಂದರೆ, ಶತಮಾನಗಳ ಅವಧಿಯಲ್ಲಿ ಯೂರೋಪಿನಲ್ಲಿ ಯಹೂದಿಗಳು ಅನುಭವಿಸಿದ ಯಾತನೆಗಳ ಕಾರಣದ ಮೇಲೆ ತಾನು ಮಾತ್ರವೇ ಧರ್ಮಿಷ್ಠ ಎಂಬ ಮುಸುಕು ಹಾಕಿಕೊಂಡಿರುವ ಇಸ್ರೇಲ್, ಸಮಕಾಲೀನ ಸಾಮ್ರಾಜ್ಯಶಾಹಿಯ ಅತ್ಯಂತ ಆಕ್ರಮಣಕಾರಿ ಮತ್ತು ನಿರ್ದಯ ನಿರ್ಲಿಪ್ತತೆಯನ್ನು ಪ್ರತಿನಿಧಿಸುತ್ತದೆ. ವಿಶ್ವ ಸಾರ್ವಜನಿಕ ಅಭಿಪ್ರಾಯದ ಒತ್ತಡದಿಂದ ಮಾತ್ರ ಇಸ್ರೇಲನ್ನು ತಡೆದು ನಿಲ್ಲಿಸಬಹುದು. ಕೊಲಂಬಿಯಾ, ಬೊಲಿವಿಯಾ ಮತ್ತು ದಕ್ಷಿಣ ಆಫ್ರಿಕಾದಂತಹ ಅನೇಕ ದೇಶಗಳು ಇಸ್ರೇಲ್ ಜೊತೆಗಿನ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡಿವೆ. ಪ್ಯಾಲೆಸ್ತೀನಿಯರಿಗೆ ವಿಶ್ವಾದ್ಯಂತ ಅಪಾರ ಬೆಂಬಲವನ್ನು ವ್ಯಕ್ತಪಡಿಸಲಾಗುತ್ತಿದೆ. ಹಲವಾರು ಮೆಟ್ರೋಪಾಲಿಟನ್ ದೇಶಗಳಲ್ಲಿ ಸಾರ್ವಜನಿಕ ಪ್ರತಿಭಟನಾ ಪ್ರದರ್ಶನಗಳು ನಡೆಯುತ್ತಿವೆ. ಅವುಗಳಲ್ಲಿ ಭಾಗವಹಿಸುವವರ ಸಂಖ್ಯೆಯು ಇತ್ತೀಚಿನ ವರ್ಷಗಳಲ್ಲಿ ಅಭೂತಪೂರ್ವವಾಗಿದೆ. ಈ ಅನೇಕ ಪ್ರದರ್ಶನಗಳನ್ನು ಸ್ಥಳೀಯ ಯಹೂದಿ ಜನರು ಬೆಂಬಲಿಸಿದ್ದಾರೆ ಅಥವಾ ಆಯೋಜಿಸಿದ್ದಾರೆ. ಅವರು ಗಾಝಾದಲ್ಲಿ ನಡೆಯುತ್ತಿರುವ ನರಮೇಧಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ ಮತ್ತು ಈ ನರಮೇಧವನ್ನುವಿರೋಧಿಸುವವರನ್ನುಯಹೂದಿ–ದ್ವೇಷಿಗಳೆಂದು ಮಸಿಬಳಿಯುವ ನಡವಳಿಕೆಯನ್ನು ವಿರೋಧಿಸಿದ್ದಾರೆ. ಸಿಡಿದೇಳುತ್ತಿರುವ ಈ ವಿಶ್ವವ್ಯಾಪಿ ಪ್ರತಿರೋಧದ ಯಶಸ್ಸಿನ ಮೇಲೆ ಪ್ಯಾಲೆಸ್ತೀನಿ ಜನರ ಭವಿಷ್ಯ ಮಾತ್ರವಲ್ಲ, ವಿಶ್ವದ ಜನತೆಯ ಭವಿಷ್ಯವೂ ನಿರ್ಣಾಯಕವಾಗಿ ಅವಲಂಬಿತವಾಗಿದೆ. ●

➘ ಪಿಎಸ್‌ಒಇ ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಸ್ಪೇನ್ (ಪಿಸಿಇ) ನಾಯಕತ್ವವು ಈ ದಾಳಿಯನ್ನು ಖಂಡಿಸಿತು ಮತ್ತು ನಡೆಯುತ್ತಿರುವ ಬಲಪಂಥೀಯ ಪ್ರತಿಭಟನೆಗಳನ್ನು ದೇಶದಲ್ಲಿ ಪ್ರಜಾಪ್ರಭುತ್ವವನ್ನು ಹದಗೆಡಿಸುವ ಪ್ರಯತ್ನ ಎಂದು ಖಂಡಿಸಿತು.

ಜುಲೈ ಚುನಾವಣೆಯಲ್ಲಿ, ಆಲ್ಬರ್ಟೊ ನೀಜ್ ಫೀಜೂ ಅವರ ಸಂಪ್ರದಾಯವಾದಿ ಪೀಪಲ್ಸ್ ಪಾರ್ಟಿ (ಪಿಪಿ) 137 ಸ್ಥಾನಗಳು ಮತ್ತು 33.1% ಮತಗಳನ್ನು ಪಡೆದ ಏಕೈಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಪಿಪಿ ಸಾಧನೆ ಸರಳ ಬಹುಮತದ 176 ಸ್ಥಾನಗಳಿಗಿಂತ ಕಡಿಮೆಯಾಗಿತ್ತು. ಬಲಪಂಥೀಯ ವೋಕ್ಸ್ ಪಕ್ಷವೂ ಚುನಾವಣೆಯಲ್ಲಿ ಹಿನ್ನಡೆ ಎದುರಿಸಿದ್ದು, ಪಿಪಿ–ವೋಕ್ಸ್ ಬಲಪಂಥೀಯ ಸಮ್ಮಿಶ್ರ ಸರ್ಕಾರದ ಸಾಧ್ಯತೆಯನ್ನು ಇಲ್ಲವಾಗಿತ್ತು. ಏತನ್ಮಧ್ಯೆ, ಭವಿಷ್ಯವಾಣಿಗಳನ್ನು ಧಿಕ್ಕರಿಸಿ, ಪ್ರಸ್ತುತ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ನೇತೃತ್ವದ ಸ್ಪ್ಯಾನಿಷ್ ಸಮಾಜವಾದಿ ಕಾರ್ಮಿಕರ ಪಾರ್ಟಿ (ಪಿಎಸ್‌ಒಇ) ತನ್ನ ಬೆಂಬಲವನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು ಮತ್ತು 31.7% ಮತಗಳೊಂದಿಗೆ 121 ಸ್ಥಾನಗಳನ್ನು ಗಳಿಸಿತು.

ಹೊಸ ಮಂತ್ರಿಮಂಡಲದ ಘೋಷಣೆಯ ನಂತರ, ಕಮ್ಯುನಿಸ್ಟ್ ಪಾರ್ಟಿ ಆಫ್ ಸ್ಪೇನ್ (ಪಿಸಿಇ) ನಾಯಕ ಎನ್ರಿಕ್ ಸ್ಯಾಂಟಿಯಾಗೊ ಹೀಗೆ ಹೇಳಿದ್ದಾರೆ, "ಬಲಪಂಥೀಯರ ಅಸ್ಥಿರಗೊಳಿಸುವ ಪ್ರಯತ್ನಗಳು ವಿಫಲವಾಗಿವೆ, ನಾವು ಕನಿಷ್ಟ ವೇತನವನ್ನು ಹೆಚ್ಚಿಸುವ ಮೂಲಕ ಪ್ರಾರಂಭಿಸಿ ಸಾಮಾಜಿಕ ಕಾರ್ಯ ಬಹುಮತಕ್ಕಾಗಿ ಹೆಚ್ಚಿನ ಹಕ್ಕುಗಳು ಮತ್ತು ಹೆಚ್ಚಿನ ಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತಿದ್ದೇವೆ.. ಸುಮಾರ್ ನಲ್ಲಿ ಭಾಗಿಯಾಗಿರುವ ಹೆಚ್ಚಿನವರು ಮುಂದಿನ ಮಂತ್ರಿ ಮಂಡಳಿಯಲ್ಲಿರುವುದು ಒಳ್ಳೆಯದು. ಎಲ್ಲ ಎಡಪಂಥೀಯರು ಐಕ್ಯತೆಯಿಂದ ಒಟ್ಟಾಗಿ ಕೆಲಸ ಮಾಡುವುದು ಕಾರ್ಮಿಕ ವರ್ಗದ ಜೀವನವನ್ನು ಸುಧಾರಿಸುವ ರೂಪಾಂತರಗಳನ್ನು ಮುಂದುವರೆಸುವ ಖಾತರಿಯಾಗಿದೆ" ಎಂದು ಅವರು ಹೇಳಿದ್ದಾರೆ. ●

ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ

ಪುಟ 11 ರಿಂದ

ಯೋಜನೆಯ ಲಾಭ ಪಡೆಯಲಾಗುವುದಿಲ್ಲ, ನಿಮ್ಮ ತಂದೆ, ತಾತ ಈ ಕಸುಬನ್ನು ಅವಲಂಬನೆ ಮಾಡಿಕೊಂಡು ಬಂದಿರಬೇಕು. ಹಿಂದಿನ ನಿಮ್ಮ ತಾತ, ತಂದೆ, ಕುಟುಂಬದ ಕಸುಬಾದ ಕೃಷಿಯಿಂದ ಜೀವನ ನಡೆಸಲಾಗದೆ, ನೀವು ಬಟ್ಟೆ ಹೊಗೆಯುವ (ಡೋಬಿ) ವೃತ್ತಿಗೆ ಬಂದಿದ್ದರೆ, ನೀವು ಈ ಸೌಲಭ್ಯ ಪಡೆಯಲು ಅರ್ಹರಲ್ಲ! ಅಂದರೆ, ಕುಟುಂಬದ ಸಾಂಪ್ರದಾಯಕ ವೃತ್ತಿ ಮಾಡುತ್ತಿರುವವರಿಗೆ ಮಾತ್ರ 'ವಿಶ್ವಕರ್ಮ' ಯೋಜನೆ ರೂಪಿಸಲಾಗಿದೆ. ಅಸಂಘಟಿತ ಅಥವಾ ಅನೌಪಚಾರಿಕ ವಲಯದಲ್ಲಿ, ಸ್ವಯಂ ಉದ್ಯೋಗದ ಆಧಾರದ ಮೇಲೆ, PM ವಿಶ್ವಕರ್ಮ ಅಡಿಯಲ್ಲಿ ನೋಂದಣಿಗೆ ಅರ್ಹರಾಗಿರುತ್ತಾರೆ. ಇದೊಂದು ರೀತಿಯಲ್ಲಿ ಹಿಂದಿನ ಜಾತಿ ವ್ಯವಸ್ಥೆಯನ್ನು ಶಾಶ್ವತಗೊಳಿಸಲು ಈ ಯೋಜನೆಯನ್ನು ರೂಪಿಸಲಾಗಿದೆ. ತಳ ಸಮುದಾಯಗಳು ತಮ್ಮ ಸಾಂಪ್ರದಾಯಿಕ/ಅನುವಂಶಿಕ ವೃತ್ತಿಯನ್ನೇ ಮಾಡಿಕೊಂಡಿರುವಂತೆ ಮಾಡುವ ಮನುವಾದಿಗಳ ತಂತ್ರಗಾರಿಕೆ ಇದರಲ್ಲಿ ಅಡಗಿದೆ.

ಉಚಿತ ಕೊಡುಗೆಯಲ್ಲ, ಶೇ. 5ರ ಬಡ್ಡಿ ದರದಲ್ಲಿ ಸಾಲ

ವಿಶ್ವಕರ್ಮ ಯೋಜನೆಯಲ್ಲಿ ನೊಂದಣಿಯಾದವರಿಗೆ ಮೊದಲ ಬಾರಿಗೆ ಒಂದು ಲಕ್ಷ ಸಾಲದ ನೆರವು ಸಿಗುತ್ತದೆ. ಸಾಲ ಪಡೆದವರು ವರ್ಷಕ್ಕೆ ಶೇ. 5ರ ದರದಲ್ಲಿ ಬಡ್ಡಿ ಕೊಡಬೇಕು. ಕೇಂದ್ರ ಸರ್ಕಾರ ಶೇ. 8 ರಷ್ಟು ಬಡ್ಡಿಯನ್ನು ನೇರವಾಗಿ ಬ್ಯಾಂಕುಗಳಿಗೆ ಪಾವತಿಸುತ್ತದೆ. ಬಡ್ಡಿ ಸಮೇತ, ಪ್ರತಿ ತಿಂಗಳು ಸಾಲ ಮರುಪಾವತಿ ಮಾಡಬೇಕು. 18 ತಿಂಗಳಲ್ಲಿ ಸಾಲ ತೀರಿಸಬೇಕು. ಎರಡನೇ ಸಾಲದ ಭಾಗವು ಒಂದನೇ ಕಂತನ್ನು ಪಡೆದ ಮತ್ತು ಪ್ರಮಾಣಿತ ಸಾಲದ ಖಾತೆಯನ್ನು ನಿರ್ವಹಿಸಿದ ಮತ್ತು ತಮ್ಮ ವ್ಯವಹಾರದಲ್ಲಿ ಡಿಜಿಟಲ್ ವಹಿವಾಟುಗಳನ್ನು ಅಳವಡಿಸಿಕೊಂಡ ಅಥವಾ ಸುಧಾರಿತ ತರಬೇತಿ ಪಡೆದ ಫಲಾನುಭವಿಗಳಿಗೆ ಲಭ್ಯವಿರುತ್ತದೆ. ಎರಡನೇ ಕಂತನ್ನು ಪಡೆಯುವ ಮೊದಲು ಅವರು ಮೊದಲ ಸಾಲದ ಭಾಗವನ್ನು ಸಂಪೂರ್ಣವಾಗಿ ಮರುಪಾವತಿಸಿರಬೇಕು. ಈ ಎಲ್ಲಾ ಷರತ್ತುಗಳನ್ನು ಪೂರೈಸಿದರಷ್ಟೇ 2ನೇ ಅವಧಿಗೆ 2 ಲಕ್ಷ ಸಾಲ ಪಡೆಯಲು ಅರ್ಹರು. ಈ ಅವಧಿಯಲ್ಲಿ ಸಾಲ ತೀರಿಸಲಾಗದಿದ್ದರೆ ಮತ್ತೆ ನಿಮಗೆ ಸಾಲ ಸಿಗುವುದಿಲ್ಲ. ಎರಡನೆಯ ಅವಧಿಯ ಸಾಲವನ್ನು 30 ತಿಂಗಳ ಒಳಗಾಗಿ ಮರುಪಾವತಿ ಮಾಡಬೇಕು.

ಯೋಜನೆಗೆ ಅರ್ಹರಲ್ಲದವರು

ಸ್ವಯಂ ಉದ್ಯೋಗ/ವ್ಯಾಪಾರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಇದೇ ರೀತಿಯ ಸಾಲ ಆಧಾರಿತ ಯೋಜನೆಗಳ ಅಡಿಯಲ್ಲಿ ಅಂದರೆ, PMEGP, PM ಸ್ವನಿಧಿ, ಮುದ್ರಾ ಯೋಜನೆಗಳಲ್ಲಿ ಕಳೆದ 5 ವರ್ಷಗಳಲ್ಲಿ ಸಾಲ ಪಡೆದಿರಬಾರದು. ಈ ಇತರೆ ಯೋಜನೆಗಳಲ್ಲಿ ಸಾಲ ಪಡೆದಿದವರು, ವಿಶ್ವಕರ್ಮ ಯೋಜನೆಯಲ್ಲಿ ಸಾಲ ಪಡೆಯಲು ಅರ್ಹರಾಗುವುದಿಲ್ಲ. ಆದಾಗ್ಯೂ, ತಮ್ಮ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ ಮುದ್ರಾ ಮತ್ತು ಸ್ವನಿಧಿಯ ಫಲಾನುಭವಿಗಳು ವಿಶ್ವಕರ್ಮ ಯೋಜನೆಯ ಅಡಿಯಲ್ಲಿ ಸಾಲ ಪಡೆಯಲು ಅರ್ಹರಾಗಿರುತ್ತಾರೆ.

ಕುಟುಂಬದಲ್ಲಿ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಸದಸ್ಯರು (ಪತಿ, ಪತ್ನಿ ಮತ್ತು ಅವಿವಾಹಿತ ಮಕ್ಕಳು) ಈ ವೃತ್ತಿಗಳನ್ನೇ ಮಾಡಿಕೊಂಡಿದ್ದರೂ ಸಹ, ಈ ಯೋಜನೆಯಡಿ ಪ್ರಯೋಜನಗಳನ್ನು ಕುಟುಂಬದ ಒಬ್ಬ ಸದಸ್ಯರಿಗೆ ಸೀಮಿತಗೊಳಿಸಲಾಗಿದೆ. ಕುಟುಂಬದ ಯಾರಾದರೂ ಸರ್ಕಾರಿ ಸೇವೆಯಲ್ಲಿದ್ದರೆ, ಅವನ/ಅವಳ ಕುಟುಂಬದ ಸದಸ್ಯರು ಯೋಜನೆಯಡಿ ಅರ್ಹರಾಗಿರುವುದಿಲ್ಲ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE November 27-December 3, 2023 Price: Rs. 10/- Date of Publication: 24 November 2023 RNI No. KARKAN /2006/17926 Posted on 25-11-2023
Posted at BG PSO, BG - 560026 **Posted at Periodical Rate - Rs. 2**

ಏಕದಿನ ಕ್ರಿಕೆಟ್ ವಿಶ್ವಕಪ್ ಅತ್ಯಂತ ಕುತೂಹಲಕಾರಿಯಾಗಿತ್ತು. ಗೆಲ್ಲುವ ನಿರೀಕ್ಷೆ ಇದ್ದ ಭಾರತ ಅಂತಿಮ ಆಟದಲ್ಲಿ ಸೋಲು ಕಂಡ ಬಗ್ಗೆ ಆಳವಾದ ಒಂದು ಸಮಗ್ರ ಅವಲೋಕನ ಅಗತ್ಯವಿದೆ, ಕ್ರೀಡೆಯನ್ನು ಕ್ರೀಡೆಯನ್ನಾಗಿಯೇ ನೋಡಬೇಕು ಎನ್ನುವ ಮೂಲ ಪಾಠವನ್ನು ಹಲವರು ಮರೆತಿದ್ದು ಯಾಕೆ? ನಮ್ಮಲ್ಲಿ ಕ್ರೀಡಾ ಸ್ಫೂರ್ತಿ ಕಡಿಮೆಯಾಗುತ್ತಿದೆಯೋ ಅಥವಾ ಕ್ರೀಡೆಯಲ್ಲಿ ರಾಜಕೀಯವನ್ನು ಬೆರೆಸುತ್ತಿರುವುದರ ಪರಿಣಾಮವೋ?

ಏಕದಿನ ಕ್ರಿಕೆಟ್ ವಿಶ್ವ ಕಪ್: ನಮಗೆ ಬೇಕಾಗಿರುವುದು ಕ್ರೀಡಾ ಮನೋಭಾವ

ಮೆಗಾ ಕ್ರಿಕೆಟ್ ಈವೆಂಟ್ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ಕಪ್ ಗೆಲ್ಲುವ ಮೂಲಕ ಚಾಂಪಿಯನ್ ಆಯಿತು. ಏಕದಿನ ಕ್ರಿಕೆಟ್‌ನಲ್ಲಿ ಆಸೀಸ್ ವಿಶ್ವ ಪ್ರಶಸ್ತಿ ಜಯಿಸಿದ್ದು ಇದು ಆರನೇ ಬಾರಿ. ಇದು ಆಸ್ಟ್ರೇಲಿಯಾಕ್ಕೆ ಐತಿಹಾಸಿಕ ಗೆಲುವು. ಟೂರ್ನಿಯ ಆರಂಭದಿಂದಲೂ ಅತ್ಯುತ್ತಮ ಪ್ರದರ್ಶನ ನೀಡಿ ಸರಣಿ ಗೆದ್ದುಕೊಂಡಿದ್ದ ಭಾರತ ಅಂತಿಮ ಟೆಸ್ಟ್ ನಲ್ಲಿ ವಿಫಲವಾದ ಕಾರಣ ಮೆಗಾ ಕಪ್ ಕನಸು ಭಗ್ನಗೊಂಡಿದೆ. ಭಾನುವಾರ ಸಂಜೆ ಅಹಮದಾಬಾದ್‌ನ ನರೇಂದ್ರ ಮೋದಿ ಇಂಟರ್‌ನ್ಯಾಶನಲ್ ಸ್ಟೇಡಿಯಂನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾ ಸೋಲು ಭಾರತೀಯ ಆಟಗಾರರು ಮತ್ತು ಲಕ್ಷಾಂತರ ಅಭಿಮಾನಿಗಳನ್ನು ತೀವ್ರ ನಿರಾಸೆಗೊಳಿಸಿದೆ. ಆಸ್ಟ್ರೇಲಿಯಾ ಮತ್ತು ಭಾರತ ನಡುವಿನ ಫೈನಲ್‌ನಲ್ಲಿ ಕಾಂಗರೂಗಳು ಆರು ವಿಕೆಟ್‌ಗಳಿಂದ ಗೆದ್ದಿದ್ದಾರೆ. ಟೀಂ ಇಂಡಿಯಾ ಹೀನಾಯ ಸೋಲು ಕಂಡಿತ್ತು. ಆತಿಥೇಯ ಭಾರತ ತಂಡ ತಮ್ಮದೇ ನೆಲದಲ್ಲಿ ಫೈನಲ್‌ನಲ್ಲಿ ಸೋತಿರುವುದನ್ನು ಕ್ರಿಕೆಟ್ ಪ್ರೇಮಿಗಳು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಟೀಂ ಇಂಡಿಯಾ ಗ್ರೂಪ್ ಪಂದ್ಯಗಳಲ್ಲಿ ಸೋಲದೇ ಸತತ ಹತ್ತು ಜಯ ಸಾಧಿಸಿದೆ. ಪ್ರಶಸ್ತಿ ಗೆದ್ದಿದ್ದ ಆಸ್ಟ್ರೇಲಿಯಾ ಲೀಗ್ ಹಂತದಲ್ಲಿ ಎರಡು ಪಂದ್ಯಗಳಲ್ಲಿ ಸೋತಿತ್ತು. ಆರು ವಿಕೆಟ್‌ಗಳಿಂದ ಭಾರತ ಎದುರು ಸೋತಿತು. ದಕ್ಷಿಣ ಆಫ್ರಿಕಾ ಎದುರು 134 ರನ್‌ಗಳ ಸೋಲು ಕಂಡಿತು. ಅದು ಸೆಮಿಫೈನಲ್‌ಗೆ ಪ್ರವೇಶಿಸುತ್ತದೆಯೇ ಎನಿಸುತ್ತಿತ್ತು. ಅದರ ನಂತರ, ಆಸ್ಟ್ರೇಲಿಯಾ ತಂಡ ಎಲ್ಲಾ ಪಂದ್ಯಗಳನ್ನು ಗೆದ್ದು ಫೈನಲ್ ತಲುಪಿದರು, ಅಲ್ಲಿಯವರೆಗೆ ಅಜೇಯವಾಗಿದ್ದ ಭಾರತವನ್ನು ಚಾಕಚಕ್ಯತೆಯಿಂದ ಸೋಲಿಸಿದರು. ಕ್ರಿಕೆಟ್ ಜಗತ್ತಿನಲ್ಲಿ ಇದೊಂದು ಇತಿಹಾಸ.

ಭಾರತದ ಸತತ ಮೂರನೇ ಕಪ್‌ನ ಆಸೆ ಕೊನೆಯ ಕ್ಷಣದಲ್ಲಿ ಆವಿಯಾಗಲು ಸ್ವಯಂಕೃತ ಅಪರಾಧವೇ ಕಾರಣವಾಗಿತ್ತು. 2003ರಲ್ಲೂ ಇದೇ ರೀತಿ ಆಯಿತು. ಅಂದೂ ಸಹ ಭಾರತವು ಆಸ್ಟ್ರೇಲಿಯಾವನ್ನು ಮಾತ್ರ ಎದುರಿಸಿತು, ಮತ್ತು ಆಸ್ಟ್ರೇಲಿಯಾ ಕಪ್ ಎತ್ತಿಹಿಡಿದಿತು. ಇಲ್ಲಿಯವರೆಗೆ, 1984 ರಲ್ಲಿ ಕಪಿಲ್ ದೇವ್ ನಾಯಕತ್ವದಲ್ಲಿ ಮತ್ತು 2011 ರಲ್ಲಿ ಮಹೇಂದ್ರ ಸಿಂಗ್ ಧೋನಿ ನಾಯಕತ್ವದಲ್ಲಿ ನಮ್ಮ ದೇಶಕ್ಕೆ ವಿಶ್ವಕಪ್ ನಲ್ಲಿ ವಿಜಯ ಸಾಕಾರಗೊಂಡಿದೆ. ಭಾರತ ತಂಡ ಮತ್ತೊಮ್ಮೆ ಅಂತಹ ಯಶಸ್ಸು ಸಾಧಿಸಬೇಕಾದರೆ ಅದಕ್ಕೆ ತಕ್ಕಂತೆ ತಯಾರಿ ಮಾಡಿಕೊಳ್ಳಬೇಕು. ಭಾನುವಾರದ ಫೈನಲ್ ಪಂದ್ಯವನ್ನು ನೋಡಿದರೆ ನಮ್ಮ ತಂಡದ ಲೋಪದೋಷಗಳು, ದೌರ್ಬಲ್ಯಗಳು ಗೋಚರಿಸುತ್ತವೆ. ತಂಡದಲ್ಲಿ ಒಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ವೇಗಿ ಆಲ್ ರೌಂಡರ್ ಗಳು ಇಲ್ಲ. ಯಾವುದೇ ಸ್ಪಿನ್ ಆಟಗಾರ ಇಲ್ಲ. ಫೀಲ್ಡಿಂಗ್ ಸ್ವಲ್ಪ ಮಟ್ಟಿಗೆ ಚೆನ್ನಾಗಿದ್ದಂತೆ ಕಂಡರೂ ಬ್ಯಾಟಿಂಗ್ ಗೆ ಬಂದಾಗ ಎಡವಿದರು. ಇಂತಹ ತಪ್ಪುಗಳೇ ಟೀಂ ಇಂಡಿಯಾ ಕಪ್ ಸೋಲಲು ಕಾರಣ ಎಂದು ಕ್ರೀಡಾ ವಿಶ್ಲೇಷಕರು ಬಲವಾಗಿ ಒತ್ತಿ ಹೇಳುತ್ತಾರೆ. ಆರಂಭಿಕ ವೈಫಲ್ಯಗಳ ನಂತರ ಗೊಂದಲಕ್ಕೆ ಒಳಗಾದ ಆಸ್ಟ್ರೇಲಿಯಾ, ನಂತರ ಭಾರತ ತಂಡದ ದೌರ್ಬಲ್ಯಗಳನ್ನು ಸಮರ್ಥವಾಗಿ ಬಳಸಿಕೊಂಡಿತು. ಅಭೂತಪೂರ್ವ ಪ್ರತಿಭೆಗಳು ಕಪ್ ಗೆದ್ದರು.

ಮತಾಂಧತೆ ಮತ್ತು ಸಂಕುಚಿತ ರಾಷ್ಟ್ರೀಯತೆ

ಕೇಂದ್ರದಲ್ಲಿ ಬಿಜೆಪಿ ಮತ್ತು ನರೇಂದ್ರ ಮೋದಿಯವರ ಆಗಮನದಿಂದ, ಕ್ರೀಡೆಗಳಲ್ಲಿ ಕ್ರೀಡಾ ಮನೋಭಾವದ ಬದಲು ಮತಾಂಧತೆ ಮತ್ತು ಸಂಕುಚಿತ ರಾಷ್ಟ್ರೀಯತೆ ಹರಿಯುತ್ತಿದೆ.



ನೆಲದ ಮೇಲಿನ ಗೆಲುವನ್ನು 'ರಾಷ್ಟ್ರೀಯತೆ'ಯ ಗೆಲುವು ಎಂದು ವ್ಯಾಖ್ಯಾನಿಸುವ ಹಂತಕ್ಕೆ ಬಂದು ನಿಂತಿದೆ. ವಿಶ್ವಕಪ್ ಫೋಬಿಯಾ ಆಗಿ ಪರಿವರ್ತನೆಗೊಂಡಿದೆ. ಕೆಲವು ಹಿಂದುತ್ವ ಶಕ್ತಿಗಳು ತಮ್ಮ ತಂಡವನ್ನು ಗೆಲ್ಲಲು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ದ್ವೇಷವನ್ನು ಹರಡುವ ಉನ್ಮಾದದ ಲಾಭವನ್ನು ಪಡೆದಿವೆ.

ಭಾರತ ತಂಡದ ಗೆಲುವಿಗಾಗಿ ಹಿಂದುತ್ವವಾದಿಗಳು ದೇಶದಾದ್ಯಂತ ದೇವರುಗಳ ಪೂಜೆ, ಹೋಮ–ಹವನ ಮಾಡಿದರು. ಇದನ್ನು ಮಾಧ್ಯಮಗಳು ಪ್ರಸಾರ ಮಾಡಿದವು. ಕ್ರೀಡೆ ಎಂಬುದು ಆಟಗಾರರ ಸಾಮರ್ಥ್ಯ ಮತ್ತು ಅವರ ಪೂರ್ವ ಸಿದ್ಧತೆ ಮತ್ತು ತರಬೇತಿ, ಕ್ರೀಡೆಗಳಿಗೆ ಸರ್ಕಾರದ ಪ್ರೋತ್ಸಾಹ ಇವುಗಳಿಗೆ ಸಂಬಂಧಿಸಿದ್ದಾಗಿದೆಯೇ ವಿನಃ, ಪೂಜೆ, ಹೋಮ–ಹವನಗಳಿಂದ ಗೆಲುವು ಸಾಧಿಸಲಾಗದು. ಆದರೂ ಹಿಂದುತ್ವವಾದಿಗಳು ಕ್ರೀಡೆಯನ್ನು ಬಳಸಿಕೊಂಡು ಮತಾಂಧತೆಯನ್ನು ಬಿತ್ತುವ ಕೆಲಸ ಮಾಡಿದರು. ಕ್ರಿಕೆಟ್‌ಗೆ ಧರ್ಮದ ಬಣ್ಣ ಹಚ್ಚುವ ಪ್ರಯತ್ನ ಮಾಡಿದರು.

ದ್ವೇಷಪೂರಿತ ಭಾಷಣಗಳು ಮತ್ತು ಹೇಳಿಕೆಗಳು ಕ್ರೀಡಾ ಪಟುಗಳನ್ನು ಅವಮಾನಿಸಲು ಕಾರಣವಾಗಿವೆ. ಈ ಪರಿಸ್ಥಿತಿಗಳು ಟೀಂ ಇಂಡಿಯಾವನ್ನು ಫೈನಲ್‌ನಲ್ಲಿ ತೀವ್ರ ಒತ್ತಡಕ್ಕೆ ಒಳಪಡಿಸಿದವು. ಭಾವೋದ್ವೇಗಕ್ಕೆ ಕಾರಣವಾಯಿತು. ದೇಶದಾದ್ಯಂತ ರಾಜಕೀಯ ಪಕ್ಷಗಳು ತಮ್ಮ ಸ್ವಂತ ಖರ್ಚಿನಲ್ಲಿ ಫೈನಲ್ ಪಂದ್ಯವನ್ನು ಬೃಹತ್ ಪರದೆಗಳಲ್ಲಿ ಪ್ರದರ್ಶಿಸಲು ಒತ್ತಾಯಿಸಿದವು. ಇಂತಹ ಪ್ರದರ್ಶನಗಳಲ್ಲಿ ಸಾವಿರಾರು ಜನ ಸೇರಿದ್ದರು. ಕ್ರಿಕೆಟ್‌ಗೆ ಧರ್ಮದ ಬಣ್ಣ ಹಚ್ಚುತ್ತಿರುವುದು ಆತಂಕಕಾರಿ. ವಿರಾಟ್ ಕೊಹ್ಲಿ ಮತ್ತು ಮೊಹಮ್ಮದ್ ಶಮಿ ಅವರ ಅದ್ಭುತ ಪ್ರದರ್ಶನವು, ಕ್ರೀಡಾ ಮನೋಭಾವ ಮತ್ತು ಪ್ರತಿಭೆಯನ್ನು ಹೊರತುಪಡಿಸಿ ಕ್ರೀಡೆಯಲ್ಲಿ ಯಾವುದೇ ಮತ ಧರ್ಮವಿಲ್ಲ ಎಂಬುದನ್ನು ತೋರಿಸಿದೆ. ಕೊಹ್ಲಿ ಅತೀ ಹೆಚ್ಚು ಶತಕ ಬಾರಿಸಿದ ದಾಖಲೆ ಬರೆದಿದ್ದಾರೆ. ಕ್ರಿಕೆಟ್‌ನಲ್ಲಿ ರಾಜಕೀಯ ಹಸ್ತಕ್ಷೇಪ ಮತ್ತು ಬೆಟ್ಟಿಂಗ್ ನಿಲ್ಲಬೇಕು. ಯಾವುದೇ ಕ್ರೀಡೆಯಲ್ಲಿ ಒಬ್ಬರು ಗೆಲ್ಲುತ್ತಾರೆ, ಮತ್ತೊಬ್ಬರು ಸೋಲುತ್ತಾರೆ. ಅಷ್ಟು ಮಾತ್ರದಿಂದ ಸವಾಲೆಸೆದ ಆಟಗಾರರು ಕಡಿಮೆಯೇನಲ್ಲ.

ಇದು ಕೊನೆಯ ವಿಶ್ವಕಪ್ ಟೂರ್ನಿಯೂ ಅಲ್ಲ. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ವಿಶ್ವಕಪ್ 2027ರಲ್ಲಿ ಮತ್ತೊಮ್ಮೆ ನಡೆಯಲಿದೆ. ಟೀಂ ಇಂಡಿಯಾ ತಮ್ಮ ತಪ್ಪುಗಳನ್ನು ಮೆಟ್ಟಿ ನಿಲ್ಲಬೇಕು ಮತ್ತು ಎಲ್ಲಾ ಶಕ್ತಿ ಬಳಸಿ ತಯಾರಿ ನಡೆಸಬೇಕು. ಕಪ್ ಗೆದ್ದ ಆಸ್ಟ್ರೇಲಿಯಾ ತಂಡಕ್ಕೆ ಅಭಿನಂದನೆಗಳು. ಕೊನೆಯವರೆಗೂ ಉತ್ತಮವಾಗಿ ಆಟವಾಡಿ ತಾವೇನು ಕಮ್ಮಿ ಇಲ್ಲ ಎನ್ನುವುದನ್ನು ಸಾಬೀತುಪಡಿಸಿದ ಟೀಂ ಇಂಡಿಯಾಕ್ಕೆ ದೇಶದ ಸಮಸ್ತ ಜನತೆ ಅಭಿನಂದನೆ ಸಲ್ಲಿಸಿದ್ದಾರೆ.

ಆಟವಲ್ಲ... ವ್ಯಾಪಾರ!

ಕ್ರಿಕೆಟ್ ಇಂದು ಒಂದು ಕ್ರೀಡೆಯಾಗಿ ಉಳಿದಿಲ್ಲ. ಇದನ್ನು ರಾಜಕೀಯ ಮತ್ತು ವ್ಯಾಪಾರದ ಆಟವನ್ನಾಗಿ ಬಳಸಿಕೊಳ್ಳಲಾಗಿದೆ. ಇದನ್ನು ಅನೇಕ ದೊಡ್ಡ ಸಂಸ್ಥೆಗಳು ತಮ್ಮ ವ್ಯಾಪಾರವನ್ನು ಹೆಚ್ಚಿಸಲು ಕ್ರಿಕೆಟ್ ಅನ್ನು ಬಳಕೆ ಮಾಡುತ್ತವೆ. ಬೃಹತ್ ಜಾಹೀರಾತಿನ ಮೂಲಕ ಲಕ್ಷಾಂತರ ಅಭಿಮಾನಿಗಳನ್ನು ಸೃಷ್ಟಿಸುವುದು ಮತ್ತು ಆ ಜಾಹೀರಾತಿನ ಮೂಲಕ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದು ದೊಡ್ಡ ಕಂಪನಿಗಳ ಉದ್ದೇಶಪೂರ್ವಕ ಕೃತ್ಯವಾಗಿದೆ.

ಜಾಹೀರಾತು ಹಾಗೂ ಟಿಕೆಟ್ ಶುಲ್ಕದ ಹೊರತಾಗಿ ಭಾರತೀಯ ಕ್ರಿಕೆಟಿಗರ ಹೆಸರಿನ ಜೆರ್ಸಿ, ಶೂ, ಪೆನ್ನು, ಡೈರಿ, ಮಗ್ ಗಳು, ಕೀ ಚೈನ್ ಗಳು, ಟೀ ಶರ್ಟ್ ಗಳು ಇತ್ಯಾದಿಗಳು ಕಂಪನಿಗಳ ನಿರೀಕ್ಷೆಗೂ ಮೀರಿದ ಪ್ರಮಾಣದಲ್ಲಿ ಮಾರಾಟವಾಗಿವೆ.

"ಪುರುಷರ ವಿಶ್ವಕಪ್ ಕ್ರಿಕೆಟ್ ಫೈನಲ್‌ನಲ್ಲಿ ಭಾರತ ವಿರುದ್ಧ ಆಸ್ಟ್ರೇಲಿಯಾ. ಅದು ಎಲ್ಲರಿಗೂ 'ಸೂಪರ್ ಸಂಡೆ'" ಇಂತಹ ಜಾಹಿರಾತುಗಳು ಸಿನಿಮಾ ಥಿಯೇಟರ್‌ಗಳು, ರೆಸ್ಟೋರೆಂಟ್‌ಗಳು ಎಲ್ಲವೂ ಗ್ರಾಹಕರಿಲ್ಲದೆ ಬಿಕೋ ಎನ್ನುವಂತೆ ಮಾಡಿತ್ತು. ನಾಲ್ಕು ವಾರಗಳ ಪಂದ್ಯಗಳಲ್ಲಿ, ಅಭಿಮಾನಿಗಳು ನೀಲಿ ಜೆರ್ಸಿಗಳಿಗೆ ಬದಲಾಗಿದ್ದರು, ಅದು ಇಡೀ ಕ್ರೀಡಾಂಗಣವನ್ನು ಸಮುದ್ರದಂತೆ ನೀಲಿ ಬಣ್ಣಕ್ಕೆ ತಿರುಗಿಸಿತು. ಅನೇಕ ನೀಲಿ ಜರ್ಸಿಗಳು ಅಂಗಡಿಗಳಲ್ಲಿ ಮತ್ತು ಆನ್‌ಲೈನ್‌ನಲ್ಲಿ ಮಾರಾಟವಾದವು. ಮಾರಾಟದಲ್ಲಿ ನಂಬರ್ ಒನ್ ಆಗಿರುವುದು 'ಅಮೆಜಾನ್ ಫ್ಯಾಶನ್'. ಕಳೆದ ಎರಡು ಮೂರು ದಿನಗಳಲ್ಲಿ ಅಸಾಧಾರಣವಾಗಿ ಮಾರಾಟವಾಗಿದೆ ಎನ್ನುತ್ತಾರೆ ಅದರ ವಕ್ತಾರರು.

PVR INOX ಅಂತಿಮ ಲೈವ್ ಅನ್ನು 60 ಕ್ಕೂ ಹೆಚ್ಚು ನಗರಗಳಲ್ಲಿ 150 ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಪ್ರಸಾರ ಮಾಡಿದೆ. ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಕ್ರೀಡಾಭಿಮಾನಿಗಳು ಚಿತ್ರಮಂದಿರಗಳಲ್ಲಿ ಕುಳಿತು ವೀಕ್ಷಿಸಿದ್ದಾರೆ. ಅಭಿಮಾನಿಗಳಿಂದ ಭಾರೀ ಪ್ರತಿಕ್ರಿಯೆ ವ್ಯಕ್ತವಾಗಿರುವುದರಿಂದ ಮತ್ತಷ್ಟು ಚಿತ್ರಮಂದಿರಗಳಲ್ಲಿ ಸ್ಕ್ರೀನ್ ಗಳನ್ನು ಹೆಚ್ಚಿಸುವ ಅನಿವಾರ್ಯತೆ ಎದುರಾಯಿತು ಎನ್ನುತ್ತಾರೆ ಪಿವಿಆರ್ ಇನೊಕ್ಸ್ ವ್ಯವಸ್ಥಾಪಕ ನಿರ್ದೇಶಕ ಸಂಜೀವ್ ಕುಮಾರ್ ಬಿಜಿಲಿ ಅವರು.

ಚಿತ್ರಮಂದಿರಗಳಲ್ಲಿ ಮಾತ್ರವಲ್ಲದೆ, ಮತಾಂಧ ರಾಜಕೀಯ ಶಕ್ತಿಗಳು, ರಾಜಕೀಯ ಲಾಭ ಮತ್ತು ಮತಾಂಧತೆಯನ್ನು ಬಿತ್ತುವ ದೃಷ್ಟಿಯಿಂದ ಹಲವೆಡೆಗಳಲ್ಲಿ ಫೈನಲ್ ಪಂದ್ಯವನ್ನು ನೇರ ಪ್ರಸಾರ ಮಾಡುವಂತೆ ನೋಡಿಕೊಂಡರು.

–ಶಿಶಿ

ಬೆಟ್ಟಿಂಗ್ ದಂಧೆ

ಈ ಬಾರಿಯ ಫೈನಲ್ ಪಂದ್ಯಕ್ಕೆ ಸಂಬಂಧಿಸಿದಂತೆ ಬೆಟ್ಟಿಂಗ್ ದಂದೆ ವ್ಯಾಪಕವಾಗಿ ನಡೆದಿದೆ ಎಂಬ ವರದಿಗಳಿವೆ. ಈ ಬಾರಿಯೂ ಸಾವಿರಾರು ಕೋಟಿ ರೂ.ಗಳ ಬೆಟ್ಟಿಂಗ್ ವ್ಯವಹಾರ ನಡೆದಿದೆ ಎಂದು ಹೇಳಲಾಗುತ್ತಿದೆ. ವಿಶ್ವದಲ್ಲಿ 500 ಕ್ಕೂ ಹೆಚ್ಚು ವೆಬ್‌ಸೈಟ್‌ಗಳು ವಿಶ್ವಕಪ್ ಫೈನಲ್‌ನಲ್ಲಿ ಬೆಟ್ಟಿಂಗ್ ನಡೆಸಿವೆ ಎಂಬ ವರದಿಗಳಿವೆ. ಬೆಂಗಳೂರು ಸೇರಿದಂತೆ ರಾಜ್ಯದ ಕೆಲವೆಡೆಗಳಲ್ಲಿಯೂ ಬೆಟ್ಟಿಂಗ್ ದಂದೆ ನಡೆದಿರುವ ಮತ್ತು ಹಲವರನ್ನು ಪೊಲೀಸರು ವಶಕ್ಕೆ ಪಡೆದಿರುವ ವರದಿಗಳು ಬಂದಿವೆ. ಒಂದು ತಂಡದ ಸೋಲು ಅಥವಾ ಗೆಲುವಿನಲ್ಲೂ ದೊಡ್ಡ ಬೆಟ್ಟಿಂಗ್ ದಂದೆಯವರ ಕೈವಾಡವೂ ಇರುತ್ತದೆ ಎಂದು ಕೆಲವರು ಹೇಳುತ್ತಾರೆ. ಕ್ರೀಡೆಯನ್ನು ಕ್ರೀಡಾ ಮನೋಭಾವದಿಂದ ನೋಡಬೇಕಾದ ಆಟಗಳನ್ನು ವ್ಯಾಪಾರ, ಜೂಜು ಮತ್ತು ಮತಾಂಧತೆಗೆ ಬಳಕೆ ಮಾಡಿಕೊಳ್ಳುತ್ತಿರುವುದು ಒಂದು ದುರಂತವಾಗಿದೆ.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**